# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 18 ಗುರುವಾರ 2022

ಸಂಪುಟ: 43 | ಸಂಚಿಕೆ: 123 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




# ಮಾಜಿ ಸಿಎಂ ಬಿಎಸ್‌ವೈಗೆ ಡಬಲ್ ಧಮಾಕಾ

## ಕೇಂದ್ರ ಸಂಸದೀಯ ಮಂಡಳಿ, ಚುನಾವಣಾ ಸಮಿತಿ ಸದಸ್ಯರಾಗಿ ನೇಮಕ



ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯರಾಗಿ ನೇಮಕಗೊಂಡ ಮಾಜಿ ಸಿಎಂ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿನಂದಿಸಿದರು.

ಬೆಂಗಳೂರು, ಆ.17(ಕೆಎಂಶಿ)–ಮುಂಬರುವ ವಿಧಾನ ಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರಾಗಿ ಬಿಜೆಪಿ ನೇಮಕ ಮಾಡಿದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅಧ್ಯಕ್ಷತೆಯ ಮಂಡಳಿಯಲ್ಲಿ ಪ್ರಧಾನಿ ನರೇಂದ್ರಮೋದಿ, ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್, ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸೇರಿದಂತೆ ಹನ್ನೊಂದು ಮಂದಿ ಇದ್ದಾರೆ. ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರಾಗಿ ನೇಮಕಗೊಂಡಿರುವ ಯಡಿಯೂರಪ್ಪ ಇದೇ ಸಂದರ್ಭದಲ್ಲಿ ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯ ಸದಸ್ಯರಾಗಿಯೂ ನೇಮಕಗೊಂಡಿದ್ದಾರೆ. ಚುನಾವಣಾ ರಾಜಕೀಯ ನಿವೃತ್ತಿ ಘೋಷಣೆ ಮಾಡಿದ ನಂತರ ಯಡಿಯೂರಪ್ಪ ಅವರಿಗೆ ಉನ್ನತ ಹುದ್ದೆ ನೀಡಿ, ರಾಜ್ಯದಲ್ಲಿ ವೀರಶೈವ ಮತಗಳನ್ನು ಹಿಡಿದಿಟ್ಟುಕೊಳ್ಳುವ ಕೆಲಸ ಮಾಡಿದೆ. ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆ, ಪಕ್ಷದ ಸರ್ಕಾರ ರಚನೆ ಸೇರಿದಂತೆ ಪ್ರಮುಖ ನಿರ್ಧಾರಗಳನ್ನು ಈ ಮಂಡಳಿಯೇ ತೆಗೆದುಕೊಳ್ಳುತ್ತಿದೆ. ಅಂತಹ ಮಂಡಳಿಯಲ್ಲಿ ಕರ್ನಾಟಕಕ್ಕೆ ಎರಡು ಸ್ಥಾನ ದೊರೆತಿದೆ. ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಕೂಡಾ ಸಂಸದೀಯ ಮತ್ತು ಚುನಾವಣಾ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ. ▶ 8ನೇ ಪುಟಕ್ಕೆ

### ರಾಜ್ಯದಲ್ಲಿ ಬೇರೆ ಪಕ್ಷ ಅಧಿಕಾರಕ್ಕೆ ಬರಲು ಬಿಡುವುದಿಲ್ಲ

**ಬೆಂಗಳೂರು:** ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿಯಲ್ಲಿ ಸ್ಥಾನ ನೀಡಿದ ಬಿಜೆಪಿ ಹೈಕಮಾಂಡ್‌ಗೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಧನ್ಯವಾದ ಅರ್ಪಿಸಿದ್ದಾರೆ. ಈ ಸಂಬಂಧ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಯಾವುದೇ ಸ್ಥಾನಮಾನಗಳನ್ನು ನಾನು ಅಪೇಕ್ಷೆ ಪಟ್ಟಿರಲಿಲ್ಲ. ಕೇಂದ್ರ ಕೊಟ್ಟ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ. ಬಿಜೆಪಿ ಅಧಿಕಾರಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ದಕ್ಷಿಣ ಭಾರತದ ರಾಜ್ಯಗಳ ಬಗ್ಗೆಯೂ ಗಮನ ▶ 8ನೇ ಪುಟಕ್ಕೆ

### ಸಿಎಂ ಬೊಮ್ಮಾಯಿ ಸಂತಸ

**ಬೆಂಗಳೂರು:** ನಿಕಟ ಪೂರ್ವ ಮುಖ್ಯಮಂತ್ರಿ ಹಾಗೂ ರೈತ ನಾಯಕ ಬಿ.ಎಸ್.ಯಡಿಯೂರಪ್ಪ ಅವರು ಭಾರತೀಯ ಜನತಾ ಪಕ್ಷದ ಸಂಸದೀಯ ಮಂಡಳಿ ಸಭೆಯ ಸದಸ್ಯರಾಗಿರುವುದಕ್ಕೆ ನನಗೆ ಅತೀವ ಸಂತೋಷವಾಗಿದೆ. ಬಿಜೆಪಿಯ ಅತ್ಯಂತ ಉನ್ನತ ಎನಿಸಿರುವ ಸಂಸದೀಯ ಮಂಡಳಿಗೆ ಅವರನ್ನು ನೇಮಕ ಮಾಡುವುದರ ಮೂಲಕ ಪಕ್ಷ ಅವರಿಗೆ ಅತಿ ದೊಡ್ಡ ಗೌರವದ ಸ್ಥಾನ ನೀಡಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹರ್ಷ ವ್ಯಕ್ತಪಡಿಸಿದರು. ಯಡಿಯೂರಪ್ಪ ಅವರ ನೇಮಕಾತಿ ▶ 8ನೇ ಪುಟಕ್ಕೆ

# ಗಜಪಡೆಗೆ ಇಂದಿನಿಂದ ಭಾರ ಹೊರುವ ತಾಲೀಮು ಆರಂಭ

### ಅಂಬಾರಿ ಆನೆ ಅಭಿಮನ್ಯುವಿಗೆ 300 ಕೆ.ಜಿ. ತೂಕದ ಮರಳು ಮೂಟೆ ಹೊರಿಸಿ ತಾಲೀಮು



ಮೈಸೂರು, ಆ.17(ಎಂಟಿವೈ)–ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿ ಅರಮನೆ ಆವರಣದಲ್ಲಿ ವಾಸ್ತವ್ಯ ಹೂಡಿರುವ ಗಜಪಡೆಯ ನಾಯಕ ಅಭಿಮನ್ಯುವಿಗೆ ನಾಳೆ (ಆ.18) ಭಾರ ಹೊರಿಸುವ ತಾಲೀಮನ್ನು ಆರಂಭಿಸಲು ನಿರ್ಧರಿಸಲಾಗಿದೆ.

ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿರುವ 14 ಆನೆಗಳಲ್ಲಿ ಮೊದಲ ತಂಡದಲ್ಲಿ 9 ಆನೆಗಳು ಆ.7ರಂದು ಗಜ ಪಯಣದ ಮೂಲಕ ಮೈಸೂರಿಗೆ ಆಗಮಿಸಿ ಆ.10ರಂದು ಅರಮನೆಗೆ ಪ್ರವೇಶಿಸಿದವು. ಆ.14ರಿಂದ ಜಂಬೂ ಸವಾರಿ ಮಾರ್ಗದಲ್ಲಿ ತಾಲೀಮು ಆರಂಭಿಸಿದ್ದವು. ನಾಳೆಯಿಂದ (ಆ.18)ಯಿಂದ ಭಾರ ಹೊರಿಸುವ ತಾಲೀಮನ್ನು ಆರಂಭಿಸಲಾಗುತ್ತಿದೆ. ಬೆಳಗ್ಗೆ 7.45ಕ್ಕೆ ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗ ಅಭಿಮನ್ಯು ನೇತೃತ್ವದ ಆನೆಗಳಿಗೆ, ಗಾದಿ ಮತ್ತು ನಮ್ದಾ ಪೂಜೆ ಸಲ್ಲಿಸಿ ಅಭಿಮನ್ಯು ಮೇಲೆ 300 ಕೆ.ಜಿ. ▶ 8ನೇ ಪುಟಕ್ಕೆ

> “ ವಿವಿಧ ಆನೆ ಶಿಬಿರಗಳಿಂದ ಕರೆತಂದಿರುವ ಆನೆಗಳಿಗೆ ಬಂದ ದಿನವೇ ಭಾರ ಹೊರಿಸುವ ತಾಲೀಮು ನಡೆಸುವುದಕ್ಕೆ ಸಾಧ್ಯವಿಲ್ಲ. ಮೊದಲು ಜಂಬೂ ಸವಾರಿ ಮಾರ್ಗದಲ್ಲಿ ಯಾವುದೇ ಭಾರ ಹೊರಿಸದೇ ತಾಲೀಮಿಗೆ ಕರೆದೊಯ್ದು, ಮಾರ್ಗವನ್ನು ಮೈಸೂರು ನಗರದ ವಾತಾವರಣವನ್ನು ಪರಿಚಯ ಮಾಡಿಕೊಡಲಾಗಿತ್ತು. ನಾಳೆಯಿಂದ ಭಾರ ಹೊರಿಸುವ ತಾಲೀಮು ಆರಂಭಿಸಲಾಗುತ್ತದೆ. ಮೊದಲ ದಿನ ಗಜಪಡೆಯ ನಾಯಕ ಅಭಿಮನ್ಯುವಿಗೆ ಭಾರ ಹೊರಿಸಲಾಗುತ್ತದೆ. ಅಲ್ಲದೇ ತಂಡದಲ್ಲಿರುವ ಇತರ ಗಂಡಾನೆಗಳಿಗೂ ಭಾರ ಹೊರಿಸುವ ತಾಲೀಮು ನಡೆಸಲು ಉದ್ದೇಶಿಸಲಾಗಿದೆ. ಹಂತ ಹಂತವಾಗಿ ಭಾರದ ಪ್ರಮಾಣವನ್ನು ಹೆಚ್ಚಿಸಲಾಗುತ್ತದೆ. ಈ ತಾಲೀಮು ಜಂಬೂ ಸವಾರಿಯಲ್ಲಿ ಆನೆಗಳು ಸರಾಗವಾಗಿ ಹೆಜ್ಜೆ ಹಾಕಲು ಸಹಕಾರಿಯಾಗಲಿದೆ. 2ನೇ ಹಂತದ ಆನೆಗಳಿಗೂ ಭಾರ ಹೊರುವ ತಾಲೀಮು ಮುಂದುವರೆಸಲಾಗುತ್ತದೆ.
>
> – ಡಾ.ವಿ.ಕರಿಕಾಳನ್, ಡಿಸಿಎಫ್



### ಅಕ್ರಮ, ಅವ್ಯವಹಾರ ಆರೋಪ

# ತಾಂತ್ರಿಕ ಸಮಿತಿಯಿಂದ ಮುಡಾ ಕಚೇರಿಯಲ್ಲಿ ತನಿಖೆ ಆರಂಭ



ಮೈಸೂರು, ಆ.17(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಲ್ಲಿ ನಡೆದಿದೆ ಎನ್ನಲಾದ ಭಾರೀ ಅಕ್ರಮ, ಅವ್ಯವಹಾರ ಆರೋಪದ ಹಿನ್ನೆಲೆಯಲ್ಲಿ ರಚನೆಯಾಗಿರುವ ತಾಂತ್ರಿಕ ಸಮಿತಿ ಸದಸ್ಯರು ಇಂದಿನಿಂದ (ಬುಧವಾರ) ತನಿಖೆ ಆರಂಭಿಸಿದ್ದಾರೆ.

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಹೆಚ್ಚುವರಿ ನಿರ್ದೇಶಕ ಟಿ.ವಿ. ಮುರಳಿ ಅವರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ತಾಂತ್ರಿಕ ಸಮಿತಿಯ ಮೂವರು ಅಧಿಕಾರಿಗಳು ಇಂದು ಬೆಳಗ್ಗೆ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸಿ, ಜಿಲ್ಲಾಧಿಕಾರಿ ಡಾ.ಬಗಾದಿಗೌತಮ್ ಅವರನ್ನು ಡಿಸಿ ಕಚೇರಿಯಲ್ಲಿ ಭೇಟಿ ಮಾಡಿದ ನಂತರ ಮಧ್ಯಾಹ್ನ ಮುಡಾ ಕಚೇರಿಗೆ ತೆರಳಿ ತನಿಖೆ ಆರಂಭಿಸಿದರು. ಆ ಸಂದರ್ಭ ಮುಡಾ ಕಮೀಷನರ್ ಜಿ.ಟಿ.ದಿನೇಶ್‌ಕುಮಾರ್, ನಗರ ಯೋಜಕ ಸದಸ್ಯ ಶೇಷ ಅವರ ನೇತೃತ್ವದಲ್ಲಿ ಆರೋಪ ಕೇಳಿಬಂದಿರುವ ವಿಷಯದ ಕುರಿತಂತೆ ಸಂಬಂಧಪಟ್ಟ ವಿಭಾಗದ ಅಧಿಕಾರಿಗಳಿಂದ ಕಡತಗಳನ್ನು ತರಿಸಿಕೊಂಡು ಪರಿಶೀಲನೆ ನಡೆಸಿದರು. ▶ 8ನೇ ಪುಟಕ್ಕೆ

# ರಾಜ್ಯದಲ್ಲಿ ಮತ್ಸ್ಯ ಕ್ರಾಂತಿಗೆ ನಿರ್ಧಾರ

## ಕೆಆರ್‌ಎಸ್ 12 ಜಲಾಶಯಗಳಲ್ಲಿ ಮೀನು ಮರಿ ಸಾಕಾಣಿಕಾ ಕೇಂದ್ರ ಸ್ಥಾಪನೆ



ಬೆಂಗಳೂರು, ಆ. 17(ಕೆಎಂಶಿ)–ಕೋವಿಡ್–19 ಸೋಂಕಿನ ನಂತರ ಜನರಲ್ಲಿ ಪೌಷ್ಠಿಕ ಆಹಾರ ಕೊರತೆ ನೀಗಿಸಲು ಯಥೇಚ್ಚ ಮೀನು ಸರಬರಾಜು ಮಾಡಲು ಸರ್ಕಾರ ನಿರ್ಧರಿಸಿದೆ.

ಪ್ರತಿ ಗ್ರಾಮ ಮತ್ತು ನಗರ ಪಟ್ಟಣಗಳಲ್ಲೂ ವಿವಿಧ ಬಗೆಯ ಮೀನುಗಳು ಸುಲಭವಾಗಿ ದಕ್ಕುವಂತೆ ಮಾಡಲಾಗುವುದು ಎಂದು ಮೀನುಗಾರಿಕೆ ಮತ್ತು ಬಂದರು ಖಾತೆ ಸಚಿವ ಎಸ್. ಅಂಗಾರ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀನು ಮತ್ತು ಅದರ ಖಾದ್ಯಗಳು ಸುಲಭವಾಗಿ ದೊರಕಿಸಬೇಕೆಂಬ ಉದ್ದೇಶದಿಂದ ಖಾಸಗಿ ಸಹಭಾಗಿತ್ವದಲ್ಲಿ ರಾಜ್ಯಾದ್ಯಂತ ಮೀನು ಊಟದ ಹೋಟೆಲ್‌ಗಳನ್ನು ಪ್ರಾರಂಭಿಸಲಾಗುವುದು ಎಂದರು. ಕೆಆರ್‌ಎಸ್, ಆಲಮಟ್ಟಿ, ಲಿಂಗನಮಕ್ಕಿ, ಭದ್ರಾ ಸೇರಿದಂತೆ ರಾಜ್ಯದ ಹನ್ನೆರಡು ಪ್ರಮುಖ ಜಲಾಶಯಗಳಲ್ಲಿ ಗರಿಷ್ಟ ಪ್ರಮಾಣದ ಮೀನು ಉತ್ಪಾದನೆ ಮಾಡಲು ತೀರ್ಮಾನಿಸಿದೆ.

ರಾಜ್ಯದಲ್ಲಿ ಮತ್ಸ್ಯ ಕ್ರಾಂತಿ ನಡೆಯಲಿದ್ದು ಇದಕ್ಕೆ ಬೇಕಾದ ಪೂರ್ವ ತಯಾರಿಗಳನ್ನು ಮಾಡಿಕೊಂಡಿರುವುದಾಗಿ ವಿವರ ನೀಡಿದರು. ಮೀನುಗಾರಿಕಾ ಇಲಾಖೆಯ ವತಿಯಿಂದ ಬೆಂಗಳೂರು ಸೇರಿದಂತೆ ಕೆಲವು ಕಡೆ ಮೀನಿನ ಊಟದ ಹೋಟೆಲ್‌ಗಳನ್ನು ಈ ಹಿಂದೆ ಸ್ಥಾಪಿಸಲಾಗಿದೆಯಾದರೂ ಹಣಕಾಸಿನ ಕೊರತೆಯ ಹಿನ್ನೆಲೆಯಲ್ಲಿ ವಿಸ್ತರಿಸಲು ಸಾಧ್ಯವಾಗಿರಲಿಲ್ಲ. ಆದರೆ ಈಗ ಖಾಸಗಿ ಸಹಭಾಗಿತ್ವದಡಿ ಮೀನುಗಾರಿಕೆ ಇಲಾಖೆ ರಾಜ್ಯದ ಎಲ್ಲೆಡೆ ಮೀನು ಊಟದ ಮನೆಗಳನ್ನು ಪ್ರಾರಂಭಿಸಲಿದೆ ಎಂದರು. ಆರಂಭಿಕ ಹಂತದಲ್ಲಿ ಬೆಂಗಳೂರಿನ ಐದು ಕಡೆ ಮೀನುಗಾರಿಕಾ ಇಲಾಖೆಯೇ ಹೊಸ ಮೀನಿನ ಊಟದ ಹೋಟೆಲ್‌ಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದ್ದು ▶ 8ನೇ ಪುಟಕ್ಕೆ

# ಖ್ಯಾತ ಕ್ಯಾನ್ಸರ್ ವಿಕಿರಣ ತಜ್ಞ ಡಾ.ಎಂ.ಎಸ್.ವಿಶ್ವೇಶ್ವರ ಇನ್ನಿಲ್ಲ



ಮೈಸೂರು, ಆ.17(ಆರ್‌ಕೆ)–ಮೈಸೂರಿನ ಖ್ಯಾತ ಕ್ಯಾನ್ಸರ್ ವಿಕಿರಣತಜ್ಞ (ರೇಡಿಯೇಷನ್ ಆಂಕಾಲಜಿಸ್ಟ್) ಡಾ. ಎಂ.ಎಸ್. ವಿಶ್ವೇಶ್ವರ(59) ಅವರು ಇಂದು (ಬುಧವಾರ) ಮಧ್ಯಾಹ್ನ ನಿಧನರಾದರು. ಮೈಸೂರಿನ ವಿಜಯನಗರ 3ನೇ ಹಂತ ನಿವಾಸಿಯಾದ ಡಾ.ವಿಶ್ವೇಶ್ವರ ಅವರು ಪತ್ನಿ ಶ್ರೀಮತಿ ಜಲಜಾ, ಪುತ್ರ ರಾಘವ್, ಪುತ್ರಿ ಡಾ.ರಾಧಿಕಾ, ಸ್ನೇಹಿತರು, ವೈದ್ಯ ವೃಂದ, ವಿದ್ಯಾರ್ಥಿ ಬಳಗ ಹಾಗೂ ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ನಾಳೆ(ಆ.18) ಬೆಳಗ್ಗೆ 11.30 ಗಂಟೆಗೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡಿದ್ದ ಡಾ. ವಿಶ್ವೇಶ್ವರ ಅವರು, ಬೆಂಗಳೂರಿನ ಕಿದ್ವಾಯಿ ಸಂಸ್ಥೆಯಿಂದ ರೇಡಿಯೇಷನ್ ಆಂಕಾಲಜಿ ವಿಷಯದಲ್ಲಿ ಎಂಎಸ್ ಮಾಡಿದ ನಂತರ 1991 ರಿಂದ ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ವೈದ್ಯಕೀಯ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು. ಆಸ್ಪತ್ರೆಯಲ್ಲಿ ಕ್ಯಾನ್ಸರ್ ರೋಗಿಗಳಿಗೆ ಅತ್ಯಂತ ಪ್ರೀತಿಯಿಂದ ನಗು–ನಗುತ್ತಲೇ ತಮ್ಮ ವಿಶಿಷ್ಟ ಶೈಲಿಯಲ್ಲಿ ಚಿಕಿತ್ಸೆ ನೀಡುತ್ತಿದ್ದ ಅವರು, ಆತ್ಮವಿಶ್ವಾಸ ಮೂಡಿಸುತ್ತಿದ್ದರು. ಜೆಎಸ್‌ಎಸ್ ಆಸ್ಪತ್ರೆಯ ಆಂಕಾಲಜಿಸ್ಟ್ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವ ಮೂಲಕ ▶ 8ನೇ ಪುಟಕ್ಕೆ

# ಪುರಭವನದ ಆವರಣದ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡ ಡಿಸೆಂಬರ್ ವೇಳೆಗೆ ಪೂರ್ಣ

- ದಸರಾ ವೇಳೆ ತಾತ್ಕಾಲಿಕ ಪಾರ್ಕಿಂಗ್‌ಗೆ ವ್ಯವಸ್ಥೆ
- 2011ರಲ್ಲಿ ಆರಂಭವಾಗಿದ್ದ ಕಾಮಗಾರಿ
- ನೆನೆಗುದಿಗೆ ಬಿದ್ದಿದ್ದ ಕಾಮಗಾರಿ ಪೂರ್ಣಗೊಳಿಸಲು ಹೆಚ್ಚುವರಿ 5 ಕೋಟಿ.ರೂ ಮಂಜೂರು
- 18.28 ಕೋಟಿ ರೂ.ನಿಂದ ಆರಂಭವಾಗಿ 23.28 ಕೋಟಿ ರೂ. ಮೊತ್ತಕ್ಕೆ ಏರಿದ ಯೋಜನೆ



ಮೈಸೂರಿನ ಪುರ ಭವನದ ಆವರಣದಲ್ಲಿ ನಿರ್ಮಾಣ ಹಂತದಲ್ಲಿರುವ ಮಲ್ಟಿ ಲೆವೆಲ್ ಪಾರ್ಕಿಂಗ್ ಕಟ್ಟಡದ ಕಾಮಗಾರಿ ಭರದಿಂದ ಸಾಗುತ್ತಿರುವುದು.



<u>ಎಂ.ಟಿ.ಯೋಗೇಶ್‌ಕುಮಾರ್</u>

ಮೈಸೂರು, ಆ.17– ಸಾಂಸ್ಕೃತಿಕ ನಗರಿ ಮೈಸೂರಿನ ಹೃದಯ ಭಾಗದಲ್ಲಿ ವಾಹನ ನಿಲುಗಡೆಯ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯುವ ನಿಟ್ಟಿನಲ್ಲಿ 2011ರಲ್ಲಿ ಪುರಭವನದ ಆವರಣದಲ್ಲಿ 18.28 ಕೋಟಿ ರೂ ವೆಚ್ಚದಲ್ಲಿ ಆರಂಭಿಸಿದ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡ ಕಾಮಗಾರಿ ದಶಕಗಳ ಸುದೀರ್ಘ ಅವಧಿಯ ಪೂರ್ಣಗೊಳ್ಳುವ ಹಂತಕ್ಕೆ ಬಂದಿದ್ದು, ದಸರಾ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ನಿರ್ಧರಿಸಲಾಗಿದೆ. ದೇಶ–ವಿದೇಶದ ವಿವಿಧೆಡೆಯಿಂದ ಪ್ರವಾಸಿಗರನ್ನು ದಿನದಿಂದ ದಿನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುತ್ತಿರುವ ಮೈಸೂರು ನಗರದಲ್ಲಿ ವಾಹನ ದಟ್ಟಣೆ ಹೆಚ್ಚಾಗುತ್ತಿದ್ದು, ಹೃದಯ ಭಾಗದಲ್ಲಿ ವಾಹನ ನಿಲುಗಡೆಯದ್ದೇ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಕಳೆದ ಕೆಲವು ವರ್ಷಗಳಿಂದ ಪಾರ್ಕಿಂಗ್ ಸಮಸ್ಯೆ ಕಾಡಲಾರಂಭಿಸಿದ್ದು, ಪಾಲಿಕೆ ಹಾಗೂ ಪೊಲೀಸರಿಗೆ ತಲೆ ನೋವಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಪುರಭವನದ ಆವರಣದಲ್ಲಿ ▶ 8ನೇ ಪುಟಕ್ಕೆ

### 5 ಕೋಟಿ ಹೆಚ್ಚುವರಿ ಅನುದಾನ ಬಿಡುಗಡೆ

ಬಾಕಿ ಉಳಿದಿದ್ದ ಕಾಮಗಾರಿಯನ್ನು ಪೂರ್ಣಗೊಳಿಸಲು 2022ರ ಮಾರ್ಚ್‌ನಲ್ಲಿ 5 ಕೋಟಿ ರೂ. ಮೊತ್ತದ ಮುಂದುವರೆದ ಟೆಂಡರ್ ನೀಡಲಾಗಿತ್ತು. ಈ ಟೆಂಡರ್ ಅನ್ನು ಪಡೆದಿದ್ದ ಗುತ್ತಿಗೆದಾರ ಚಂದ್ರಶೇಖರ್ ಎಂಬುವರು ಇದೀಗ ಕಾಮಗಾರಿಯನ್ನು ಆರಂಭಿಸಿದ್ದು, ದ್ವಿಚಕ್ರ ವಾಹನಗಳ ನಿಲುಗಡೆಗಾಗಿ ಪಾರ್ಕಿಂಗ್ ಕಟ್ಟಡ, ಪ್ರತ್ಯೇಕ ರ್‍ಯಾಂಪ್, ಕಟ್ಟಡದ ಪ್ಲಾಸ್ಟರಿಂಗ್, ವಾಟರ್ ಪ್ರೂಫ್, ಕಟ್ಟಡಕ್ಕೆ ಸೇರುತ್ತಿದ್ದ ಮಳೆ ನೀರು ನಿಯಂತ್ರಣಕ್ಕೆ ಡ್ರೈನೇಜ್ ನಿರ್ಮಾಣ ಮಾಡುವುದಕ್ಕೆ ಗುತ್ತಿಗೆ ನೀಡಲಾಗಿದ್ದು, ಕಾಮಗಾರಿ ಭರದಿಂದ ಸಾಗುತ್ತಿದೆ.

ಡಿಸೆಂಬರ್ 2ನೇ ವಾರದೊಳಗೆ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಷರತ್ತು ವಿಧಿಸಲಾಗಿದೆ. ಒಂದು ವೇಳೆ ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಮಳೆ ಹಾವಳಿ ಹೆಚ್ಚಾದರೆ ಇನ್ನೊಂದು ತಿಂಗಳು ಕಟ್ಟಡ ಕಾಮಗಾರಿ ಪೂರ್ಣಗೊಳಿಸುವ ಅವಧಿಯನ್ನು ವಿಸ್ತರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಾಮಗಾರಿ ತ್ವರಿತ ಗತಿಯಲ್ಲಿ ನಡೆಯುತ್ತಿದೆ.



ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾಗಿ ನೇಮಕಗೊಂಡಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಮೈಲಾಕ್ ಅಧ್ಯಕ್ಷ ಆರ್.ರಘು ಅವರು ಭೇಟಿ ಮಾಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಂದೀಶ್ ಹಂಚ್ಯ, ಕೆಎಸ್‌ಆರ್‌ಟಿಸಿ ನಿಗಮದ ಮಾಜಿ ಉಪಾಧ್ಯಕ್ಷ ಈಶ್ವರಪ್ಪ ಇನ್ನಿತರರಿದ್ದರು.

## ಹೈಕೋರ್ಟ್ ಆದೇಶದಂತೆ ಲೋಕಾಯುಕ್ತ ಬಲವರ್ಧನೆಗೆ ನವ ನಿರ್ಮಾಣ ವೇದಿಕೆ ಆಗ್ರಹ



ಮೈಸೂರು,ಆ.17(ಪಿಎಂ)– ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರದ್ದುಗೊಳಿಸಿ, ಲೋಕಾಯುಕ್ತ ಸಂಸ್ಥೆಯ ಬಲವರ್ಧನೆಗೆ ಕ್ರಮ ವಹಿಸುವಂತೆ ಹೈಕೋರ್ಟ್ ನೀಡಿರುವ ತೀರ್ಪನ್ನು ಕರ್ನಾಟಕ ದಲಿತ ಚಳವಳಿ ನವನಿರ್ಮಾಣ ವೇದಿಕೆ ಸ್ವಾಗತಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಮುಖಂಡ ಹರಿಹರ ಆನಂದಸ್ವಾಮಿ, ಕೋರ್ಟ್ ತೀರ್ಪಿನಂತೆ ರಾಜ್ಯ ಸರ್ಕಾರ ಶೀಘ್ರ ಕ್ರಮ ವಹಿಸಬೇಕು. ಲೋಕಾಯುಕ್ತ ಸಂಸ್ಥೆಗೆ ಶಕ್ತಿ ತುಂಬಬೇಕು ಎಂದು ಆಗ್ರಹಿಸಿದರು. ಸರ್ಕಾರದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದ್ದ 1984ರ ಸಂದರ್ಭದಲ್ಲಿ ಅಂದಿನ ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರ ಕರ್ನಾಟಕ ಲೋಕಾಯುಕ್ತ ಕಾಯ್ದೆ ಜಾರಿಗೊಳಿಸಿ ದೇಶಕ್ಕೆ ಮಾದರಿ ಆಯಿತು. ಲೋಕಾಯುಕ್ತ ನ್ಯಾಯಮೂರ್ತಿಯಾಗಿದ್ದ ಎನ್.ವೆಂಕಟಾಚಲ ಅವರು ಸರ್ಕಾರಿ ಸಂಸ್ಥೆಗಳಲ್ಲಿ ತುಂಬಿದ್ದ ಭ್ರಷ್ಟಾಚಾರ ಬಯಲಿಗೆಳೆದರು. ಆ ಮೂಲಕ ಲೋಕಾಯುಕ್ತ ಸಂಸ್ಥೆಯ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸಿಕೊಟ್ಟರು. ಸಂತೋಷ್ ಹೆಗ್ಡೆ ಅವರ ಅವಧಿಯಲ್ಲಿಯಂತೂ ಅಂದಿನ ಮುಖ್ಯಮಂತ್ರಿ ಮತ್ತು ಸಚಿವರೂ ಜೈಲು ಪಾಲು ಆಗುವಂತಾಯಿತು ಎಂದರು.

2013ರಲ್ಲಿ ಭಾಸ್ಕರ್ ಅವರು ಲೋಕಾಯುಕ್ತ ನ್ಯಾಯಮೂರ್ತಿ ಆದಾಗ ಸಂಸ್ಥೆ ಮೇಲಿನ ಗೌರವಕ್ಕೆ ದೊಡ್ಡ ಧಕ್ಕೆಯುಂಟಾಯಿತು. ಆಗ ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯನವರು ಲೋಕಾಯುಕ್ತ ಸಂಸ್ಥೆಗೆ ಬಂದಿದ್ದ ಕಳಂಕ ಮುಂದಿಟ್ಟುಕೊಂಡು ಇದಕ್ಕೆ ಪರ್ಯಾಯವಾಗಿ ಎಸಿಬಿ ಅಸ್ತಿತ್ವಕ್ಕೆ ತಂದರು. ಇದು ಪರೋಕ್ಷವಾಗಿ ಭ್ರಷ್ಟಾಚಾರವನ್ನು ಬೆಂಬಲಿಸುವಂತಾಯಿತು. ಭ್ರಷ್ಟಾಚಾರದ ವಿರುದ್ಧ ವೇದಿಕೆ ವತಿಯಿಂದ ಶೀಘ್ರದಲ್ಲಿ ಬೃಹತ್ ಚಳವಳಿ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ರಾಜಸ್ತಾನದ ಜಾಲೋಕ್ ಜಿಲ್ಲೆಯ ಸುರಾನಾ ಗ್ರಾಮದ ಶಾಲೆಯೊಂದರಲ್ಲಿ ದಲಿತ ಬಾಲಕನ ಮೇಲೆ ಶಿಕ್ಷಕನೊಬ್ಬ ಮಾರಣಾಂತಿಕ ಹಲ್ಲೆ ನಡೆಸಿ ಬಾಲಕನ ಸಾವಿಗೆ ಕಾರಣನಾಗಿದ್ದು, ಸದರಿ ಶಿಕ್ಷಕನಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ವೇದಿಕೆ ವತಿಯಿಂದ ಆಗ್ರಹಿಸುವುದಾಗಿ ತಿಳಿಸಿದರು. ವೇದಿಕೆ ಮುಖಂಡರಾದ ಬಂಗವಾದಿ ನಾರಾಯಣಪ್ಪ, ದರ್ಶನ್, ಆದಿವಾಸಿ ಮುಖಂಡ ಕೃಷ್ಣಯ್ಯ ಮತ್ತಿತರರು ಗೋಷ್ಠಿಯಲ್ಲಿದ್ದರು.

## ಆ.26ರಂದು ಹೊಸಕೋಟೆಯಲ್ಲಿ ಆರ್‌ಪಿಐ ಕಾರ್ಯಕರ್ತರ ರಾಜ್ಯ ಸಮ್ಮೇಳನ



ಮೈಸೂರು,ಆ.17(ಪಿಎಂ)– ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠವಳೆ) ವತಿಯಿಂದ ಆ.26ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ಶ್ರೀ ಚನ್ನಭೈರೇಗೌಡ ಕ್ರೀಡಾಂಗಣದಲ್ಲಿ ಪಕ್ಷದ ಕಾರ್ಯಕರ್ತರ ರಾಜ್ಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ ಎಂ.ಮುನಿರಾಜು ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 12 ಗಂಟೆಗೆ ರಾಜ್ಯ ಸಮ್ಮೇಳನವನ್ನು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ರಾಷ್ಟ್ರೀಯ ಅಧ್ಯಕ್ಷ ರಾಂದಾಸ್ ಅಠವಳೆ ಉದ್ಘಾಟಿಸಲಿದ್ದು, ರಾಜ್ಯಾಧ್ಯಕ್ಷ ಡಾ.ಎಂ.ವೆಂಕಟಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಮ್ಮೇಳನದಲ್ಲಿ ಎಲ್ಲಾ ಜಿಲ್ಲೆಗಳಿಂದ ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಮೈಸೂರು ಜಿಲ್ಲೆಯಾದ್ಯಂತ ಸದ್ಯ 1,900 ಪಕ್ಷದ ಕಾರ್ಯಕರ್ತರಿದ್ದು, ಇಲ್ಲಿಂದಲೂ ಸಾವಿರಾರು ಮಂದಿ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದರು. ರಾಂದಾಸ್ ಅಠವಳೆ ಅವರ ನೇತೃತ್ವದಲ್ಲಿ ದೇಶದ 31 ರಾಜ್ಯಗಳಲ್ಲಿ ಪಕ್ಷ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಅದೇ ರೀತಿಯಲ್ಲಿ ರಾಜ್ಯದಲ್ಲಿಯೂ ಸಕ್ರಿಯವಾಗಿ ಎಲ್ಲಾ 31 ಜಿಲ್ಲೆಗಳಲ್ಲೂ ಕೆಲಸ ಮಾಡುತ್ತಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 10 ಲಕ್ಷ ಮಂದಿ ಸದಸ್ಯತ್ವ ಗುರಿಯೊಂದಿಗೆ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದರು.

ಅಲ್ಲದೆ, ಮುಂಬರುವ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿಯೂ ಪಕ್ಷದ ಅಭ್ಯರ್ಥಿಗಳು ಸ್ಪರ್ಧೆ ಮಾಡಲಿದ್ದಾರೆ ಎಂದರು. ಪಕ್ಷದ ಮೈಸೂರು ಜಿಲ್ಲಾಧ್ಯಕ್ಷ ಡಿ. ಶಿವಮಾದು, ಪ್ರಧಾನ ಕಾರ್ಯದರ್ಶಿ ಚಿಕ್ಕನಂಜಯ್ಯ, ಮಹಿಳಾ ಜಿಲ್ಲಾಧ್ಯಕ್ಷೆ ವಿ.ಪಿ.ಸುಶೀಲ, ಹಾಸನ ಜಿಲ್ಲಾಧ್ಯಕ್ಷ ಸತೀಶ್ ಗೋಷ್ಠಿಯಲ್ಲಿದ್ದರು.

## ಶ್ರೀ ವಿಷ್ಣು ಸಹಸ್ರನಾಮ ಪುಸ್ತಕ ಬಿಡುಗಡೆ



ಮೈಸೂರು ತಾಲೂಕು ಚಿಕ್ಕಹಳ್ಳಿಯಲ್ಲಿರುವ ಕಾಮಧೇನು ಕಲ್ಪವೃಕ್ಷ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ನಡೆದ ಆರಾಧನಾ ಮಹೋತ್ಸವದಲ್ಲಿ ಶ್ರೀ ವಿಷ್ಣು ಸಹಸ್ರನಾಮ ಪುಸ್ತಕವನ್ನು ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಎಸ್.ಸಚ್ಚಿದಾನಂದ ಮೂರ್ತಿ ಬಿಡುಗಡೆಗೊಳಿಸಿದರು. ಮಂಡಳಿ ಸದಸ್ಯೆ ವತ್ಸಲಾ ನಾಗೇಶ್, ಮಠದ ಆಡಳಿತಾಧಿಕಾರಿ ಶ್ರೀನಿವಾಸ್, ನಂ.ಶ್ರೀಕಂಠಕುಮಾರ್, ಶಂಕರನಾರಾಯಣ ಇನ್ನಿತರರು ಉಪಸ್ಥಿತರಿದ್ದರು.

## ಎನ್‌ಐಇ ಸ್ಥಾಪಕ ಅಧ್ಯಕ್ಷ ಜಿ.ಎಸ್.ರಾಮಚಂದ್ರ ನಿಧನ



ಮೈಸೂರು, ಆ. 17–ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಂಸ್ಥೆಯ ಸ್ಥಾಪಕ ಅಧ್ಯಕ್ಷರು ಹಾಗೂ ಎನ್‌ಐಇ ವ್ಯವಸ್ಥಾಪನಾ ಸಮಿತಿ ನಿರ್ದೇಶಕರಾದ ಜಿ.ಎಸ್. ರಾಮಚಂದ್ರ ಆ. 14 ರಂದು ಬೆಂಗಳೂರಿನ ಜಯನಗರದಲ್ಲಿರುವ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು. ಅವರಿಗೆ 74 ವರ್ಷ ವಯಸ್ಸಾಗಿತ್ತು.

ಎನ್‌ಐಇ ಸಂಸ್ಥೆಯ ಹಳೆ ವಿದ್ಯಾರ್ಥಿಯಾದ ಇವರು, ಬೆಂಗಳೂರಿನ ಬಿಹೆಚ್‌ಇಎಲ್‌ನಲ್ಲಿ 30 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ಉಷಾ, ಪುತ್ರರಾದ ಸಂದೀಪ್ ಮತ್ತು ಸ್ವರೂಪ್, ಪುತ್ರಿ ಸೀಮಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಗೌರಮ್ಮ



ಮೈಸೂರು, ಆ.17– ಮೈಸೂರಿನ ಹೊಸಬಂಡಿಕೇರಿ ನಿವಾಸಿ ಹಾಗೂ ಹಿರಿಯ ಪತ್ರಕರ್ತ ಕೆ.ಕೃಷ್ಣಕುಮಾರ್(ಕೆಕೆ) ಅವರ ತಾಯಿ ಗೌರಮ್ಮ (93) ಬುಧವಾರ ನಿಧನರಾದರು. ಮೃತರು ಐವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಆ.18) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ

ಮೈಸೂರು, ಆ.17– ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆಯನ್ನು ಆ.21ರ ಭಾನುವಾರ ಬೆಳಗ್ಗೆ 9.30 ಗಂಟೆಗೆ ಸರಸ್ವತಿಪುರಂ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಸಮಾರಂಭವನ್ನು ಕೈಗಾರಿಕೋದ್ಯಮಿ ಕೆ.ವಿ.ಅನಂತಶಯನ ಉದ್ಘಾಟಿಸಲಿದ್ದಾರೆ. 'ಚುನಾವಣಾ ಸಮಯದಲ್ಲಿ ರಾಜಕೀಯ ಪಕ್ಷಗಳು ಘೋಷಿಸುವ ಉಚಿತ ಭಾಗ್ಯಗಳು ದೇಶದ ಅಭಿವೃದ್ಧಿಗೆ ಮಾರಕ' ಚರ್ಚಾ ವಿಷಯವಾಗಿದ್ದು, ಚಾರ್ಟೆಡ್ ಅಕೌಂಟೆಂಟ್ ಎ.ವಿಶ್ವನಾಥ್ ವಿಷಯ ಸೂಚಕರಾಗಿದ್ದಾರೆ. ಪ್ರಥಮ ಬಹುಮಾನ 3 ಸಾವಿರ ರೂ., ದ್ವಿತೀಯ ಬಹುಮಾನ 2 ಸಾವಿರ, ತೃತೀಯ ಬಹುಮಾನ ಸಾವಿರ ಹಾಗೂ ಸಮಾಧಾನಕರ (2) ತಲಾ 500 ರೂ. ವಿಜೇತ ಶಾಲೆಗೆ ಆಕರ್ಷ ಪಾರಿತೋಷಕ ನೀಡಲಾಗುವುದು. ಹೆಚ್ಚಿನ ವಿಷಯಗಳಿಗೆ ಆಯಾಯ ಶಾಲೆಯ ಮುಖ್ಯಸ್ಥರನ್ನು ಭೇಟಿಯಾಗುವುದೆಂದು ಸೆಂಟರ್‌ನ ಎನ್.ವಿ.ದಿನೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀ ಕೃಷ್ಣ ಜನ್ಮಾಷ್ಟಮಿ, ಶ್ರೀ ಕೃಷ್ಣ ಲೀಲೋತ್ಸವ

ಮೈಸೂರು, ಆ. 17– ಮೈಸೂರಿನ ಶ್ರೀ ಕೃಷ್ಣ ಮಿತ್ರ ಮಂಡಳಿ ಹಾಗೂ ಶ್ರೀ ಕೃಷ್ಣ ಟ್ರಸ್ಟ್ ವತಿಯಿಂದ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಆ. 20 ರಂದು ಶ್ರೀ ಕೃಷ್ಣ ಜನ್ಮಾಷ್ಟಮಿ ಮತ್ತು ಶ್ರೀ ಕೃಷ್ಣ ಲೀಲೋತ್ಸವ ಏರ್ಪಡಿಸಲಾಗಿದೆ.

ಚಿಣ್ಣರ ಛದ್ಮ ವೇಷ ಸ್ಪರ್ಧೆ (1 ರಿಂದ 12 ವರ್ಷದ ಮಕ್ಕಳಿಗೆ, ಮಧ್ಯಾಹ್ನ 1.30 ರಿಂದ 4.30ರವರೆಗೆ). ರಾಜಬೀದಿಯಲ್ಲಿ ಶ್ರೀ ಕೃಷ್ಣನ ಮೆರವಣಿಗೆ ಮತ್ತು ಮೊಸರು ಕುಡಿಕೆ (ಸಂಜೆ 4.30ರಿಂದ 5.30ರವರೆಗೆ)

ಸಂಜೆ 5.30 ರಿಂದ ಶ್ರೀ ಪಳ್ಳಿ ಪಟ್ಟಣ್ಣ ಭಟ್ ಅವರಿಂದ ಉತ್ಸವಮೂರ್ತಿ ದರ್ಶನ

ಮಾಹಿತಿಗೆ ದೂ. 0821–2544004, ಮೊ. 9481322340 ಸಂಪರ್ಕಿಸಬಹುದು.

'ಕೋವಿಡ್ ನಂತರ, ಮಕ್ಕಳ ಸಮಸ್ಯೆಗಳ ಕುರಿತ ಪತ್ರಕರ್ತರಿಗೆ ದೃಷ್ಟಿಕೋನ' ಎರಡು ದಿನಗಳ ಕಾರ್ಯಾಗಾರಕ್ಕೆ ಚಾಲನೆ

# ಮಕ್ಕಳ ಭವಿಷ್ಯ ರೂಪಿಸುವುದು ಪತ್ರಿಕೋದ್ಯಮದ ಬಹು ದೊಡ್ಡ ಜವಾಬ್ದಾರಿ...



ಯುನಿಸೆಫ್ ಹಾಗೂ ಮೈಸೂರು ವಿವಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಯೋಜಿಸಿರುವ 'ಕೋವಿಡ್ ನಂತರ ಮತ್ತು ಮಕ್ಕಳ ಸಮಸ್ಯೆಗಳ ಕುರಿತು ಪತ್ರಕರ್ತರಿಗೆ ದೃಷ್ಟಿಕೋನ' ಎರಡು ದಿನಗಳ ಕಾರ್ಯಾಗಾರವನ್ನು ಕುಲಸಚಿವ ಪ್ರೊ.ಆರ್.ಶಿವಪ್ಪ ಉದ್ಘಾಟಿಸಿದರು. ಚಿತ್ರದಲ್ಲಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ.ಸಿ.ಕೆ.ಪುಟ್ಟಸ್ವಾಮಿ, ಪತ್ರಕರ್ತ ಈಶ್ವರ ದೈತೋಟ, ಯುನಿಸೆಫ್‌ನ ಪ್ರೋಸನ್ ಸೇನ್, ಪ್ರೊ.ಎಂ.ಎಸ್.ಸಪ್ನಾ, ಪ್ರೊ.ಎಂ.ಮಮತಾ ಇನ್ನಿತರರನ್ನು ಕಾಣಬಹುದು.

ಮೈಸೂರು, ಆ.17(ಆರ್‌ಕೆಬಿ)– ಮಕ್ಕಳ ಭವಿಷ್ಯವು ಪ್ರತಿಯೊಬ್ಬರಿಗೂ ಕಾಳಜಿಯ ವಿಷಯವಾಗಿದೆ. ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಪತ್ರಿಕೋದ್ಯಮಕ್ಕೆ ಬಹು ದೊಡ್ಡ ಜವಾಬ್ದಾರಿ ಇದೆ. ಮಕ್ಕಳ ಬಗ್ಗೆ ಬರೆಯುವಾಗ ಪತ್ರಕರ್ತರು ಹೆಚ್ಚು ಜಾಗರೂಕತೆ ವಹಿಸಬೇಕು. ಮಕ್ಕಳು ಕೆಟ್ಟ ಪ್ರಭಾವಕ್ಕೆ ಒಳಗಾಗದಂತೆ ನೋಡಿಕೊಳ್ಳುವುದು ಅತೀ ಮುಖ್ಯ ಎಂದು ಪತ್ರಕರ್ತ ಈಶ್ವರ ದೈತೋಟ ತಿಳಿಸಿದರು.

ಯುನಿಸೆಫ್ ಹಾಗೂ ಮೈಸೂರು ವಿವಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಯೋಜಿಸಿರುವ 'ಕೋವಿಡ್ ನಂತರ ಮತ್ತು ಮಕ್ಕಳ ಸಮಸ್ಯೆಗಳ ಕುರಿತು ಪತ್ರಕರ್ತರಿಗೆ ದೃಷ್ಟಿಕೋನ' ಎರಡು ದಿನಗಳ ಕಾರ್ಯಾಗಾರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಕ್ಕಳ ವಿಚಾರದಲ್ಲಿ ಮಾಧ್ಯಮಗಳ ಜವಾಬ್ದಾರಿ ಹೆಚ್ಚಿನದಾಗಿದ್ದು, ಉತ್ತಮ ಮಕ್ಕಳನ್ನು ಸಮಾಜಕ್ಕೆ ಕೊಡುಗೆ ನೀಡುವ ಜವಾಬ್ದಾರಿ ತಮ್ಮದು ಎಂಬ ಭಾವನೆಯನ್ನು ಪತ್ರಕರ್ತರು ಮೂಡಿಸಿಕೊಳ್ಳಬೇಕಿದೆ. ಮಕ್ಕಳ ಭವಿಷ್ಯದ ಬಗ್ಗೆ ಪತ್ರಕರ್ತರಿಗೆ ಎಷ್ಟು ಕಾಳಜಿ ಇರಬೇಕು ಎಂಬುದರ ಬಗ್ಗೆ ಈ ಕಾರ್ಯಾಗಾರ ಹೆಚ್ಚು ಉಪಯುಕ್ತವಾಗಲಿದೆ ಎಂದು ತಿಳಿಸಿದರು.

ಕಾರ್ಯಾಗಾರಕ್ಕೆ ಚಾಲನೆ ನೀಡಿದ ಮೈಸೂರು ವಿವಿ ಕುಲಸಚಿವ ಪ್ರೊ. ಆರ್.ಶಿವಪ್ಪ ಮಾತನಾಡಿ, ಸಮಾಜ ಕಟ್ಟಲು ಶ್ರಮಿಸಿದ ಹಿರಿಯರನ್ನು ಹಾಗೂ ಭವಿಷ್ಯದ ಸಮಾಜ ನಿರ್ಮಿಸುವ ಮಕ್ಕಳನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬಾರದು. ಈ ಇಬ್ಬರ ಜವಾಬ್ದಾರಿ ಮಧ್ಯ ವಯಸ್ಕರಾದ ನಮ್ಮ ಮೇಲಿದೆ ಎಂದು ಅಭಿಪ್ರಾಯಪಟ್ಟರು. ಕೋವಿಡ್ ತಲ್ಲಣಗಳ ಬಗ್ಗೆ ನಾವು ಅರ್ಥ ಮಾಡಿಕೊಳ್ಳಬೇಕಿದೆ. ಕೋವಿಡ್ ಸಂದರ್ಭದಲ್ಲಿ ಕೋವಿಡ್ ರೋಗಿಗಳನ್ನು ಅಸ್ಪೃಶ್ಯರಂತೆ ಕಾಣಲಾಗುತ್ತಿತ್ತು. ಇದು ಜೀವಮಾನದಲ್ಲಿ ನೋಡದ ಅನುಭವವನ್ನು ನಾವೆಲ್ಲರೂ ಕಂಡಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸ್ತುತ ದಿನಗಳಲ್ಲಿ ಮಕ್ಕಳಲ್ಲಿ ಕುಸಿಯುತ್ತಿರುವ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವುದು ಪತ್ರಕರ್ತರ ಜವಾಬ್ದಾರಿಯಾಗಿದೆ ಎಂದ ಅವರು, ನಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳುವುದು ಈಗ ದೊಡ್ಡ ಸವಾಲಾಗಿ ಪರಿಣಮಿಸಿದೆ. ಹಿರಿಯರು ಕಟ್ಟಿಕೊಟ್ಟಿರುವ ಮೌಲ್ಯಗಳನ್ನು ಕಳೆದುಕೊಳ್ಳುವ ಸ್ಥಿತ್ಯಂತರ ಕಾಲಘಟ್ಟದಲ್ಲಿ ನಾವಿದ್ದೇವೆ. ದಿನೇ ದಿನೆ ಮೌಲ್ಯಗಳುನ್ನು ಕಳೆದುಕೊಳ್ಳುವ ಸ್ಥಿತ್ಯಂತರದಲ್ಲಿ ನಾವಿದ್ದೇವೆ. ಇವುಗಳ ಮನನ ಮಡಿಕೊಳ್ಳಲೆಂದೇ ಪತ್ರಕರ್ತರಿಗೆ ಈ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಹೇಳಿದರು.

ನಮ್ಮ ಮಕ್ಕಳು ಯಾವ ವಿಷಯಗಳನ್ನು ಓದಬೇಕು ಮತ್ತು ಯಾವ ವಿಷಯಗಳು ಹೆಚ್ಚು ಉಪಯುಕ್ತವಾಗಿವೆ ಎಂಬುದರ ಕುರಿತು ನಾವು ಹೆಚ್ಚು ಕಾಳಜಿ ವಹಿಸುವ ಪರಿಸ್ಥಿತಿಯಲ್ಲಿದ್ದೇವೆ. ಇಂತಹ ಸಂದರ್ಭದಲ್ಲಿ ಪತ್ರಕರ್ತರು ಹೊಣೆಗಾರಿಕೆ ಅರಿತು ಕೆಲಸ ನಿರ್ವಹಿಸಬೇಕಾಗುತ್ತದೆ ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾಗಿದ್ದ ಹೈದರಾಬಾದ್ ಯುನಿಸೆಫ್‌ನ ತಜ್ಞ ಪ್ರೊಸೂನ್ ಸೇನ್ ಮಾತನಾಡಿ, ಇಂದಿನ ಮಕ್ಕಳಿಗೆ ಪೌಷ್ಟಿಕ ಆಹಾರದ ಕೊರತೆಯಿದೆ. ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ, ಮಕ್ಕಳು ತುಂಬಾ ಕಠಿಣ ಸಮಯವನ್ನು ಹೊಂದಿದ್ದರು ಮತ್ತು ತಮ್ಮ ಮಕ್ಕಳನ್ನು ಸಾಂಕ್ರಾಮಿಕ ರೋಗದಿಂದ ರಕ್ಷಿಸುವುದು ಪೋಷಕರಿಗೆ ದೊಡ್ಡ ಸವಾಲಾಗಿ ಪರಿಣಮಿಸಿತ್ತು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ.ಸಿ.ಕೆ.ಪುಟ್ಟಸ್ವಾಮಿ, ಪ್ರೊ.ಎಂ.ಎಸ್.ಸಪ್ನಾ, ಪ್ರೊ.ಎಂ.ಮಮತಾ ಇನ್ನಿತರರು ಉಪಸ್ಥಿತರಿದ್ದರು.

ಆಜಾದಿ ಕಾ ಅಮೃತ್ ಮಹೋತ್ಸವ್ ಅಮೃತ ಸರೋವರ ಯೋಜನೆಯಡಿ

# ಮೈಸೂರು ಜಿಲ್ಲೆಯ 21 ಕೆರೆಗಳಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರು, ಆ.16(ಆರ್‌ಕೆ)–ಮೈಸೂರು ಜಿಲ್ಲೆಯಾದ್ಯಂತ 21 ಕೆರೆಗಳಲ್ಲಿ ಸೋಮವಾರ 75ನೇ ಸ್ವಾತಂತ್ರ್ಯೋತ್ಸವವನ್ನು ಸಂತಸ–ಸಡಗರದಿಂದ ಏಕ ಕಾಲದಲ್ಲಿ ಆಚರಿಸಲಾಯಿತು.

ಮೈಸೂರು ಜಿಲ್ಲಾ ಪಂಚಾಯ್ತಿ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಗ್ರಾಮೀಣ ಭಾಗದ ಜಲ ಮೂಲಗಳನ್ನು ರಕ್ಷಿಸಲು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳಲಾದ 'ಅಮೃತ ಸರೋವರ' ಕಾರ್ಯಕ್ರಮದಡಿ ಜಿಲ್ಲೆಯ 21 ಕೆರೆ ದಂಡೆಗಳಲ್ಲಿ ಧ್ವಜಾರೋಹಣ ನೆರವೇರಿಸುವ ಮೂಲಕ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು.

ಮೈಸೂರು ತಾಲೂಕಿನ ದಡದಕಲ್ಲಹಳ್ಳಿ ಗ್ರಾಮದ ಬಚ್ಚಲಗೆರೆ, ಮಾದಳ್ಳಿ ಕೆರೆ, ಕುಮಾರ ಬೀಡು ಗ್ರಾಮದ ಗೆಂಡೆಕೆರೆ, ನಗರ್ತಳ್ಳಿ ಕೆರೆದಂಡೆಗಳಲ್ಲಿ ಹುತಾತ್ಮ ಕುಟುಂಬದವರಿಂದ ಧ್ವಜಾರೋಹಣ ನೆರವೇರಿಸಲಾಯಿತಲ್ಲದೆ, ಗ್ರಾಮದ ಹಿರಿಯರನ್ನು ಆಯಾ ಗ್ರಾಮ ಪಂಚಾಯ್ತಿ ವತಿಯಿಂದ ಸನ್ಮಾನಿಸಲಾಯಿತು ಎಂದು ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ ತಿಳಿಸಿದರು.

> ಎಲ್ಲಾ ತಾಲೂಕುಗಳ ಕಾರ್ಯ ನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿ, ಹಿರಿಯರು ಹಾಗೂ ಗ್ರಾಮಸ್ಥರು ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸರ್ಕಾರದ ಸೂಚನೆ ಮೇರೆಗೆ ಅಮೃತ ಸರೋವರ ಯೋಜನೆಯಡಿ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಮೂಲಕ ಕೆರೆಗಳನ್ನು ಪುನರುಜ್ಜೀವನಗೊಳಿಸಿ ಅಂತರ್ಜಲ ಅಭಿವೃದ್ಧಿ, ಗ್ರಾಮೀಣ ಜಲ ಭದ್ರತೆಗೆ ಧಕ್ಕೆಯಾಗದಂತೆ ಗಮನ ಹರಿಸಿದ್ದರ ಪರಿಣಾಮ 'ಅಮೃತ ಸರೋವರ' ಆಚರಣೆಗೆ ಜಿಲ್ಲೆಯ ಎಲ್ಲಾ ತಾಲೂಕಿನ ಕೆರೆ ದಂಡೆಯಲ್ಲಿ ಧ್ವಜಾರೋಹಣ ನೆರವೇರಿಸುವ ಮೂಲಕ 75ನೇ ಸ್ವಾತಂತ್ರ್ಯೋತ್ಸವವನ್ನು ಅರ್ಥ ಪೂರ್ಣವಾಗಿ ಆಚರಿಸಲಾಯಿತು.
> –ಬಿ.ಆರ್.ಪೂರ್ಣಿಮಾ, ಸಿಇಓ, ಜಿಪಂ.

ನಂಜನಗೂಡು ತಾಲೂಕಿನ ಕಾಮನಹಳ್ಳಿ ಕೆರೆ, ರಾಮಯ್ಯನಕಟ್ಟೆ ಕೆರೆ, ಪಿರಿಯಾಪಟ್ಟಣ ತಾಲೂಕಿನ ಕುಡುಕೂರು ಗ್ರಾಮದ ಹೊಸಕೆರೆ, ಅಕ್ಕೈಕಟ್ಟೆ,



ಕೆ.ಆರ್.ನಗರ ತಾಲೂಕಿನ ಕಾಳಮ್ಮನ ಕೊಪ್ಪಲು ಗ್ರಾಮದ ಮುಂದಲ ಹೊಸಕಟ್ಟೆ ಕೆರೆ, ಬೆಟ್ಟಹಳ್ಳಿ ಗ್ರಾಮದ ಹೊಸಕೆರೆ, ತಿ.ನರಸೀಪುರ ತಾಲೂಕಿನ ಕಾರುಗಹಳ್ಳಿಯ ಗುಜ್ಜಗೆರೆ ಕೆರೆ, ಹೊರಳಗಳ್ಳಿ ಗ್ರಾಮದ ಹುಲಿಕೆರೆ, ಹೆಚ್.ಡಿ.ಕೋಟೆ ತಾಲೂಕಿನ ಕೆ.ಜಿ.ಹುಂಡಿ ಕೆರೆ, ಕೊಡಸೀಗೆ ಕೆರೆ, ಸರಗೂರು ತಾಲೂಕಿನ ಕಾಟವಾಳು ಕೆರೆದಂಡೆಗಳಲ್ಲಿ ಆಯಾ ಗ್ರಾಮದ ಹಿರಿಯರಿಂದ ಧ್ವಜಾರೋಹಣ ಮಾಡಿಸಲಾಯಿತು ಎಂದು ಅವರು ತಿಳಿಸಿದರು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**18.08.2022 ಗುರುವಾರ, ಮಳೆ ನಕ್ಷತ್ರ : ಮಳೆ 17.08.2022 ರಿಂದ 30.08.2022**
**ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,**
**ತಿಥಿ: ಸಪ್ತಮೀ, ನಕ್ಷತ್ರ : ಭರಣಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ**

■ **ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಯುವ ನಿಸರ್ಗ ಚಿತ್ರ ಕಲಾವಿದರಿಂದ ವರ್ಷಧಾರೆ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.

■ **ಶೇಷಾದ್ರಿಪುರಂ ಪದವಿ ಕಾಲೇಜು :** ಕಲಾ ವೈಭವ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ. ಗೋಪಿನಾಥ್, ಅಧ್ಯಕ್ಷತೆ : ಕಾಲೇಜು ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಗೌರವ ಅತಿಥಿಗಳು : ಕಾರ್ಯದರ್ಶಿ ಡಾ. ಉದಯ್ ಪಿ. ಕೃಷ್ಣ, ಸ್ಥಳ: ಕುವೆಂಪು ರಂಗಮಂದಿರ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು :** ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರಿಗೆ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ, ಉದ್ಘಾಟನೆ : ನಿರ್ದೇಶಕ ಬಿ.ಹೆಚ್. ಕೃಷ್ಣಾರೆಡ್ಡಿ, ಅಧ್ಯಕ್ಷತೆ : ನಿರ್ದೇಶಕ ಎಸ್.ಕೆ. ಮಂಜುನಾಥ್, ಸ್ಥಳ : ಗ್ರೀನ್ ಹೆರಿಟೇಜ್ ಹೋಟೆಲ್ ಸಭಾಂಗಣ, ಬೆಳಗ್ಗೆ 12.30ಕ್ಕೆ.

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ :** ಗಿಡಮೂಲಿಕೋತ್ಸವ (ಮೂಲಿಕಾಥಾನ್) ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಉದ್ಘಾಟನೆ : ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್, ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಶ್ರೀಹರಿ, ಡಾ. ಎನ್. ಆಂಜನೇಯಮೂರ್ತಿ, ಅಧ್ಯಕ್ಷತೆ : ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಗಜಾನನ ಹೆಗಡೆ, ಸ್ಥಳ: ನಾದ ಮಂಟಪ, ಗಣಪತಿ ಸಚ್ಚಿದಾನಂದ ಆಶ್ರಮ, ಬೆಳಗ್ಗೆ 10.30ಕ್ಕೆ.

■ **ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವ ಸಮಿತಿ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾ ಕ್ಷೇತ್ರದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಉದ್ಘಾಟನೆ: ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಅಧ್ಯಕ್ಷತೆ : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ. ರಾಮದಾಸ್, ಸ್ಥಳ: ಶ್ರೀ ಸುತ್ತೂರು ಮಠ(ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು, ಬೆಳಗ್ಗೆ 11ಕ್ಕೆ.

■ **ಡಾ. ಪಿ. ಜಯರಾಮಯ್ಯ ಅಭಿಮಾನಿಗಳ ಬಳಗ :** ಡಾ. ಪಿ. ಜಯರಾಮಯ್ಯ ಒಬ್ಬ ವ್ಯಕ್ತಿಯಲ್ಲ ಶಕ್ತಿ ಸ್ಮರಣ ಸಂಚಿಕೆ–2022, ಇ–ಪುಸ್ತಕ, ಸಾಕ್ಷ್ಯ ಚಿತ್ರೀಕರಣದ ಮುಹೂರ್ತ ಸಮಾರಂಭ, ಅಧ್ಯಕ್ಷತೆ : ವಿಶ್ರಾಂತ ವಿಶೇಷ ಕಾರ್ಯದರ್ಶಿ ಡಾ.ಪಿ. ಬೋರೇಗೌಡ, ಪುಸ್ತಕ ಬಿಡುಗಡೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ಮಾಜಿ ಶಾಸಕ ವಾಸು, ಇ–ಪುಸ್ತಕ ಬಿಡುಗಡೆ : ವಿಧಾನ ಪರಿಷತ್ ಸದಸ್ಯ ಮಧು ಜಿ. ಮಾದೇಗೌಡ, ಡಾ. ಎಸ್.ಟಿ. ಪುಟ್ಟರಾಜು, ಸಾಕ್ಷ್ಯಚಿತ್ರ ಚಾಲನೆ : ಶಾಸಕ ಸಿ.ಎಸ್. ಪುಟ್ಟರಾಜು, ವಿಶ್ರಾಂತ ಪ್ರಾಂಶುಪಾಲ ಪ್ರೊ. ಎಂ. ಕೃಷ್ಣೇಗೌಡ, ಮುಖ್ಯ ಅತಿಥಿಗಳು : ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ. ಕೆ.ಎಸ್. ರಂಗಪ್ಪ, ಪ್ರಸಾರಾಂಗ ಮಾಜಿ ನಿರ್ದೇಶಕ ಪ್ರೊ.ಕೆ.ಟಿ. ವೀರಪ್ಪ, ಮಾಜಿ ಮೇಯರ್ ಪಿ. ವಿಶ್ವನಾಥ್, ಸ್ಥಳ: ಪೈ ವಿಸ್ಟಾ ಹೋಟೆಲ್, ಬೆಳಗ್ಗೆ 11ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಶರಣ ಸಂಸ್ಕೃತಿ ಕುರಿತು ಪ್ರವಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

**ಸುತ್ತೂರಿನಲ್ಲಿಂದು**

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ : ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ವಾಚನ : ಜೆಎಸ್‌ಎಸ್ ಪ್ರೌಢಶಾಲೆ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

**ಕಣೆಯನಹುಂಡಿ ಗ್ರಾಮದಲ್ಲಿಂದು**

■ **ನಾಡಪ್ರಭು ಕೆಂಪೇಗೌಡರ ಯುವಕರ ಸಂಘ :** ಸಾನ್ನಿಧ್ಯ : ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಅನಿಲ್ ಚಿಕ್ಕಮಾದು, ಉದ್ಘಾಟನೆ : ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಉಪಸ್ಥಿತರು : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಪ್ರೊ. ನೀ. ಗಿರಿಗೌಡ, ಬೆಳಗ್ಗೆ 10.30ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ಜಯಂತಿ ವಿ. ಭಟ್ ಮತ್ತು ಎಂ.ಆರ್. ಸುಧಾ, ವ್ಯಾಖ್ಯಾನ– ಡಾ. ಬೋರೇಗೌಡ ಚಿಕ್ಕ ಮರಳಿ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ನೈವೇಲಿ ಸಂತಾನ ಗೋಪಾಲನ್– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

**ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಎ.ಎನ್.ಶೀಲಾ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ, 3.00 ರಾಗಲಹರಿ, ಪ್ರಸ್ತುತಿ–ಜಿ.ಪುಷ್ಪಲತಾ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಹಳ್ಳಿಹಾಡು–ಭಾಗವಹಿಸುವವರು ಬನ್ನೂರು ಕೆಂಪಮ್ಮ ಮತ್ತು ಸಂಗಡಿಗರು, 4.30 ರಸಮಂಜರಿ–ಸಂಸ್ಕೃತ ಎಂದರೆ, ಹಿರಿಯ ಸಂಸ್ಕೃತ ವಿದ್ವಾಂಸರಾದ ಡಾ. ಹೆಚ್.ವಿ.ನಾಗರಾಜರಾವ್ ಅವರಿಂದ ಸೋದಾಹರಣ ಭಾಷಣ, 6.50 ಕೃಷಿರಂಗ– ಕಿಸಾನ್‌ವಾಣಿ– ಸಿರಿಧಾನ್ಯಗಳ ಕೃಷಿ ಮೌಲ್ಯವರ್ಧನೆ ಹಾಗೂ ಮಾರಾಟದಲ್ಲಿನ ಅನುಭವ ಕುರಿತು ಬಿ.ಮಹೇಶ್ ಕುಮಾರ್ ಮತ್ತು ಸೌಮ್ಯ ಅವರೊಂದಿಗೆ ಮಾತುಕತೆ, 9.00 ಯುವವಾಣಿ–ಗ್ರಾಮೀಣ ಆರೋಗ್ಯ ರಕ್ಷಣೆಯಲ್ಲಿ ಆಯುರ್ವೇದ ವೈದ್ಯಕೀಯ ವಿದ್ಯಾರ್ಥಿಗಳ ಪಾತ್ರ ಕುರಿತು ಮಾತೆಕತೆಯಲ್ಲಿ ಭಾಗವಹಿಸುತ್ತಾರೆ ಡಾ.ಹಿತೇಶ್ ಪ್ರಸಾದ್, ಸಂಜನಾ ಎನ್., ರೇವಂತ್ ಕುಮಾರ್ ಡಿ. ಮತ್ತು ರೋಜಾ, 10.00 ನಾಟಕ–ಆತ್ಮಸಾಕ್ಷಿಯ ಬೆನ್ನು ಹತ್ತಿ ರಚನೆ ಹಾಗೂ ನಿರ್ಮಾಣ– ಪ್ರಭುಸ್ವಾಮಿ ಮಳಿಮಠ

ಸ್ವಾತಂತ್ರ್ಯ ಅಮೃತೋತ್ಸವ



ಮೈಸೂರಿನ ಶಾರದಾದೇವಿನಗರದಲ್ಲಿರುವ ಕೋವೈ ಕೇರ್ ತಪೋವನ್ ಸೋಲಾಸ್ ಅಪಾರ್ಟ್‌ಮೆಂಟ್ ನಿವಾಸಿಗಳು ಸ್ವಾತಂತ್ರ್ಯ ಅಮೃತೋತ್ಸವವನ್ನು ಸಂಭ್ರಮದಿಂದ ಆಚರಿಸಿದರು. ಅಪಾರ್ಟ್‌ಮೆಂಟ್‌ನ ಹಿರಿಯ ದಂಪತಿ ಬಿ.ಆರ್.ಪ್ರಸನ್ನ ಮತ್ತು ಪದ್ಮಾವತಿ ಅವರು ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಸ್ವಾತಂತ್ರ್ಯ ಸಂಗ್ರಾಮದ ಪ್ರತ್ಯಕ್ಷದರ್ಶಿಗಳು ಸೇರಿದಂತೆ ಅಪಾರ್ಟ್‌ಮೆಂಟ್‌ನ ಎಲ್ಲಾ ನಿವಾಸಿಗಳೂ ಉಪಸ್ಥಿತರಿದ್ದರು.

## ಆ.21, ಮುಖ್ಯಮಂತ್ರಿಗಳಿಂದ ಶ್ರೀ ತ್ರಿಪುರ ಸುಂದರಿ ಅಮ್ಮನವರ ರಾಜಗೋಪುರ ಉದ್ಘಾಟನೆ

### ಜಿಲ್ಲಾಧಿಕಾರಿಗಳಿಂದ ಸಿದ್ಧತೆ ಪರಿಶೀಲನೆ



ಮೂಗೂರು, ಆ.17– ತಿ.ನರಸೀಪುರ ತಾಲೂಕಿನ ಮೂಗೂರು ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದ ರಾಜಗೋಪುರ, ನೂತನ ರಥ, ಕಲ್ಯಾಣಿ, ಶ್ರೀ ಬೀರೇಶ್ವರ ಸ್ವಾಮಿ ದೇಗುಲವನ್ನು ಆ.21ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಲಿದ್ದು, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಲ್ಲಾಡಳಿತದ ವತಿಯಿಂದ ನಡೆಯುವ ಈ ಕಾರ್ಯಕ್ರಮದ ಸಿದ್ಧತೆಯನ್ನು ಪರಿಶೀಲಿಸಿದ ಅವರು, ಎಲ್ಲಾ ಕಾರ್ಯಕ್ರಮಗಳು ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಕ್ರಮ ಜರುಗಿಸಲಾಗುವುದು ಎಂದು ಸುದ್ದಿಗಾರರಿಗೆ ತಿಳಿಸಿದರು. ಈ ವೇಳೆ ಸ್ಥಳೀಯ ನಿವಾಸಿಗಳು ಜಿಲ್ಲಾಧಿಕಾರಿಗಳನ್ನು ಸುತ್ತುವರೆದು ಗ್ರಾಮದ ಸಮಸ್ಯೆಗಳ ಬಗ್ಗೆ ಗಮನ ಸೆಳೆದರು. ಈ ಬಗ್ಗೆ ಕ್ರಮ ಜರುಗಿಸುವಂತೆ ತಮ್ಮ ಜೊತೆಯಲ್ಲಿದ್ದ ಅಧಿಕಾರಿಗಳಿಗೆ ಅವರು ಸೂಚಿಸಿದರು. ತಹಸೀಲ್ದಾರ್ ಸಿ.ಜಿ.ಗೀತಾ, ಉಪ ತಹಸೀಲ್ದಾರ್ ಲಕ್ಷ್ಮೀ, ತಾಪಂ ಮಾಜಿ ಸದಸ್ಯ ಎಂ.ಚಂದ್ರಶೇಖರ್, ಪಾರುಪತ್ತೇದಾರ ಸಾಗರ್, ಪಿಡಬ್ಲ್ಯೂಡಿ ಎಇಇ ನಟೇಶ್, ಎಇ ಶಬರೀಶ್, ಮುಜರಾಯಿ ಇಲಾಖೆ ಕಿರಣ್, ಎಂ.ಪಿ. ನಾಗರಾಜು, ಮುಖಂಡರಾದ ಎಂ.ಕೆ.ಸಿದ್ದರಾಜು, ಎಂ.ಪಿ.ಮರಿಸ್ವಾಮಿ, ರೇವಣ್ಣ, ಅರ್ಚಕರಾದ ಶಿವಕುಮಾರ್, ಎಂ.ಎಸ್.ರವಿ, ರಮೇಶ್, ಗ್ರಾಮಸ್ಥರು ಉಪಸ್ಥಿತರಿದ್ದರು.



ಮೈಸೂರಿನ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಿ.ಜಿ. ರಾಜು ಅವರು ರಾಷ್ಟ್ರಪತಿ ಪದಕಕ್ಕೆ ಭಾಜನರಾದ ಹಿನ್ನೆಲೆಯಲ್ಲಿ ಅವರಿಗೆ ಕನ್ನೆಗೌಡನ ಕೊಪ್ಪಲ್ ಚಾಮುಂಡೇಶ್ವರಿ ಯುವಕರ ಸಂಘ ಹಾಗೂ ಗ್ರಾಮದ ಯಜಮಾನರು ಯುವಕ ಮಿತ್ರರು ಸೇರಿ 'ಸೂರ್ಯ ಕೇಸರಿ' ಎಂಬ ಬಿರುದು ನೀಡಿ ಸನ್ಮಾನಿಸಿದರು. ಇನ್ಸ್‌ಪೆಕ್ಟರ್ ಸಿ.ಜಿ. ರಾಜು ಅವರ ಪತ್ನಿ ಸೌಮ್ಯಶ್ರೀ ರಾಜು, ಚಾಮುಂಡೇಶ್ವರಿ ಯುವಕರ ಸಂಘದ ಅಧ್ಯಕ್ಷ ಎಂ. ದೇಸಿಗೌಡ, ನಗರಪಾಲಿಕ ಸದಸ್ಯ ಶಿವಕುಮಾರ್, ಗಾಂಧಿ ಭವನ ವಿಶ್ರಾಂತ ನಿರ್ದೇಶಕ ಹಾಗೂ ಹಿರಿಯ ಸಾಹಿತಿಗಳಾದ ಪ್ರೊ.ಎಸ್. ಶಿವರಾಜಪ್ಪ, ಕೃಷ್ಣಪ್ಪ, ಮಲ್ಲಣ್ಣ, ಲಕ್ಷ್ಮಣ್, ರಾಜು, ಚೆನ್ನಪ್ಪ ಜಯನಗರ, ಆರ್.ಬಸಪ್ಪ ವಿಕ್ರಾಂತ್, ಪಿ. ದೇವೇಗೌಡ, ಮೂಗಿ ಬೋರಯ್ಯ, ಬಸಪ್ಪ, ದೇವರಾಜ್, ರಾಕೇಶ್, ಚೇತನ್, ಕೊಪ್ಪಲ್ ಚೆನ್ನಪ್ಪ, ಮಾದೇವ್, ಪಾಪಣ್ಣ, ಬಾಲರಾಜಣ್ಣ, ಎಳನೀರು ರಾಮು, ಚೌಡಪ್ಪ ಶ್ರೀನಿವಾಸ್, ಸೋಮಣ್ಣ, ಭೀಮಣ್ಣ, ಸೋಲಿಬಣ್ಣ, ಕಾಳ ಬೋರಪ್ಪ, ಸೊಸೈಟಿ ರಾಜು, ನಂಜುಂಡಪ್ಪ, ಶ್ರೀನಿವಾಸ್, ಮಾರಮ್ಮ ಮುಂತಾದವರು ಉಪಸ್ಥಿತರಿದ್ದರು.

## ಮುಕ್ತ ವಿವಿ ನಿವೃತ್ತ ಪ್ರಾಧ್ಯಾಪಕ ಅಪ್ಪಾಜಿಗೌಡ ನಿಧನ

ಮೈಸೂರು, ಆ.17– ಮೈಸೂರಿನ ಎಸ್‌ಬಿಎಂ ಬಡಾವಣೆ ನಿವಾಸಿ, ನಿವೃತ್ತ ಪ್ರಾಧ್ಯಾಪಕ ಡಾ.ಅಪ್ಪಾಜಿಗೌಡ(62) ಬುಧವಾರ ನಿಧನರಾದರು.



ಮೂಲತಃ ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ನಾಟನಹಳ್ಳಿ ಗ್ರಾಮದವರಾದ ಇವರು, ಮಹಾರಾಜ ಕಾಲೇಜು, ವಾಕ್ ಮತ್ತು ಶ್ರವಣ ಸಂಸ್ಥೆ, ವಿದ್ಯಾವರ್ಧಕ ವಿದ್ಯಾಸಂಸ್ಥೆ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ವಿನುತ, ಪುತ್ರ ಡಾ.ಚಿರಂತ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಆ.18) ಬೆಳಗ್ಗೆ 11.30ಕ್ಕೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕಟುಂಬದ ಮೂಲಗಳು ತಿಳಿಸಿವೆ.

**ಜಿಟಿಡಿ ಸಂತಾಪ:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನವಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ 12 ವರ್ಷಗಳ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದ ಡಾ.ಅಪ್ಪಾಜಿಗೌಡರವರ ನಿಧನ ತುಂಬಲಾರದ ನಷ್ಟವನ್ನುಂಟು ಮಾಡಿದೆ. ಶ್ರೀಯುತರು ಚಾಮುಂಡೇಶ್ವರಿ ಕ್ಷೇತ್ರದ ಎಸ್.ಬಿ.ಎಂ.ಬಡಾವಣೆಯ ನಿವಾಸಿಯಾಗಿದ್ದರು. ಇವರ ನಿಧನದಿಂದ ಅವರ ಕುಟುಂಬ ವರ್ಗಕ್ಕೆ ಆಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ತಾಯಿ ಚಾಮುಂಡೇಶ್ವರಿ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡ ಸಂತಾಪ ಸೂಚಿಸಿದ್ದಾರೆ.

## ನಿಧನ



### ಮಾಳೇಟಿರಾ ರುಕ್ಮಿಣಿ

ವಿರಾಜಪೇಟೆ, ಆ.17–ದಿವಂಗತ ಮಾಳೇಟಿರಾ ದೇವಯ್ಯ (ಎಲ್‌ಐಸಿ ಡೆವೆಲಪ್‌ಮೆಂಟ್ ಆಫೀಸರ್) ಅವರ ಪತ್ನಿ ಮಾಳೇಟಿರಾ ರುಕ್ಮಿಣಿ ಅವರು ಮಂಗಳವಾರ ತಾಲೂಕಿನ ಕುಕ್ಕಲೂರು ಗ್ರಾಮದ ನಿವಾಸದಲ್ಲಿ ನಿಧನರಾದರು. ಅವರಿಗೆ 73 ವರ್ಷ ವಯಸ್ಸಾಗಿತ್ತು.

ದಿವಂಗತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬುಧವಾರ ಸಂಜೆ ಕುಕ್ಕಲೂರು ಗ್ರಾಮದಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



### ಡಿ.ಸಿ.ವಿಠಲ

ಮೈಸೂರು, ಆ.17– ಮೈಸೂರಿನ ಸರಸ್ವತಿಪುರಂ ನಿವಾಸಿ ಡಿ.ಸಿ.ವಿಠಲ (60) ಬುಧವಾರ ತೀವ್ರ ಅನಾರೋಗ್ಯದಿಂದ ನಿಧನರಾಗಿದ್ದಾರೆ.

ಮೃತರು ಪತ್ನಿ ನಾಗರತ್ನ, ಪುತ್ರ ಗುರುಪ್ರಸಾದ್ ಸೇರಿದಂತೆ ಅಪಾರ ಬಂಧು–ಮಿತ್ರರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಇಂದು ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರಿನಲ್ಲಿ ಬಿರುಸಿನಿಂದ ತಯಾರಾಗುತ್ತಿವೆ ವಿಘ್ನ ನಿವಾರಕನ ವಿಗ್ರಹಗಳು





ಕಲಾವಿದ ಶ್ಯಾಮ್‌ಸುಂದರ್ ಮತ್ತು ಕುಟುಂಬ ವಿಗ್ರಹ ತಯಾರಿಕೆಯಲ್ಲಿ.



ಪಡುವಾರಹಳ್ಳಿಯ ಕುಮಾರ್ ಅವರ ಕುಟುಂಬ.

■ ಮೋಹನ್ ಕಾಯಕ

ಮೈಸೂರು, ಆ.17– ಕೊರೊನಾ ಕರಿನೆರಳು ಸರಿದ ಬಳಿಕ ಪರಿಸರ ಸ್ನೇಹಿ ಗಣೇಶ ವಿಗ್ರಹ(ಮೂರ್ತಿ)ಗಳನ್ನು ಮುಕ್ತವಾಗಿ ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಲು ಸರ್ಕಾರ ಗ್ರೀನ್ ಸಿಗ್ನಲ್ ನೀಡಿರುವ ಬೆನ್ನಲ್ಲೇ ಮೈಸೂರಿನಲ್ಲಿ ವಿಘ್ನ ನಿವಾರಕನ, ತಯಾರಿಕೆ ಹಾಗೂ ಪ್ರತಿಷ್ಠಾಪನೆಗೆ ಸಕಲ ಸಿದ್ಧತೆಗಳು ನಡೆಯುತ್ತಿವೆ.

ಪಡುವಾರಹಳ್ಳಿ, ಕುಂಬಾರಗೇರಿ, ಮಡಿವಾಳರ ಬೀದಿ ಸೇರಿದಂತೆ ನಗರದ ಹಲವೆಡೆ ಮಣ್ಣಿನ ಗಣೇಶನ ವಿಗ್ರಹಗಳ ತಯಾರಿಕೆ ಜೋರಾಗಿದ್ದು, 2 ವರ್ಷದ ಸಡಗರ–ಸಂಭ್ರಮವನ್ನು ಒಂದೇ ಬಾರಿ ಕಾಣುವ ಹಾಗೂ ಆಚರಿಸುವ ತವಕದಲ್ಲಿ ಮೈಸೂರಿಗರಿದ್ದಾರೆ. ಈಗಾಗಲೇ ವಿವಿಧ ಗಾತ್ರದ ಸಾವಿರಾರು ಗೌರಿ–ಗಣೇಶನ ವಿಗ್ರಹಗಳು ತಯಾರಾಗುತ್ತಿದ್ದು, ಬೇರೆ ಬೇರೆ ರಾಜ್ಯಗಳಿಂದಲೂ ತರಿಸಿಕೊಂಡು ಮಾರಾಟಕ್ಕೆ ತಯಾರಿ ನಡೆಸಲಾಗುತ್ತಿದೆ. ವಿವಿಧ ಬಗೆಯ ವಿನ್ಯಾಸಗಳಿಂದ ಕೂಡಿದ ಗಣೇಶನ ವಿಗ್ರಹಗಳನ್ನು ರೂಪುಗೊಳ್ಳುತ್ತಿದ್ದು, ಈಗಾಗಲೇ ಹಲವರು ಮುಂಗಡವಾಗಿ ಕಾಯ್ದಿಸಿದ್ದಾರೆ.

**ಮಣ್ಣಿನ ಗಣಪತಿಗೆ ಬಾರೀ ಬೇಡಿಕೆ:** ಪರಿಸರ ಸ್ನೇಹಿ ಮಣ್ಣಿನ ಗಣಪತಿ ವಿಗ್ರಹಕ್ಕೆ ಬೇಡಿಕೆ ಹೆಚ್ಚಾಗಿದ್ದು, ಸಾರ್ವಜನಿಕರು ಮಣ್ಣಿನಿಂದ ಮಾಡಿದ ಗಣಪತಿಗಳನ್ನು ಖರೀದಿ ಮಾಡುವ ಮೂಲಕ ಪರಿಸರ ಕಾಳಜಿ ತೋರುತ್ತಿದ್ದಾರೆ. ಪ್ರತೀ ವರ್ಷ ಮಣ್ಣಿನಿಂದ ಮಾಡಿದ ಗಣಪತಿ ವಿಗ್ರಹಗಳನ್ನು ಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ ಎಂದು ನಗರದ ಸುಣ್ಣದಕೇರಿಯಲ್ಲಿ ಮಣ್ಣಿನ ಗೌರಿ–ಗಣೇಶ ವಿಗ್ರಹ ವ್ಯಾಪಾರ ಮಾಡುತ್ತಿರುವ ಪ್ರತಾಪ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

> 6 ಸರ್ಕಾರದ ಆದೇಶದನ್ವಯ ಪರಿಶೀಲನೆ ನಡೆಸುವಂತೆ ಪಾಲಿಕೆಯ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ. ಮೈಸೂರಿನಲ್ಲಿ ಬಹಳಷ್ಟು ಕಡೆ ಗೌರಿ–ಗಣೇಶ ವಿಗ್ರಹ ತಯಾರಿಕೆ ನಡೆಯುತ್ತಿದೆ ಎಂಬ ಮಾಹಿತಿ ಇದೆ. ಈಗಾಗಲೇ ನಗರದಲ್ಲಿ ಪಿಓಪಿ ಗಣೇಶನ ವಿಗ್ರಹಗಳನ್ನು ಮಾರಾಟ ಮಾಡಲಾಗುತ್ತಿದೆ ಎಂಬ ದೂರು ಬಂದಿದ್ದು, ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ.
> –ಲಕ್ಷ್ಮಿಕಾಂತ್ ರೆಡ್ಡಿ, ಪಾಲಿಕೆ ಆಯುಕ್ತ



ಪ್ರತಾಪ್

ಮಣ್ಣಿನಿಂದ ಮಾಡಿರುವ 1 ಅಡಿಯಷ್ಟು ಎತ್ತರದ ಗಣೇಶನ ವಿಗ್ರಹದೊಳಗೆ ತುಳಸಿ ಸೇರಿದಂತೆ ಇನ್ನಿತರೆ ಗಿಡಗಳ ಬೀಜಗಳನ್ನು ಹಾಕಲಾಗುತ್ತಿದೆ. ಜೊತೆಗೆ ಪ್ರತ್ಯೇಕವಾಗಿ 25 ಗ್ರಾಂನಷ್ಟು ಸಾವಯವ ಗೊಬ್ಬರವನ್ನು ನೀಡಲಾಗುತ್ತದೆ. ಉಚಿತವಾಗಿ ನೀಡುವ ಪಾಟ್‌ನೊಳಗೆ ಗಣೇಶನ ವಿಗ್ರಹ ವಿಸರ್ಜನೆ ಮಾಡಿದ ಬಳಿಕ ಅದೇ ಪಾಟ್‌ನಿಂದ ಗಿಡಗಳು ಬೆಳೆಯಲಿವೆ. ಇದರಿಂದ ಮನೆಯಲ್ಲಿ ಗಿಡಗಳನ್ನು ಬೆಳೆಸಿದಂತಾಗುತ್ತದೆ ಎಂದು ತಿಳಿಸಿದರು.

ಕಳೆದ ಮೂರು ವರ್ಷಗಳಿಂದ ಮಣ್ಣಿನ ಗೌರಿ–ಗಣೇಶ ವಿಗ್ರಹಗಳನ್ನು ಮಾರಾಟ ಮಾಡುತ್ತಿದ್ದು, ವರ್ಷದಿಂದ ವರ್ಷಕ್ಕೆ ಮಾರಾಟವಾಗುತ್ತಿರುವ ವಿಗ್ರಹಗಳ ಸಂಖ್ಯೆ ಹೆಚ್ಚಾಗುತ್ತಿದೆ. ಮೊದಲ ವರ್ಷ 500 ವಿಗ್ರಹಗಳು ಮಾರಾಟವಾದರೆ, 2ನೇ ವರ್ಷ 1000 ವಿಗ್ರಹಗಳು ಮಾರಾಟವಾಗಿವೆ. ಈ ವರ್ಷವೂ ಸಾವಿರಕ್ಕೂ ಹೆಚ್ಚು ವಿಗ್ರಹಗಳು ಮಾರಾಟವಾಗುವ ನಿರೀಕ್ಷೆ ಇದೆ ಎಂದು ತಿಳಿಸಿದರು.

**10 ಅಡಿ ಎತ್ತರ:** ಸಣ್ಣ ಗಾತ್ರದಿಂದ ಹಿಡಿದು 10 ಅಡಿ ಎತ್ತರದವರೆಗೆ ಮಣ್ಣಿನಿಂದಲೇ ವಿಗ್ರಹಗಳನ್ನು ತಯಾರಿಸಬಹುದಾಗಿದೆ. ಮಣ್ಣಿನ ಜೊತೆಗೆ ತೆಂಗಿನಕಾಯಿ ನಾರನ್ನು ಬಳಸುವುದರಿಂದ ವಿಗ್ರಹ ತಯಾರಿಕೆಗೆ ಅನುಕೂಲವಾಗಲಿದೆ. ವಾಟರ್ ಪೇಟಿಂಗ್ ಜೊತೆಗೆ ಸ್ಪೈನಿಂಗ್ ಕಲರ್ ಬಳಸುವುದರಿಂದ ವಿಗ್ರಹಗಳು ಆಕರ್ಷವಾಗಿ ಕಾಣುತ್ತವೆ. 25 ರೂ., ನಿಂದ 15 ಸಾವಿರ ರೂ.ವರೆಗಿನ ವಿಗ್ರಹಗಳನ್ನು ತಯಾರಿಸುತ್ತಿದ್ದೇವೆ ಎಂದು ಸುಬ್ಬರಾಯನ ಕೆರೆಯ ಮಡಿವಾಳರ ಬೀದಿಯಲ್ಲಿ ವಿಗ್ರಹಗಳನ್ನು ತಯಾರಿಸುವ ಕಲಾವಿದ ಶ್ಯಾಮ್‌ಸುಂದರ್ ಮಾಹಿತಿ ನೀಡಿದರು.


ಜೇಡಿ ಮಣ್ಣಿನಿಂದ ಗೌರಿ–ಗಣೇಶನ ವಿಗ್ರಹಗಳನ್ನು ತಯಾರಿಸಲಾಗುತ್ತಿದ್ದು, ಯಾವುದೇ ರೀತಿಯಲ್ಲೂ ಪರಿಸರ ಹಾನಿಯುಂಟಾಗುವುದಿಲ್ಲ. ವಿಗ್ರಹ ತಯಾರಿಕೆಗೆ ಸೂಕ್ತವಾದ ಜೇಡಿ ಮಣ್ಣನ್ನು ಟಿ.ನರಸೀಪುರ ಸಮೀಪದ ಕೆರೆಗಳಿಂದ ತರಲಾಗುವುದು. ಮಣ್ಣಿನಿಂದ ಒಂದು ವಿಗ್ರಹ ಮಾಡಿ ಪೂರ್ಣಗೊಳಿಸಲು ಸಾಕಷ್ಟು ಸಮಯ ಬೇಕಾಗುತ್ತದೆ. ಅಲ್ಲದೆ ತೂಕ ಹೆಚ್ಚಾಗಿರುವುದರಿಂದ ವಿಸರ್ಜನೆಗೂ ಅನುಕೂಲವಾಗಲಿದೆ ಎಂದರು.

**50ಕ್ಕೂ ಹೆಚ್ಚು ಬಗೆಯ ವಿನ್ಯಾಸಗಳು:** ಗಣೇಶನ ವಿಗ್ರಹಗಳಲ್ಲಿಯೇ 50ಕ್ಕೂ ಹೆಚ್ಚು ಬಗೆಯ ವಿನ್ಯಾಸಗಳಿದ್ದು, ಗ್ರಾಹಕರ ಆಸಕ್ತಿಗೆ ಅನುಗುಣವಾಗಿ ವಿಗ್ರಹ ತಯಾರಿಸಲಾಗುತ್ತದೆ. ಪ್ರತಿವರ್ಷ ಒಂದೊಂದು ಬಗೆಯ ಹೊಸ ವಿನ್ಯಾಸದ ಪ್ರಯೋಗಗಳನ್ನು ಮಾಡಲಾಗುವುದು. ಮೊದಲು ವಿಗ್ರಹ ಕೇಳುವವರಿಗೆ ಫೋಟೋ ಆಲ್ಬಂ ತೋರಿಸಲಾಗುವುದು. ಅವರು, ಆಯ್ಕೆ ಮಾಡಿದ ವಿನ್ಯಾಸದಲ್ಲಿಯೇ ವಿಗ್ರಹ ತಯಾರಿಸಲಾಗುವುದು. ಇದರಿಂದಲೂ ಬೇಡಿಕೆ ಹೆಚ್ಚಾಗುತ್ತಿದೆ ಎಂದು ಹೇಳಿದರು.

**ಕುಂಬಾರರ ನಿರ್ಲಕ್ಷ:** ವಿಗ್ರಹ ತಯಾರಿಕೆಯನ್ನೇ ನಂಬಿಕೊಂಡಿರುವ ಕುಂಬಾರರನ್ನು ರಾಜ್ಯ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಗೌರಿ–ಗಣೇಶ ಹಬ್ಬದ ಸಂದರ್ಭದಲ್ಲಷ್ಟೇ ನಾವು ಒಂದಷ್ಟು ಆದಾಯ ಕಾಣುವುದು. ಸದಾ ಬರಿಗೈಯಲ್ಲೇ ಜೀವನ ಕಳೆಯುವಂತಾಗಿದೆ. ಅದರ ನಡುವೆ ಹಿಂದೂ ಧಾರ್ಮಿಕ ಹಬ್ಬಗಳು ಬಂದರೆ ಸಾಕು ರಾಜಕೀಯ ನಾಯಕರು ಮನಬಂದಂತೆ ನಿಯಮಗಳನ್ನು ಮಾಡಿ ಇನ್ನಷ್ಟು ಸಂಕಷ್ಟಕ್ಕೆ ದೂಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

**ಪಿಓಪಿ ವಿಗ್ರಹಗಳ ಮಾರಾಟ:** ಮೈಸೂರಿನಲ್ಲಿ ನಿಷೇಧಿತ ಪಿಓಪಿ ಗೌರಿ–ಗಣೇಶನ ವಿಗ್ರಹಗಳ ಮಾರಾಟ ನಡೆಯುತ್ತಿದ್ದೆ ಎಂದು ಕೆಲ ಮಣ್ಣಿನ ವಿಗ್ರಹ ತಯಾರಕರು ಮಾಹಿತಿ ನೀಡಿದ್ದಾರೆ. ಒಂಟಿಕೊಪ್ಪಲು ಸಮೀಪ ಸೇರಿದಂತೆ ನಗರದ ಕೆಲವೆಡೆ ಪಿಓಪಿ ವಿಗ್ರಹಗಳನ್ನು ಮಾರಾಟ ಮಾಡುವುದಕ್ಕಾಗಿಯೇ ಬೇರೆ ಬೇರೆ ಕಡೆಗಳಿಂದ ತರಿಸಿಕೊಳ್ಳಲಾಗಿದೆ. ಪಿಓಪಿ ವಿಗ್ರಹಗಳು ತೂಕ ಕಡಿಮೆ ಇದ್ದು, ನೀರಿನಲ್ಲಿ ಮುಳುಗುವುದಿಲ್ಲ. ಅಲ್ಲದೇ ಕರಗುವುದೂ ಇಲ್ಲ. ಪಿಓಪಿ ಬಳಕೆಯಿಂದ ನೀರಿನ ಮಾಲಿನ್ಯ ಹೆಚ್ಚಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

## ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜಿನ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಮೈಸೂರು, ಆ.17(ಎಂಕೆ)– ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜಿನ 61 ವಿದ್ಯಾರ್ಥಿಗಳಿಗೆ ಬುಧವಾರ ಪದವಿ ಪ್ರದಾನ ಮಾಡಲಾಯಿತು.

ನಗರದ ಎಂಜಿ ರಸ್ತೆಯಲ್ಲಿರುವ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ನಡೆದ ಪದವಿ ಪ್ರದಾನ 'ಸಮಾರಂಭ'ದಲ್ಲಿ ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜಿನ 52 ಪದವಿ ಹಾಗೂ 9 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಆಲ್ ಇಂಡಿಯಾ ಫಿಸಿಕಲ್ ಮೆಡಿಸಿನ್ ಅಂಡ್ ರೆಹಬಿಲಿಟೇಶನ್‌ನ ಫಿಜಿಯೋಥೆರಪಿ ವಿಭಾಗ ಮಾಜಿ ಮುಖ್ಯಸ್ಥೆ ಕರೆನ್ ಪಾವ್ರಿ ಪದವಿ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, ಪದವಿ ಪಡೆದ ಮಾತ್ರಕ್ಕೆ ನಿಮ್ಮ ಕಲಿಕೆ ಎಂಬುದು ಮುಗಿಯುವುದಿಲ್ಲ. ನಿಮ್ಮ ವೃತ್ತಿಯಲ್ಲಿ ಅನುಭವಗಳಿಂದ ನೀವು ಹೊಸತನ್ನು ಕಲಿಯುತ್ತಲೇ ಇರಬೇಕು. ತಮ್ಮ ವೃತ್ತಿ ಕೌಶಲವನ್ನು ಬೆಳೆಸಿಕೊಂಡು ಮುಂದುವರೆಯಬೇಕು ಎಂದು ಸಲಹೆ ನೀಡಿದರು.

ಈ ಕಾಲೇಜಿ ನಿಮಗೆ ನೈತಿಕ ಮೌಲ್ಯಗಳನ್ನು ತಿಳಿಸಿದೆ. ಹಾಗಾಗಿ, ನೀವು ಖಂಡಿತ ಉತ್ತಮ ಪ್ರಜೆಗಳಾಗುತ್ತೀರಾ ಎಂಬ ನಂಬಿಕೆ ಇದೆ. ನಿಮ್ಮ ವೃತ್ತಿ ಪ್ರಗತಿಯೂ ವಿಸ್ತರಣೆಯಾಗುವ ಜೊತೆಗೆ ಶೈಕ್ಷಣಿಕ ಸಂಶೋಧನೆ, ಸೇವೆ ಮತ್ತು ಜಾಗೃತಿ ಮೂಡಿಸುವ ಮನೋಭಾವವೂ ಸುಧಾರಿಸುತ್ತಿರಲಿ ಎಂದರು. ಕೊರೊನಾ ಸಂದರ್ಭದಲ್ಲಿ ನಡೆದ ಆನ್‌ಲೈನ್ ವೈದ್ಯಕೀಯ ಸೇವೆಯಲ್ಲಿ ಸಾಕಷ್ಟು ವಿಫಲತೆ ಉಂಟಾಗಿದೆ. ಇಂದು ಕೊರೊನಾ ಸೋಂಕು ನಿಯಂತ್ರಣಕ್ಕೆ ಬಂದಿದ್ದು, ನಮ್ಮ ವೃತ್ತಿಯಲ್ಲಿ ಮತ್ತಷ್ಟು ಪರಿಣಿತಿ ಪಡೆಯುವುದು ಅಗತ್ಯವಿದೆ. ಫಿಜಿಯೋಥೆರಪಿಯಲ್ಲಿ ಕೌಶಲ್ಯತೆಗಳು ಮುಖ್ಯವಾಗಿದ್ದು, ನಿರಂತರ ಕಲಿಕೆ ಮತ್ತು ಸೇವೆಯಿಂದ ಉತ್ತಮ ಫಿಜಿಯೋಥೆರಪಿಸ್ಟ್ ಆಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಪದವಿ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ನಿರ್ದೇಶಕ ಆರ್.ಮಹೇಶ್, ಸಂಶೋಧನಾ ವಿಭಾಗದ ನಿರ್ದೇಶಕ ಡಾ.ಪ್ರಶಾಂತ ವಿಶ್ವನಾಥ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಕವಿತಾ ರಾಜ್, ಉಪ ಪ್ರಾಂಶುಪಾಲರಾದ ಡಾ.ರೇಣುಕಾ ದೇವಿ, ವಿಜಯ್ ಸ್ಯಾಮುಯಲ್ ಮತ್ತಿತರರು ಉಪಸ್ಥಿತರಿದ್ದರು.

## ರಾಜ್ಯದಲ್ಲಿ 886 ಮಂದಿಗೆ ಕೊರೊನಾ

ಬೆಂಗಳೂರು, ಆ.17– ರಾಜ್ಯದಲ್ಲಿ ಕೊರೋನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಳಿತ ಮುಂದುವರೆದಿದ್ದು, ಕಳೆದ 24 ಗಂಟೆಯಲ್ಲಿ 886 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 40,34,496ಕ್ಕೆ ಏರಿಕೆಯಾಗಿದೆ. ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೊನಾದಿಂದ ಇಂದು ಮೂವರು ಮೃತಪಟ್ಟಿದ್ದು ಇದರೊಂದಿಗೆ ಸಾವಿನ ಸಂಖ್ಯೆ 40,155ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಬೆಂಗಳೂರಿನಲ್ಲಿ ಇಂದು 608 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 18,54,238ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲಿ ಕೊರೊನಾದಿಂದ ಒಬ್ಬರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ.



ಮೈಸೂರಿನ ನಗರ ಜೆಡಿಎಸ್ ಕಚೇರಿಯಲ್ಲಿ 75ನೆ ಸ್ವಾತಂತ್ರ್ಯೋತ್ಸವ ದಿನಾಚರಣೆಯನ್ನು ಆಚರಿಸಲಾಯಿತು. ನಗರಾಧ್ಯಕ್ಷ ಚೆಲುವೇಗೌಡ, ಜಿಲ್ಲಾಧ್ಯಕ್ಷ ನರಸಿಂಹಯ್ಯ, ಮಾಜಿ ಅಧ್ಯಕ್ಷ ರಾಜಣ್ಣ, ಮಾಜಿ ಮೇಯರ್ ಲಿಂಗಪ್ಪ, ಎಚ್.ಕೆ. ರಾಮು, ಮಾಜಿ ಉಪ ಮೇಯರ್ ಶೈಲೇಂದ್ರ, ನಗರಪಾಲಿಕೆ ಸದಸ್ಯ ಕೆ.ವಿ. ಶ್ರೀಧರ್, ಪ್ರಕಾಶ್, ಫಾಲ್ಕನ್ ಬೋರೇಗೌಡ, ಮಂಜುನಾಥ್, ಕೆ.ವಿ.ಮಲ್ಲೇಶ್, ಲೋಕೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿ

# ಮೈಸೂರು ವಾರಿಯರ್ಸ್, ಬೆಂಗಳೂರು ಬ್ಲಾಸ್ಟರ್ಸ್‌ಗೆ ಗೆಲುವು

ಬೆಂಗಳೂರು, ಆ.17– ಇಲ್ಲಿನ ಎಂ.ಚಿನ್ನಾಸ್ವಾಮಿ ಕ್ರಿಕೆಟ್ ಅಂಗಳದಲ್ಲಿ ನಡೆದ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿಯ 2ನೇ ಹಂತದ ಮೊದಲ ಪಂದ್ಯದಲ್ಲಿ ಮಂಗಳೂರು ಯುನೈಟೆಡ್ ವಿರುದ್ಧ ಮೈಸೂರು ವಾರಿಯರ್ಸ್ 6 ವಿಕೆಟ್‌ಗಳ ಭರ್ಜರಿ ಜಯ ಗಳಿಸಿದೆ.

172 ರನ್‌ಗಳ ಗುರಿ ಪಡೆದ ಮೈಸೂರು ವಾರಿಯರ್ಸ್ ನಾಯಕ ಕರುಣ್ ನಾಯರ್ 47 ಹಾಗೂ ಪವನ್ ದೇಶಪಾಂಡೆ ಅವರ ಆಕರ್ಷಕ ಅಜೇಯ ಅರ್ಧ ಶತಕದ (53*) ನೆರವಿನಿಂದ ಇನ್ನೂ 11 ಎಸೆತ ಬಾಕಿ ಇರುವಾಗಲೇ 4 ವಿಕೆಟ್ ಕಳೆದುಕೊಂಡು ಜಯ ಗಳಿಸಿತು. ಮಂಗಳೂರು ಯುನೈಟೆಡ್ ಪರ ಹೆಚ್‌ಎಸ್ ಶರತ್, ಮುರುಳಿಧರ ವೆಂಕಟೇಶ್ ತಲಾ 2 ವಿಕೆಟ್ ಪಡೆದರು. ಟಾಸ್ ಸೋತು ಮೊದಲ ಬ್ಯಾಟಿಂಗ್ ಮಾಡಿದ ಮಂಗಳೂರು ಯುನೈಟೆಡ್ ತಂಡ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 171 ರನ್‌ಗಳ ಸವಾಲಿನ ಮೊತ್ತವನ್ನು ಕಲೆ ಹಾಕಿತು. ನಿಕಿನ್ ಜೋಸ್ 55 ರನ್, ಅಭಿನವ್ ಮನೋಹರ್ 68 ರನ್ ಸಿಡಿಸಿದರೆ, ಉಳಿದ ಆಟಗಾರರಿಂದ ನಿರೀಕ್ಷಿತ ಪ್ರದರ್ಶನ ಮೂಡಿಬರಲಿಲ್ಲ. ಮೈಸೂರು ವಾರಿಯರ್ಸ್ ಪರ ಪ್ರತೀಕ್ ಜೈನ್, ಆದಿತ್ಯ ಗೊಯಲ್ ತಲಾ 2 ವಿಕೆಟ್ ಕಬಳಿಸಿದರು. ಅರ್ಧ ಶತಕ ದಾಖಲಿಸಿದ ಪವನ್ ದೇಶಪಾಂಡೆ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.




**ಬೆಂಗಳೂರು ಬ್ಲಾಸ್ಟರ್ಸ್‌ಗೆ ಜಯ:** ಎಲ್.ಆರ್. ಚೇತನ್ ಅಮೋಘ ಅಜೇಯ ಶತಕದ ಹಾಗೂ ಅನಿರುದ್ಧ ಜೋಶಿ ಅರ್ಧಶತಕದ ನೆರವಿನಿಂದ ಬೆಂಗಳೂರು ಬ್ಲಾಸ್ಟರ್ಸ್, ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ 25ರನ್‌ಗಳ ಜಯ ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ತಂಡ ಆರಂಭದಲ್ಲೇ ನಾಯಕ ಮಯಾಂಕ್ ಅಗರ್ವಾಲ್(1), ಕೆವಿ ಅನೀಶ್(8), ಶಿವಕುಮಾರ್ ರಕ್ಷಿತ್(6) ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಬಳಿಕ ಜೊತೆಯಾದ ಎಲ್.ಆರ್. ಚೇತನ್ ಹಾಗೂ ಅನಿರುದ್ಧ ಜೋಶಿ 83 ರನ್‌ಗಳ ಜೊತೆಯಾಟ ಆಡಿದರು. 28 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಬಾರಿಸಿದ ಅನಿರುದ್ಧ ಜೋಶಿ 54 ರನ್‌ಗಳಿಸಿ ನಿರ್ಗಮಿಸಿದರೆ, ಅಬ್ಬರದ ಬ್ಯಾಟಿಂಗ್ ಪ್ರದರ್ಶನ ನೀಡಿದ ಎಲ್.ಆರ್.ಚೇತನ್ 55 ಎಸೆತಗಳಲ್ಲಿ 8 ಬೌಂಡರಿ, 6 ಸಿಕ್ಸರ್ ಸಿಡಿಸಿ 105ರನ್ ಬಾರಿಸಿ ಅಜೇಯರಾಗುಳಿದರು. ಅಂತಿಮವಾಗಿ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 191 ರನ್‌ಗಳ ಬೃಹತ್ ಮೊತ್ತ ಗಳಿಸಿತು. ಶಿವಮೊಗ್ಗ ಪರ ಉತ್ತಮ್ ಅಯ್ಯಪ್ಪ, ಕೆ.ಗೌತಮ್ ತಲಾ 2 ವಿಕೆಟ್ ಪಡೆದರು. 192ರನ್‌ಗಳ ಗುರಿ ಪಡೆದ ಶಿವಮೊಗ್ಗ ಸ್ಟ್ರೈಕರ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 166 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಆರಂಭಿಕ ಆಟಗಾರ ರೋಹನ್ ಕದಂ 67 ರನ್ ಸಿಡಿಸಿದರೆ, ಕೃಷ್ಣಮೂರ್ತಿ ಸಿದ್ಧಾರ್ಥ್ 25 ರನ್ ಗಳಿಸಿದರು. ಇನ್ನುಳಿದ ಬ್ಯಾಟ್ಸ್‌ಮನ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು. ಬೆಂಗಳೂರು ಪರ ಟಿ.ಪ್ರದೀಪ್ ಪ್ರಮುಖ 4 ವಿಕೆಟ್ ಪಡೆದು ಮಿಂಚಿದರೆ, ಜಗದೀಶ್ ಸುಚೇತ್ 2 ವಿಕೆಟ್ ಕಬಳಿಸಿದರು. ಅಜೇಯ ಶತಕ ದಾಖಲಿಸಿದ ಎಲ್.ಆರ್.ಚೇತನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

| ಇಂದಿನ ಪಂದ್ಯಗಳು |
| --- |
| ಸಮಯ ಮಧ್ಯಾಹ್ನ 3ಕ್ಕೆ |
| ಗುಲ್ಬರ್ಗಾ ಮೈಸ್ಟಿಕ್ಸ್ / ಬೆಂಗಳೂರು ಬ್ಲಾಸ್ಟರ್ಸ್ |
| ಸಂಜೆ 7ಕ್ಕೆ |
| ಹುಬ್ಬಳ್ಳಿ ಟೈಗರ್ಸ್ /ಮೈಸೂರು ವಾರಿಯರ್ಸ್ |

## ನಕ್ಕರೆ ಅದೇ ಸ್ವರ್ಗ

ಶಿಕ್ಷಕರು : (ಪರೀಕ್ಷೆ ಹಾಲ್‌ನಲ್ಲಿ ಗಂಭೀರವಾಗಿ ಕುಳಿತ ವಿದ್ಯಾರ್ಥಿಗಳನ್ನು ಕುರಿತು) ಯಾವುದಾದರೂ ಪ್ರಶ್ನೆಗಳು ಕಠಿಣವಾಗಿವೆಯೇ?

ವಿದ್ಯಾರ್ಥಿಗಳು : ಖಂಡಿತಾ ಇಲ್ಲ. ಎಲ್ಲಾ ಪಶ್ನೆಗಳು ತೀರಾ ಸರಳವಾಗಿವೆ. ಆದರೆ ಉತ್ತರಗಳು ಮಾತ್ರ ಕಠಿಣ ಸಾರ್!"

**ಮೈಸೂರು ಮಿತ್ರ**

ಗುರುವಾರ, 18 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

### ಅಮೃತವಾಹಿನಿ

ಒಳ್ಳೆಯ ಮಿತ್ರರನ್ನು ಹುಡುಕುವ ಮೊದಲು ನಾವು ಒಳ್ಳೆಯ ಮಿತ್ರರಾಗುವುದು ಅಗತ್ಯ– ಜಗ್ಗಿ ವಾಸುದೇವ್

### ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅತ್ತೆಯ ಮನೆಗೆ ಮಜ್ಜಿಗೆ ನೀರು, ತೌರು ಮನೆಗೆ ಹಾಲು, ಮೊಸರು

## ನಿಮ್ಮ ಪತ್ರಗಳು

### ಶಿಕ್ಷಣ ಕ್ರಾಂತಿಯ ಕಾರಣಿಕರಾದ ರಾಜೇಂದ್ರ ಶ್ರೀಗಳು

ಮಾನ್ಯರೆ,



"ಹಸಿವಿಗನ್ನವನ್ನಿತ್ತ ಪರಮ ದಾಸೋಹಿ ಚಿನ್ನಕ್ಕಿಂತ ಅನ್ನವೇ ಶ್ರೇಷ್ಠ" ಎಂದು ಸಾರಿದ ಸುತ್ತೂರು ಮಠದ ರಾಜೇಂದ್ರ ಶ್ರೀಗಳು ತ್ರಿವಿಧ ದಾಸೋಹಿಗಳಾಗಿ ದಣಿವರಿಯದ ಕಾಯಕಯೋಗಿಗಳಾಗಿ ಶಾಂತಿ, ಸಾಮರಸ್ಯ, ದಯೆ, ಪ್ರೀತಿ, ವಾತ್ಸಲ್ಯ, ಸಮಾಜಮುಖಿ ಸೇವೆ, ನಿಸ್ವಾರ್ಥತೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಶ್ರೀಮಠವು ಇಂದಿಗೂ ಇವುಗಳನ್ನು ಅನೂಚಾನವಾಗಿ ನಡೆಸಿ ಕೊಂಡು ಬರುತ್ತಿದೆ. ಮಾತೃ ಹೃದಯಿಗಳಾದ ಶ್ರೀಗಳು ಕಿರಿಯ ವಯಸ್ಸಿನಲ್ಲಿಯೇ ಮಠದ ಜವಾಬ್ದಾರಿಯನ್ನು ಹೊರುವುದರೊಂದಿಗೆ ಅಂದಿನ ಕಾಲದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣಕ್ಕಾಗಿ ಪರದಾಡುತ್ತಿದ್ದ ವಿದ್ಯಾರ್ಥಿಗಳನ್ನು ಕಂಡು ಮರುಕಪಟ್ಟು, ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು.

ಆರ್ಥಿಕ ಸಂಕಷ್ಟದ ನಡುವೆಯೂ ಚಿನ್ನದ ಕರಡಿಗೆ ಅಡವಿಟ್ಟು ವಿದ್ಯಾರ್ಥಿನಿಲಯಗಳನ್ನು ನಡೆಸಿದುದು ಅವರ ತ್ಯಾಗ, ಮನೋಭಾವಕ್ಕೆ ಸಾಕ್ಷಿಯಾಗಿದೆ. ರಾಜೇಂದ್ರ ಶ್ರೀಗಳು ಬಡ ವಿದ್ಯಾರ್ಥಿಗಳ ಬಗ್ಗೆ ಅಪಾರ ಪ್ರೀತಿಯನ್ನು ಹೊಂದಿದ್ದರು. ಲೋಕ ಕಲ್ಯಾಣಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದರು. ಎಂತಹ ಕಷ್ಟ ಬಂದರೂ ಕೂಡ ಬಂದ ಭಕ್ತರನ್ನು ಪ್ರೀತಿ, ವಿಶ್ವಾಸದಿಂದ ಪ್ರಸಾದ ನೀಡಿಯೇ ಕಳುಹಿಸು ತ್ತಿದ್ದರು. ಶ್ರೀಗಳವರ ಸಾರ್ಥಕ ಜೀವನವು ದೂರದೃಷ್ಟಿ ಮತ್ತು ತಪಸ್ವಿ ಶಕ್ತಿಯಿಂದಾಗಿ ಇಂದು ಈ ಭಾಗದ ಗ್ರಾಮೀಣ ಪ್ರದೇಶದಲ್ಲಿ ಅಕ್ಷರದ ಹಣತೆಯನ್ನು ಹಚ್ಚಿ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿದರು. ಗ್ರಾಮೀಣ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯ ಒದಗಿಸಿದರೆ, ಸಮಾಜದ ಅಭಿವೃದ್ಧಿ ಸಾಧ್ಯ ಎಂಬ ದೂರದೃಷ್ಟಿಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಶಾಲಾ, ಕಾಲೇಜುಗಳನ್ನು ತೆರೆಯಲು ಭದ್ರಬುನಾದಿ ಹಾಕಿದವರು ರಾಜೇಂದ್ರ ಶ್ರೀಗಳು. ಅಂದು ಅವರು ಹಾಕಿಕೊಟ್ಟ ಅಡಿಪಾಯ ಇಂದು ಹೆಮ್ಮರವಾಗಿ ಜಗದಗಲಕ್ಕೆ ವಿಸ್ತಾರಗೊಂಡು ಬೆಳೆದು 300ಕ್ಕೂ ಹೆಚ್ಚು ಜೆಎಸ್‌ಎಸ್ ಸಂಸ್ಥೆಗಳನ್ನು ಒಳಗೊಂಡಿದ್ದು, ವಿಶ್ವ ಭೂಪಟದಲ್ಲಿ ಮಹತ್ವದ ದಾಖಲೆಯಾಗಿದೆ ಎಂದರೆ ಅದಕ್ಕೆ ರಾಜೇಂದ್ರ ಶ್ರೀಗಳ 'ತಪಸ್' ಸದೃಶವಾದ ಸಾಧನೆಯೇ ಕಾರಣವಾಗಿದೆ, ಇಂತಹ ಸಂಸ್ಥೆ ಮತ್ತು ಮಠ ಮೈಸೂರು ಜಿಲ್ಲೆಯಲ್ಲಿರುವುದು ನಮ್ಮೆಲ್ಲರಿಗೂ ಹೆಮ್ಮೆಯಾಗಿದೆ.

–ಪುರಶಿವಮೂರ್ತಿ ಎನ್.ಪಿ, ಶಿಕ್ಷಕರು, ನಂಜೇಪುರ.

### ಬಿಎಸ್‌ಎನ್‌ಎಲ್ ಚೇತರಿಸಿಕೊಳ್ಳಲಿದೆಯೇ?

ಮಾನ್ಯರೆ,

ಕೇಂದ್ರ ಸರ್ಕಾರ ಸ್ವಾಮ್ಯದ ಬಿಎಸ್‌ಎನ್‌ಎಲ್ ಕಂಪನಿ ಆರ್ಥಿಕವಾಗಿ ದಿವಾಳಿ ಆಗುತ್ತಿರುವ ವಿಚಾರ ಎಲ್ಲರಿಗೂ ಗೊತ್ತಿದೆ.

ನಷ್ಟವಾಗಿರುವ ಕಂಪನಿಯನ್ನು ಮೇಲೆತ್ತಲು ಕೇಂದ್ರ ಸರ್ಕಾರ 1.6 ಲಕ್ಷ ಕೋಟಿ ಪುನಶ್ಚೇತನ ಪ್ಯಾಕೇಜ್ ಅನ್ನು ಕೊಟ್ಟಿರುವುದಾಗಿ ಘೋಷಿಸಿದೆ. ದಶಕಗಳಿಂದ ನಷ್ಟವನ್ನು ಅನುಭವಿಸುತ್ತಿರುವ ಬಿಎಸ್‌ಎನ್‌ಎಲ್ ಕಂಪನಿ 2001 ರಿಂದ 2008ರ ತನಕ ಉತ್ತುಂಗದ ಲಾಭದಲ್ಲಿ ಇತ್ತು. ಟೆಲಿಕಾಂನಲ್ಲಿ ತನ್ನ ಆಧಿಪತ್ಯವನ್ನು ಸ್ಥಾಪಿಸಿತ್ತು. ಖಾಸಗಿ ಟೆಲಿಕಾಂ ಕಂಪನಿಗಳ ಪೈಪೋಟಿ ಹಾಗೂ ಆಧುನಿಕ ಸ್ಪರ್ಧಾತ್ಮಕ ಜಗತ್ತಿಗೆ ಒಗ್ಗಿಕೊಳ್ಳದೆ ಇರುವುದು ನಷ್ಟಕ್ಕೆ ಒಂದು ಕಾರಣ ಇರಬಹುದೇನೋ ಅನಿಸುತ್ತದೆ.

ಕೇಂದ್ರ ಸರ್ಕಾರ ಬಿಎಸ್‌ಎನ್‌ಎಲ್ ಅನ್ನು ಪುನಶ್ಚೇತನ ಗೊಳಿಸಲು 1.6 ಲಕ್ಷ ಕೋಟಿ ಪ್ಯಾಕೇಜ್ ಘೋಷಣೆ ಮಾಡಿದ್ದು, ಅದನ್ನು ಸದ್ಬಳಕೆ ಮಾಡಿಕೊಂಡು ಸ್ಪರ್ಧಾತ್ಮಕ ಜಗತ್ತಿಗೆ ಹೊಂದಿಕೊಳ್ಳುವ ಜೊತೆಗೆ ಪೈಪೋಟಿ ನೀಡಿ ನೌಕರರನ್ನು ಆಧುನಿಕತೆಯ ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವಂತೆ ರೂಪಿಸಿಕೊಂಡು ಈ ಸಂಸ್ಥೆ ಮತ್ತೆ ಚೇತರಿಸಿಕೊಳ್ಳಲಿದೆಯೇ?

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು

### ನೀರು ಪೋಲಾಗುವುದನ್ನು ತಪ್ಪಿಸಿ

ಮಾನ್ಯರೆ,

ಮೈಸೂರು ನಗರದ ಡಾ. ಅಂಬೇಡ್ಕರ್ ಮುಖ್ಯ ರಸ್ತೆಯ ಮತ್ತು ಆರ್‌ಟಿಓ ಕಚೇರಿ ಹತ್ತಿರ ಮಾರ್ಗ ಮಧ್ಯದಲ್ಲಿ ಗುಂಡಿ ಬಿದ್ದು ನೀರಿನ ಪೈಪ್‌ಲೈನ್ ಒಡೆದು ನೀರು ಪೋಲಾಗುತ್ತಿದೆ. ಈ ಮಾರ್ಗದಲ್ಲಿ ವಾಹನ ಸಂಚಾರ ದಟ್ಟವಾಗಿದ್ದು, ಅಕ್ಕ ಪಕ್ಕದಲ್ಲಿ ಶಾಲಾ ಕಾಲೇಜುಗಳಿವೆ. ಇದರಿಂದ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯಾಗಿದೆ. ಅವೈಜ್ಞಾನಿಕ ಕಾಮಗಾರಿಯಿಂದ ಡಾಂಬರು ಕಿತ್ತು ಗುಂಡಿಗಳು ನಿರ್ಮಾಣವಾಗುತ್ತಿವೆ. ಗುಂಡಿಗೆ ಬಿದ್ದು ಸಣ್ಣಪುಟ್ಟ ಅಪಘಾತಗಳು ಸಂಭವಿಸಿವೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತ್ತ ಗಮನಹರಿಸಿ ನೀರು ಪೋಲಾಗುವುದನ್ನು ತಪ್ಪಿಸಬೇಕೆಂದು ಈ ಮೂಲಕ ಮನವಿ.

–ಟಿ. ರವೀಂದ್ರ ರಾಜಣ್ಣ, ಅಶೋಕಪುರಂ, ಮೈಸೂರು.

### ರವೀಂದ್ರನಾಥ ಟಾಗೋರ್ ನೆನಪು ಅಗತ್ಯ

ಮಾನ್ಯರೆ,

ದೇಶವು ಸ್ವಾತಂತ್ರ್ಯ ದಿನದ 75ನೇ ವರ್ಷದ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಸಂಭ್ರಮದ ಈ ಸುಸಂದರ್ಭದಲ್ಲಿ ರಾಷ್ಟ್ರಗೀತೆ 'ಜನಗಣಮನ'ವನ್ನು ರಚಿಸಿದ ರಾಷ್ಟ್ರಕವಿ ರವೀಂದ್ರನಾಥ ಟಾಗೂರ್ ಅವರನ್ನು ಸ್ಮರಿಸಿಕೊಳ್ಳಬೇಕಾದ್ದು ನಮ್ಮೆಲ್ಲರ ಆದ್ಯ ಕರ್ತವ್ಯ. ಅವರ ರಚನೆಯ ಗೀತೆಯ ಪೂರ್ಣಪಾಠ ಸಾಹಿತ್ಯವನ್ನು ಪ್ರಕಟಗೊಳಿಸುವುದಲ್ಲದೆ ಅದರ ಪೂರ್ಣ ಪಾಠವನ್ನು ಗಾಯನ ಮಾಡುವುದು ಉಚಿತ ಎಂಬುದು ನನ್ನ ಅನಿಸಿಕೆ. ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಈ ಅವಧಿಯಲ್ಲಿ ಪ್ರತಿದಿನವೂ ಪ್ರಚುರಪಡಿಸುವುದು ರಾಷ್ಟ್ರಕವಿ ಅವರಿಗೆ ಭಾರತೀಯರಾದ ನಾವು ಸಲ್ಲಿಸುವ ರಾಷ್ಟ್ರ ಗೌರವವೆಂದು ನಂಬಿದ್ದೇನೆ.



ರಾಷ್ಟ್ರಕವಿ ಶ್ರೀ ರವೀಂದ್ರನಾಥ ಟಾಗೋರ್ ಅವರು ರಚಿಸಿದ ಈ ಗೀತೆಯ ಪೂರ್ಣ ಪಾಠ ಸಾಹಿತ್ಯವನ್ನು ನಮ್ಮ ಸ್ವಾತಂತ್ರ್ಯ ಗಳಿಕೆಯ ಪ್ರಾರಂಭಿಕ ವರ್ಷಗಳಲ್ಲಿ ಪ್ರಾಥಮಿಕ ಹಂತದ ಶಾಲಾ ಪಠ್ಯ ಪುಸ್ತಕಗಳಲ್ಲಿ ಮತ್ತು ಆಗಿನ ಮಗ್ಗಿ ಪುಸ್ತಕಗಳಲ್ಲಿ ರವೀಂದ್ರನಾಥ ಟಾಗೋರ್ ಅವರ ಬೆಳಗಿನ ಹಾಡು ಎಂಬ ಶೀರ್ಷಿಕೆಯಲ್ಲಿ ಪ್ರಕಟಗೊಳ್ಳುತ್ತಿತ್ತು. ಅದು ಪೂರ್ಣಪಾಠ ಸಾಹಿತ್ಯವನ್ನು ಹೊಂದಿತ್ತು. ಆ ಗೀತೆಯ ಆಯ್ದ ಭಾಗವು ರಾಷ್ಟ್ರಗೀತೆಯಾಗಿರುವ ಆ ಗೀತೆಯ ಪೂರ್ಣಪಾಠ ಸಾಹಿತ್ಯವನ್ನು ಪ್ರಚುರಪಡಿಸಿ ಈಗಿನ ಪೀಳಿಗೆಯವರಿಗೆ ಪರಿಚಯಗೊಳಿಸಬಯಸಿರುವುದು ನಂಬುತ್ತೇನೆ.

– ಜಿ.ಕೆ. ಲಕ್ಷ್ಮೀನರಸಿಂಹಯ್ಯ, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

# ಕಮಲಾದೇವಿ ಚಟ್ಟೋಪಾಧ್ಯಾಯ: ಭಾರತ ಕಂಡ ಅಪೂರ್ವ ನಾಯಕಿ



**ಲಂಡನ್ನಲ್ಲಿದ್ದಾಗಲೇ ಗಾಂಧೀಜಿ ಅವರು ಅಸಹಕಾರ ಚಳವಳಿಗೆ ಇತ್ತ ಕರೆ ಕಮಲಾದೇವಿಯವರನ್ನು ಭಾರತದತ್ತ ಸೆಳೆಯಿತು . 1932 ರಲ್ಲಿ ಭಾರತಕ್ಕೆ ಹಿಂದಿರುಗಿದ ಅವರು ಗಾಂಧೀಜಿ ಅವರು ಸ್ಥಾಪಿಸಿದ್ದ ಸೇವಾದಳವನ್ನು ಸೇರಿದ್ದೇ ಅಲ್ಲದೆ, ಈ ಸಂಸ್ಥೆಯ ಮಹಿಳಾ ಘಟಕದ ಮುಂದಾಳತ್ವವನ್ನು ವಹಿಸಿಕೊಂಡು ಮಹಿಳೆಯರನ್ನು ಸ್ವಯಂ ಸೇವಕರಾಗಲು ತರಬೇತಿಯನ್ನು ನೀಡಲಾರಂಭಿಸಿದರು. ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹವನ್ನು ಘೋಷಿಸಿದಾಗ ಕಡಲ ಕಿನಾರೆಯಲ್ಲಿ ಉಪ್ಪಿನ ತಯಾರಿಕಾ ಪ್ರಕ್ರಿಯೆಯ ಮುಂದಾಳತ್ವವನ್ನು ವಹಿಸಿದ್ದ 7 ಸದಸ್ಯರ ಸಮಿತಿಯಲ್ಲಿ ಇದ್ದ ಕಮಲಾದೇವಿಯವರು, ಆ ಸತ್ಯಾಗ್ರಹದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಕುರಿತು ಗಾಂಧೀಜಿ ಅವರಿಗಿದ್ದ ಅಸಮ್ಮತಿಯನ್ನು ಪ್ರಶ್ನಿಸಿ, ಚಳವಳಿ ಪುರುಷರಿಗೆ ಮಾತ್ರ ಸೀಮಿತವಾಗಿರಬಾರದೆಂದು ವಾದ ಮಾಡಿದ್ದರು.**

ಸ್ವತಂತ್ರ ಭಾರತದ ಅಮೃತ ಮಹೋತ್ಸವದ ಸಂಭ್ರಮಾಚಾರಣೆಯ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಹೆಗಲು ನೀಡಿದ ಧೀಮಂತ ಮಹಿಳೆಯರು ಕೆಲ ಮಾಧ್ಯಮ ಪ್ರಕಟಣೆಗಳು ಹಾಗೂ ಕಾರ್ಯಕ್ರಮಗಳು ಅಥವಾ ವೇದಿಕೆಗಳಲ್ಲಿ ಮಾತ್ರ ಗೋಚರತೆಯನ್ನು ಪಡೆದದ್ದು, ಸ್ವಾತಂತ್ರ್ಯ ಹೋರಾಟದ ಚರ್ಚೆ–ಸಂವಾದಗಳನ್ನೇ ಅಪೂರ್ಣ ವಾಗಿಸಿತು. ಮಹಿಳಾ ಸ್ವಾತಂತ್ರ್ಯ ಹೋರಾಟಗಾರರ ಸೀಮಾಂತೀಕರಣ ಇವತ್ತು, ನಿನ್ನೆಯದೇನಲ್ಲ. ವಸಾಹತು ಶಕ್ತಿಗಳ ವಿರುದ್ಧ ಸೆಟೆದು ನಿಂತು ಅವರನ್ನು ಧೈರ್ಯ ದಿಂದ ಎದುರಿಸಿ, ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಹೋರಾಡಿದ ಮಹಿಳೆಯರ ಉಲ್ಲೇಖವೇ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬಹುತೇಕ ಚಾರಿತ್ರಿಕ ದಾಖಲೆ ಗಳಲ್ಲಿ ಇಲ್ಲದಿರುವುದು, ಅದನ್ನು ಕುರಿತು ಎಲ್ಲೋ ಕೆಲವೆಡೆಗಳಲ್ಲಿ ಮಾತ್ರ ಪ್ರಸ್ತಾಪವಾಗಿರುವುದು ಇತಿಹಾಸ, ಪುರುಷ ಪ್ರಧಾನ್ಯತೆಯ ಹಿಡಿತದಿಂದ ವಿಮುಕ್ತಿಯನ್ನು ಪಡೆದಿಲ್ಲವೆಂಬುದಕ್ಕೆ ಒಂದು ನಿದರ್ಶನವಷ್ಟೇ.

ಈ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ತರುವ ಹೋರಾಟದಲ್ಲಿ ಮಹಿಳೆಯರ ಕೊಡುಗೆ ಎಷ್ಟು ಮುಖ್ಯವಾಗಿತ್ತೋ ಈ ಸಮಾಜದ ಪದರಗಳಲ್ಲಿ ಹಾಸು ಹೊಕ್ಕಾಗಿದ್ದ ಸಾಮಾಜಿಕ ಪಿಡುಗುಗಳ ವಿರುದ್ಧವೂ ಸಂಘರ್ಷವನ್ನು ಸಾರಿ ಮಹಿಳೆಯರ ಬದುಕನ್ನು ಹಸನು ಮಾಡಲು ಅವರು ಮಾಡಿದ ಪ್ರಯತ್ನಗಳೂ ಅಷ್ಟೇ ಮಹತ್ವವಾದದ್ದು. ದಾಸ್ಯತ್ವದ ವಿರುದ್ಧ ಪ್ರಶ್ನೆ–ಪ್ರತಿಭಟನೆಗಳ ಬಾವುಟ ಹಾರಿಸಿದ ಮಹಿಳೆಯರ ಪರಂಪರೆಯೇ ನಮ್ಮಲ್ಲಿದ್ದು, ಅದರಲ್ಲಿ ಕರ್ನಾಟಕದ ಮಹಿಳೆಯರಿಗೆ ವಿಶೇಷ ಸ್ಥಾನವಿದೆ. ಅಂಥಾ ಒಬ್ಬ ಅಪೂರ್ವ ಮಹಿಳೆಯ ಯಶೋಗಾಥೆ ಇಲ್ಲಿದೆ.

1903 ರಲ್ಲಿ ಮಂಗಳೂರಿನಲ್ಲಿ ಜನಿಸಿದ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಈ ದೇಶ ಕಂಡ ಅತ್ಯಂತ ಪ್ರಭಾವಿ, ಪ್ರತಿಭಾವಂತ ಮಹಿಳೆಯರ ಸಾಲಿನಲ್ಲಿ ಮುಂಚೂಣಿಯಲ್ಲಿದ್ದಾರೆ. ಅವರ ಸಾಧನೆಗಳು ಪಸರಿಸಿದ ಕ್ಷೇತ್ರಗಳನ್ನು ನೋಡಿದರೆ ಇಡೀ ಪ್ರಪಂಚವೇ ಬೆರಗಾಗಬೇಕು. ಸ್ವಾತಂತ್ರ್ಯ ಹೋರಾಟಗಾರ್ತಿ, ಸಮಾಜ ಸುಧಾರಕಿ, ಕರಕುಶಲ ಕಲೆಗಳ ಪುನರುತ್ಥಾನಕ್ಕೆ ಕಾರಣರಾದವರು, ತಳಸ್ತರದ ಸಮುದಾಯಗಳನ್ನು ಒಳಗೊಳ್ಳಲು ಸಹಕಾರಿ ಚಳವಳಿಯನ್ನು ರೂಪಿಸಿ ಬೆಳೆಸಿದವರು, ತಾವು ಬದುಕಿದ ರೀತಿಯಿಂದಲೇ ಲಿಂಗ ಸಮಾನತೆಯ ಪರಿಕಲ್ಪನೆ–ಆಚರಣೆಗಳೆರಡಕ್ಕೂ ಹೊಸ ಅರ್ಥವನ್ನೇ ನೀಡಿದವರು, ಕಲಾ ಪೋಷಕಿ–ಕಮಲಾದೇವಿ ಅವರ ವ್ಯಕ್ತಿತ್ವ ನವ ಭಾರತದ ಪರಿವರ್ತನೆಯ ಪಥವನ್ನು ರೂಪಿಸಿದವರಲ್ಲಿ ಎದ್ದು ಕಾಣುವಂತಹುದು, ಅವರ ಕೊಡುಗೆಗಳು ಕಾಲಾತೀತವಾದದ್ದು.

ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಬದುಕಿನ ಘಟನಾವಳಿಗಳನ್ನು, ಅವರ ಸಾಧನೆಯ ಹಾದಿಯ ಮೈಲಿಗಲ್ಲುಗಳನ್ನು ದಾಖಲಿಸುವುದು ಸುಲಭವಾದ ಕೆಲಸವಲ್ಲ. ಈ ಬರಹ ಆ ನಿಟ್ಟಿನಲ್ಲಿ ನಾನು ಮಾಡಿರುವ ಒಂದು ಸಣ್ಣ ಪ್ರಯತ್ನವಷ್ಟೇ.

ಮೊದಲಿಗೆ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಕಮಲಾದೇವಿಯವರು ಬಿಟ್ಟು ಹೋಗಿರುವ ಹೆಜ್ಜೆ ಗುರುತುಗಳ ಜಾಡಿನಲ್ಲಿ ಚಲಿಸುವುದು ಸ್ವತಂತ್ರ ಭಾರತ 75 ವರ್ಷಗಳನ್ನು ದಾಟಿರುವ ಈ ಹೊತ್ತಿನಲ್ಲಿ ಅತ್ಯಂತ ಅವಶ್ಯವೂ ಪ್ರಸ್ತುತವೂ ಆದದ್ದು. ಕಮಲಾದೇವಿ ಅವರು ತಮ್ಮ ಶಾಲಾ ಶಿಕ್ಷಣವನ್ನು ಕ್ಯಾಥೊಲಿಕ್ ಕಾನ್ವೆಂಟ್ ಮತ್ತು ಸಂತ ಮೇರಿ ಶಾಲೆಗಳಲ್ಲಿ ಪಡೆದು, ತಮ್ಮ ಧೈರ್ಯ, ಸಾಹಸ, ಸ್ವಾಭಿಮಾನ ಪ್ರವೃತ್ತಿ ಹಾಗೂ ಅಸಾಧಾರಣ ಪ್ರತಿಭೆಗಳಿಂದ ವಿಶೇಷ ಗಮನವನ್ನು ಸೆಳೆದಿದ್ದರು. ಅತಿ ಸಣ್ಣ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ಅವರಿಗೆ 14ನೇ ವಯಸ್ಸಿನಲ್ಲೇ ವಿವಾಹವಾಗಿ ಎರಡೇ ವರ್ಷಗಳ ನಂತರ ಅವರ ಪತಿ ಗತಿಸಿದರು. ಆದಾಗ್ಯೂ ಧೃತಿಗೆಡದೆ ಶಿಕ್ಷಣವನ್ನು ಮುಂದುವರಿಸಿದ್ದೇ ಅಲ್ಲದೆ ಚೆನ್ನೈನ ಕ್ವೀನ್ ಮೇರಿ ಕಾಲೇಜಿಗೆ ಸೇರಿ, ಉನ್ನತ ಶಿಕ್ಷಣವನ್ನು ಪಡೆದದ್ದು, ಖ್ಯಾತ ಕವಿ, ರಂಗತಜ್ಞ ಹಾಗೂ ಕಲಾವಿದ ಹರೀಂದ್ರನಾಥ ಚಟ್ಟೋಪಾಧ್ಯಾಯ ಅವರನ್ನು ವಿವಾಹವಾದದ್ದು ಅವರ ದಿಟ್ಟ ನಿಲುವುಗಳಿಗೆ ಸಾಕ್ಷಿ. ಆಗಿನ ಕಾಲಘಟ್ಟಕ್ಕೆ ಕಮಲಾದೇವಿ ಅವರ ಎರಡನೇ ವಿವಾಹ ಸಂಪ್ರದಾಯಸ್ಥ ವಲಯದಿಂದ ಸಾಕಷ್ಟು ವಿರೋಧವನ್ನೂ ಎದುರಿಸಿತು. ಆದರೆ ಕ್ರಾಂತಿಕಾರಿ ಮನೋಭಾವ ಹಾಗೂ ಪ್ರಗತಿಪರ ನಿಲುವುಗಳಿಗೆ ಬದ್ಧವಾಗಿದ್ದ ಅವರ ಜೀವನ ಶೈಲಿ ಕಮಲಾದೇವಿ ಅವರನ್ನು ವಿಚಲಿತಗೊಳಿಸಲಿಲ್ಲ. ಲಂಡನ್ನಲ್ಲಿದ್ದಾಗ ಬೆಡ್ ಫೋರ್ಡ್ ಕಾಲೇಜು ಮತ್ತು ಲಂಡನ್ ಸ್ಕೂಲ್ ಆಫ್ ಎಕಾಮಿಕ್ಸ್ ಸಂಸ್ಥೆಗಳಲ್ಲಿಯೂ ಅವರು ಶಿಕ್ಷಣವನ್ನು ಮುಂದುವರೆಸಿದ್ದು ಅವರು ಜ್ಞಾನಾರ್ಜನೆಗೆ ನೀಡಿದ್ದ ಪ್ರಾಮುಖ್ಯತೆಗೆ ಸಾಕ್ಷಿ.

ಸ್ವಾತಂತ್ರ ಸಂಗ್ರಾಮದಲ್ಲಿ ತಮ್ಮನ್ನು ತೊಡಗಿಸಿಗೊಂಡಿದ್ದ ರಾನಡೆ, ಗೋಖಲೆ, ರಮಾಬಾಯಿ, ಆನಿ ಬೆಸೆಂಟ್ ಮುಂತಾದವರ ಸಾಂಗತ್ಯ ಕಮಲಾದೇವಿ ಅವರ ಪೋಷಕರಿಗೆ ಇದ್ದಿದ್ದುದರಿಂದ ಸಣ್ಣ ವಯಸ್ಸಿಯಿಂದಲೇ ಅವರ ಆಸಕ್ತಿ ದೇಶದ ಸ್ವತಂತ್ರ ಚಳವಳಿಯತ್ತ ತಿರುಗಿತ್ತು. ಲಂಡನ್ನಲ್ಲಿದ್ದಾಗಲೇ ಗಾಂಧೀಜಿ ಅವರು ಅಸಹಕಾರ ಚಳವಳಿಗೆ ಇತ್ತ ಕರೆ ಕಮಲಾದೇವಿಯವರನ್ನು ಭಾರತದತ್ತ ಸೆಳೆಯಿತು. 1932 ರಲ್ಲಿ ಭಾರತಕ್ಕೆ ಹಿಂದಿರುಗಿದ ಅವರು ಗಾಂಧೀಜಿ ಅವರು ಸ್ಥಾಪಿಸಿದ್ದ ಸೇವಾದಳವನ್ನು ಸೇರಿದ್ದೇ ಅಲ್ಲದೆ, ಈ ಸಂಸ್ಥೆಯ ಮಹಿಳಾ ಘಟಕದ ಮುಂದಾಳತ್ವವನ್ನು ವಹಿಸಿಕೊಂಡು ಮಹಿಳೆಯರನ್ನು ಸ್ವಯಂ ಸೇವಕರಾಗಲು ತರಬೇತಿಯನ್ನು ನೀಡಲಾರಂಭಿಸಿದರು. ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹವನ್ನು ಘೋಷಿಸಿದಾಗ ಕಡಲ ಕಿನಾರೆಯಲ್ಲಿ ಉಪ್ಪಿನ ತಯಾರಿಕಾ ಪ್ರಕ್ರಿಯೆಯ ಮುಂದಾಳತ್ವವನ್ನು ವಹಿಸಿದ್ದ 7 ಸದಸ್ಯರ ಸಮಿತಿಯಲ್ಲಿ ಇದ್ದ ಕಮಲಾದೇವಿಯವರು, ಆ ಸತ್ಯಾಗ್ರಹದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಕುರಿತು ಗಾಂಧೀಜಿ ಅವರಿಗಿದ್ದ ಅಸಮ್ಮತಿಯನ್ನು ಪ್ರಶ್ನಿಸಿ, ಚಳವಳಿ ಪುರುಷರಿಗೆ ಮಾತ್ರ ಸೀಮಿತವಾಗಿರಬಾರದೆಂದು ವಾದ ಮಾಡಿದ್ದರು. ಉಪ್ಪಿನ ಸತ್ಯಾಗ್ರಹ ನಡೆಯುವಾಗ ಬ್ರಿಟಿಷ್ ಸೇನೆಯನ್ನು ಎದುರಿಸಿ ಅವರು ಭಾರತದ ಧ್ವಜದ ಮೇಲೆ ಆಗ ಹೊರಟಿದ್ದ ಆಕ್ರಮಣವನ್ನು ತಡೆಯಲು ನಮ್ಮ ಧ್ವಜವನ್ನು ಭದ್ರವಾಗಿ ಹಿಡಿದು ಕೊಂಡಿದ್ದು, ಬ್ರಿಟಿಷ್ ನ್ಯಾಯಾಧೀಶನ ಬಳಿಗೆ ಹೋಗಿ ತಾವು ತಯಾರಿಸಿದ 'ಸ್ವತಂತ್ರ ಉಪ್ಪ'ನ್ನು ಖರೀದಿಸಬೇಕೆಂದು ಕೇಳಿ, ಬಂಧನಕ್ಕೆ ಒಳಗಾಗಿದ್ದು, ಸ್ವಾತಂತ್ರ ಚಳವಳಿಯ ಇತಿಹಾಸದಲ್ಲಿಯೇ ಮಹತ್ವವಾದ ಘಟನೆಗಳು.

ಸ್ವಾತಂತ್ರ್ಯ ಎನ್ನುವುದಕ್ಕೆ ಸಾಮಾಜಿಕ ಆಯಾಮವೂ ಇದೆ ಎಂಬುದನ್ನು ತೋರಿಸಿದ್ದೇ ಅಲ್ಲದೆ, ಅದನ್ನು ಸಾಧಿಸಲು ಸಮಾಜದ ಅನುಕೂಲಗಳಿಂದ ವಂಚಿತರಾದವರ, ವಿಶೇಷವಾಗಿ ಮಹಿಳೆಯರ ಬದುಕಿನಲ್ಲಿ ಬದಲಾವಣೆಗಳನ್ನುತಂದಾಗ ಮಾತ್ರ ಎಂಬ ಸತ್ಯವನ್ನು ಒಂದು ಶತಮಾನದ ಹಿಂದೆಯೇ ಸಾರಿದ ಕಮಲಾದೇವಿಯವರ ಬದುಕೇ 'ವೈಯುಕ್ತಿಕವಾದದ್ದೇ ರಾಜಕೀಯವಾದದ್ದು' ಎಂಬ ಸ್ತ್ರೀವಾದಿ ನಿಲುವಿಗೆ ಅತ್ಯಂತ ಜ್ವಲಂತ ಉದಾಹರಣೆ.

ಕಮಲಾದೇವಿ ಅವರ ಮತ್ತೊಂದು ಆಸಕ್ತಿ ಮತ್ತು ಕಾರ್ಯಕ್ಷೇತ್ರವೆಂದರೆ ಪುರುಷಪ್ರಧಾನವಾಗಿದ್ದ ಅಧಿಕಾರ ವಲಯವನ್ನು ಬೇಧಿಸಿ ಶಾಸಕಾಂಗ ಸುಧಾರಣೆಗಳನ್ನು ತರುವುದು. 1926 ರಲ್ಲಿ ಆಲ್ ಇಂಡಿಯಾ ವಿಮೆನ್ಸ್ ಕಾನ್ ಫರೆನ್ಸ್ ನ ಸಂಸ್ಥಾಪಕರಾದ ಮಾರ್ಗರೆಟ್ ಕಸಿನ್ಸ್ ಅವರ ಪ್ರೇರಣೆಯಿಂದ ಮದರಾಸ್ ಪ್ರಾಂತೀಯ ಅಸೆಂಬ್ಲಿಯ ಸದಸ್ಯ ಸ್ಥಾನಕ್ಕೆ ಚುನಾವಣೆಯನ್ನು ಎದುರಿಸಿದರು. ಕೆಲವೇ ದಿನಗಳ ಕಾಲ ಪ್ರಚಾರ ಮಾಡಿದರೂ ಕೇವಲ 55 ಮತಗಳಿಂದ ಅವರು ಸೋಲನ್ನು ಅನುಭವಿಸಿದರು. ಭಾರತದಲ್ಲಿ ಶಾಸನ ಸಭೆಗೆ ಚುನಾವಣೆಯಲ್ಲಿ ಸ್ಪರ್ಧಿಸಿದ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆ ಅವರದು. ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಅಧ್ಯಕ್ಷರಾಗಿಯೂ ಅವರು ರಾಮ್ ಮನೋಹರ್ ಲೋಹಿಂಯಾ ಮತ್ತು ಜಯಪ್ರಕಾಶ್ ನಾರಾಯಣ್ ಅವರೊಡನೆ ಕಾರ್ಯ ನಿರ್ವಹಿಸಿದ್ದರು. ಆಲ್ ಇಂಡಿಯಾ ವಿಮೆನ್ಸ್ ಕಾನ್ಫರೆನ್ಸ್ ಸಂಘಟನಾ ಕಾರ್ಯದರ್ಶಿಯಾದ ಕಮಲಾದೇವಿಯವರು ಆ ಸಂಸ್ಥೆಯನ್ನು ದೇಶದ ನಾನಾ ಭಾಗಗಳಲ್ಲಿ ಕಟ್ಟಿ ಬೆಳೆಸಿದ್ದೇ ಅಲ್ಲದೆ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದರು.

ಕಮಲಾದೇವಿ ಅವರಿಗೆ ಅತ್ಯಂತ ಪ್ರಿಯವಾದ ಕ್ಷೇತ್ರಗಳೆಂದರೆ ಮಹಿಳಾ ಹಕ್ಕುಗಳಿಗಾಗಿ ಹೋರಾಟ, ಶಿಕ್ಷಣ ಹಾಗೂ ಕಲಾ ಪೋಷಣೆಗಾಗಿ ಸಂಸ್ಥೆಗಳ ಸ್ಥಾಪನೆ ಮತ್ತು ಬರೆವಣಿಗೆ. ಸಾರ್ವತ್ರಿಕ ನಾಗರಿಕ ಕಾಯಿದೆಯ ಜಾರಿ, ಬಾಲ್ಯ ವಿವಾಹದ ನಿಷೇಧ, ಮಹಿಳೆಯರು ಮನೆಯಲ್ಲಿ ಮಾಡುವ ವೇತನ ರಹಿತ ದುಡಿಮೆಯನ್ನು ಆರ್ಥಿಕ ಚಟುವಟಿಕೆಯೆಂದು ಪರಿಗಣಿಸುವುದು, ಅಸಂಘಟಿತ ಕ್ಷೇತ್ರದ ಮಹಿಳಾ ಕಾರ್ಮಿಕರ ರಕ್ಷಣೆ, ಮಹಿಳಾ ಶಿಕ್ಷಣದ ಗುಣಮಟ್ಟದ ಹೆಚ್ಚಳ–ಇವು ಲಿಂಗ ನ್ಯಾಯ ಸ್ಥಾಪನೆಗಾಗಿ ಕಮಲಾದೇವಿ ಅವರು ನಡೆಸಿದ ಹೋರಾಟಗಳಿಗೆ ಸಾಕ್ಷಿ. ದೇಶದ ವಿಭಜನೆಯಾಗಿ ಸಾವಿರಾರು ಜನ ನಿರಾಶ್ರಿತರಾದಾಗ ಅವರಿಗೆ ಆಶ್ರಯವನ್ನು ಕಲ್ಪಿಸಲು ಅವರು ಮಾಡಿದ ಕೆಲಸವೂ ಅವರ ಸಾಮಾಜಿಕ ಕಳಕಳಿಗೆ ಒಂದು ನಿದರ್ಶನವಷ್ಟೇ.

ಕಲಾ ಪ್ರೇಮಿ ಮತ್ತು ಸ್ವತಃ ಕಲಾವಿದೆಯೂ ಆಗಿದ್ದ ಕರಕುಶಲ ವಸ್ತುಗಳ ಪೋಷಣೆಯಲ್ಲಿ ಕಮಲಾದೇವಿ ಅವರಿಗಿದ್ದ ಆಸಕ್ತಿ ದೇಶದ ಅಗ್ರಮಾನ್ಯ ಸಂಸ್ಥೆಗಳಾದ ಸಂಗೀತ ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆ, ಅಖಿಲ ಭಾರತ ಕರಕುಶಲ ವಸ್ತುಗಳ ಮಂಡಳಿ, ಕಥಾ ಮತ್ತು ನೃತ್ಯ ಸಂಯೋಜನಾ ಸಂಸ್ಥೆ ಇವುಗಳನ್ನು ಸ್ಥಾಪಿಸುವುದಕ್ಕೆ ಕಾರಣವಾಗಿದ್ದು ಈ ಸಂಸ್ಥೆಗಳಿಗೆ ವಿಶ್ವ ಮಾನ್ಯತೆಯಿರುವುದು ತಿಳಿದ ವಿಷಯವೇ. ಇಷ್ಟೆಲ್ಲ ಚಟುವಟಿಕೆಗಳ ನಡುವೆ ಅವರು 20ಕ್ಕೂ ಹೆಚ್ಚು ಗ್ರಂಥಗಳನ್ನೂ ರಚಿಸಿದ್ದು ಅವುಗಳಿಗೆ ವ್ಯಾಪಕ ಗೋಚರತೆ ದೊರೆಯಿದೆ.

ಕಮಲಾದೇವಿ ಅವರ ಜೀವನಾನುಭವಗಳು ಮತ್ತು ಅವರು ಭಾರತೀಯ ಸಮಾಜದ ಬೆಳವಣಿಗೆ ಅವರು ನೀಡಿರುವ ಕೊಡುಗೆ ಮೌಲ್ಯ ಕಟ್ಟಲಾಗದ್ದು. ತಮ್ಮ 85ನೇ ವಯಸ್ಸಿನಲ್ಲಿ ನಿಧನರಾದ ಕಮಲಾದೇವಿ ಚಟ್ಟೋಪಾಧ್ಯಾಯ ಅವರಿಗೆ ಸಂದ ಮೇರು ಪ್ರಶಸಿಗಳಾಗಲಿ, ಅವರ ಪಾಲಿಗೆ ಬಂದ ಪ್ರತಿಷ್ಠಿತ ಹುದ್ದೆಗಳಾಗಲೀ ಎಂದೂ ಮುಖ್ಯವಾಗಲಿಲ್ಲ. ಇಂಥ ಪಾತ್ರ ಮಾದರಿಯ ಬದುಕೇ ಮುಂದಿನ ಜನಾಂಗಕ್ಕೆ ಬಹು ದೊಡ್ಡ ಪಾಠ.

# ಮರೆತವರುಂಟೆ ರಾಜಗುರು ತಿಲಕ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯ

**"ಕಾತರಾಃ ಪರದುಃಖೇಷು ನಿಜದುಃಖೇಷ್ವಕಾತರಾಃ
ಅರ್ಥೇಷ್ವಲೋಭಾ ಯಶಸಿ ಸಲೋಭಾಃಸಂತಿ ಸಾಧವಃ"**



ಪ್ರತಿಯೊಬ್ಬ ಮಾನವನೂ ಅರಿಯಲೇಬೇಕಾದ ಈ ಶ್ಲೋಕದ ಅರ್ಥವಿಷ್ಟೆ, ಬೇರೆಯವರಿಗೆ ದುಃಖ ಬಂದಾಗ ಸಜ್ಜನರು ಚಿಂತೆ ಹೊಂದುವರು. ತಮಗೇ ದುಃಖ ಬಂದಾಗ ಚಿಂತೆ ಹೊಂದುವುದಿಲ್ಲ. ಅವರಿಗೆ ಹಣದಲ್ಲಿ ಆಸೆಯಿಲ್ಲ. ಕೀರ್ತಿಯಲ್ಲೂ ಆಸೆಯಿಲ್ಲ.


ಜಗತ್ತಿನ ಎರಡನೇ ಮಹಾಯುದ್ಧದ ಕಾಲವದು. ಪ್ರಪಂಚದ ಅನೇಕ ದೇಶಗಳ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿತ್ತು. ಎಲ್ಲೆಡೆ ಆಹಾರ ಅಭಾವ ಆವರಿಸಿತ್ತು. ಆಗ ಭಾರತದ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗೇನೂ ಇರಲಿಲ್ಲ. ಆಹಾರಕ್ಕಾಗಿ ಅಂಗಲಾಚುವಂತಾಗಿತ್ತು. ಮೊದಲೇ ಬ್ರಿಟಿಷರ ಕಪಿಮುಷ್ಟಿಯಲ್ಲಿ ನಲುಗಿದ್ದ ಭಾರತ ಆಹಾರದ ಕೊರತೆಯಿಂದ ಮತ್ತಷ್ಟು ನಲುಗಿ ನರಳುವ ದುಃಸ್ಥಿತಿಯಲ್ಲಿತ್ತು. ಇಂಥ ಭೀಕರ ಕ್ಷಾಮ ಕಾಲದಲ್ಲಿ ಒಂದು ದಿನ ಚಾಮರಾಜನಗರದ ಜ್ಞಾನಾನ್ನ ದಾಸೋಹದ ಉಚಿತ ವಿದ್ಯಾರ್ಥಿನಿಲಯವೊಂದರಲ್ಲಿ ಊಟವಿಲ್ಲದೆ ನೂರಾರು ವಿದ್ಯಾರ್ಥಿಗಳು ಎರಡು ಮೂರು ದಿನಗಳೇ ಆಗಿದ್ದರಿಂದ ವಿದ್ಯಾರ್ಥಿನಿಲಯದ ಮೇನೇಜರ್ ಅಕ್ಕಪಕ್ಕದ ಮನೆಗಳಲ್ಲಿ ಬೇಡಿ ಒಂದಿಷ್ಟು ಅಕ್ಕಿ–ರಾಗಿ ತಂದು ವಿದ್ಯಾರ್ಥಿಗಳಿಗೆ ಅರೆಹೊಟ್ಟೆಯ ಊಟ ನೀಡಿದ್ದರು. ಹೀಗಾಗಿ ಎಲ್ಲಾ ವಿದ್ಯಾರ್ಥಿಗಳೂ ಆಹಾರದ ನಿರೀಕ್ಷೆಯಲ್ಲೇ ಹಸಿವು ತಾಳಲಾರದೆ ನೀರು ಕುಡಿದು ಬಳಲಿ ಬಹುಬೇಗನೆ ಮಲಗಿಬಿಟ್ಟಿದ್ದರು.

ತುಸು ಹೊತ್ತಿನ ನಂತರ ಇದ್ದಕ್ಕಿದ್ದಂತೆ ಆ ವಿದ್ಯಾರ್ಥಿಗಳಿಗೆ ಯಾರೋ ತಲೆ ನೇವರಿಸಿದಂತಾಯಿತು. ಕಣ್ಬಿಟ್ಟು ನೋಡಿದರೆ ಸಾಕ್ಷಾತ್ ಶಿವನ ಅವತಾರದಂತಿರುವ ಸ್ವಾಮೀಜಿ! ನಿದ್ರೆಗಣ್ಣಿನಲ್ಲೇ ವಿದ್ಯಾರ್ಥಿಗಳ ಕಣ್ಣುಗಳು ಸಂತಸದಿಂದ ಅರಳಿದ್ದವು. "ಬುದ್ದೀ...ಈ" ಎಂದು ಬಾಯಿ ತೆರೆದಿದ್ದವು. ಹೇಗೋ ಎಲ್ಲೆಲ್ಲೋ ಆಹಾರ ಪದಾರ್ಥಗಳನ್ನು ಹೊಂದಿಸಿಕೊಂಡು ಸರಿರಾತ್ರಿಯಲ್ಲೇ ಬಂದಿದ್ದ ಆ ಸ್ವಾಮೀಜಿ ತಕ್ಷಣವೆ ಅಡುಗೆ ಮಾಡಿಸಿ ವಿದ್ಯಾರ್ಥಿಗಳಿಗೆ ಊಟಕ್ಕೆ ಅಣಿಗೊಳಿಸಿದ್ದರು. ಅಷ್ಟೇ ಅಲ್ಲ "ಏಳಿ ಮಕ್ಕಳೆ ಬೇಗ ಎದ್ದೇಳಿ ಊಟ ಮಾಡುವಿರಂತೆ" ಎಂದು ಸ್ವತಃ ತಾವೇ ಎಲ್ಲಾ ವಿದ್ಯಾರ್ಥಿಗಳ ತಲೆ ನೇವರಿಸಿ ಎಬ್ಬಿಸಿ ಊಟ ಬಡಿಸಿದ್ದರು. ಇಂಥಾ ಕರುಣಾಳು ಸ್ವಾಮೀಜಿಯ ಹೃದಯವಂತಿಕೆಗೆ ಯಾವ ತಾಯಿ ಹೃದಯ ತಾನೇ ಸಮನಾದೀತು? ಆ ಕ್ಷಣ ಹಸಿದ ಆ ವಿದ್ಯಾರ್ಥಿ ಮಕ್ಕಳಿಗೆ ಆ ಸ್ವಾಮೀಜಿಯೇ ಮಹಾತಾಯಿ ಆಗಿದ್ದರು.

ಅಚ್ಚರಿಯೆಂದರೆ ಅವತ್ತು ಇಡೀ ದಿನ ಸ್ವಾಮೀಜಿ ಅವರು ಪೂಜೆಯನ್ನೇ ಮಾಡಿರಲಿಲ್ಲ. ವಿದ್ಯಾರ್ಥಿನಿಲಯಗಳಿಗೆ ಅನ್ನದಾಸೋಹಕ್ಕಾಗಿ ದವಸ–ಧಾನ್ಯ ಸಂಗ್ರಹಿಸಲು ಊರೂರು ಅಲೆದು ಸುಸ್ತಾಗಿದ್ದರು. ಪೂಜೆಯೇ ಇಲ್ಲವೆಂದ ಮೇಲೆ ಪ್ರಸಾದವೆಲ್ಲಿ ತಿಂದಾರು? ಹಾಗಾಗಿ ಅವರದು ಒಂದು ರೀತಿ ಉಪವಾಸ ವ್ರತವಾಗಿತ್ತು. ಇತರರ ಕಷ್ಟ ಕಳೆವುದೇ ಪೂಜೆಯೆಂದು, ನೊಂದವರ ಮುಖದಲ್ಲಿ ಸಂತಸ ಮೂಡಿಸುವುದೇ ಪ್ರಸಾದವೆಂದು ನಂಬಿದವರು. ತಮ್ಮ ಮಕ್ಕಳೆಲ್ಲ, ಅವರಂತೆ ಅವರಿಗೆ ತಾಯಿ ಮಕ್ಕಳೇ ಎಂದು ಭಾವಿಸಿದ್ದ ದಿವ್ಯ ಚೇತನವದು. ಹೀಗೆ ಮಹಾತಾಯಿಯಾಗಿ, ಮಹಾತಂದೆಯಾಗಿ, ಮಹಾಗುರುವಾಗಿ ನೂರಾರು, ಸಾವಿರಾರು ಬಡ ಮಕ್ಕಳಿಗೆ ಅನ್ನವಿಟ್ಟು ಅಕ್ಷರ ಕಲಿಸಿ ಎಲ್ಲರ ಬಾಳು ಬೆಳಗಿ ಬದುಕಿದ್ದಾಗಲೇ ದಂತಕಥೆಯಾಗಿದ್ದ ಆ ಸ್ವಾಮೀಜಿ ಬೇರಾರೂ ಅಲ್ಲ. ಅವರೇ ತ್ರಿವಿಧ ದಾಸೋಹಿ ಸಂತ ರಾಜಗುರು ತಿಲಕ, ಸುತ್ತೂರು ಶ್ರೀ ಮಠದ 23ನೆಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ಅಕ್ಷರಶಃ ಜಗದ್ಗುರುಗಳೇ ಆಗಿದ್ದವರು. ಇವರಿಂದಾಗಿ ಕಲಿತವರು, ಕಲಿತು ಬದುಕು ಕಟ್ಟಿಕೊಂಡವರು, ಬದುಕಿನಾಚೆಗೂ ಹೋಗಿ ನಾಡು ಕಟ್ಟಿದವರು, ನಾಡಿನಾಚೆಗೂ ಜಿಗಿದು ದೇಶಕಟ್ಟಿದವರು, ದೇಶದಿಂದಾಚೆಗೂ ಹಾರಿ ಜಗತ್ತು ಕಟ್ಟಿದವರು ಬಹಳಷ್ಟಿದ್ದಾರೆ. ಅವರೆಲ್ಲರಿಗೂ ಜೀವಧಾತು ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳು. ಜಗದ್ವಿಖ್ಯಾತ ಸುತ್ತೂರು ಶ್ರೀ ಮಠದ ಸರ್ವಾಂಗೀಣ ಅಭ್ಯುದಯದ ತಾಯಿ ಬೇರು ಸಹ ಇವರೇ ಎಂಬುದು ಸತ್ಯಸ್ಯ ಸತ್ಯ. ಅವರು ಸ್ಥಾಪಿಸಿದ ಉಚಿತ ವಿದ್ಯಾರ್ಥಿನಿಲಯಗಳು. ಎಂಥಾ ಸಂಕಷ್ಟ ಪರಿಸ್ಥಿತಿಯಲ್ಲೂ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಗುರುದೇವರಾಗಿ ಕಾಪಾಡುತಿತ್ತು. ಅದಕ್ಕೇ ಅವರನ್ನು ನಂಬಿ ಬಂದವರಿಗೆ ಕಲಿಯುಗದ ಕಾಮಧೇನು ಎಂತಲೂ, ಬೇಡಿ ಬಂದವರನ್ನು ಕೈಬಿಡದ ಕಲ್ಪವೃಕ್ಷ ಎಂತಲೂ ಜನ ಭಕ್ತಿಯಿಂದ ಕರೆಯುತ್ತಿದ್ದರು. ಅಪರಿಮಿತ ಅಭಿಮಾನದಿಂದ ಪೂಜಿಸುತ್ತಿದ್ದರು.

ಕಾಯಕಯೋಗಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕಾಲಮಾನ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಸ್ಥೆ (ಜೆಎಸ್‌ಎಸ್)ಯ ಪಾಲಿಗೆ ಸುವರ್ಣ ಕಾಲವೇ ಆಗಿತ್ತು. ಅಷ್ಟೇ ಅಲ್ಲ ಕನ್ನಡ ನಾಡಿಗೆ ಅದರಲ್ಲೂ ವಿಶೇಷವಾಗಿ ನಮ್ಮ ಮೈಸೂರು ಭಾಗದ ಜನತೆಗೆ ಬಂಗಾರದ ಯುಗವಾಗಿತ್ತು. ಅಂಥಾ ಬಂಗಾರದ ಮನಸ್ಸು ಈ ಸಂತ ಸಾಮ್ರಾಟ. ಸಾವಿರಾರು ಬಡ ಮಕ್ಕಳಿಗೆ ಉಚಿತವಾಗಿ ಶಿಕ್ಷಣ, ಊಟ, ವಸತಿ ಕಲ್ಪಿಸಿ ಅನಕ್ಷರಸ್ಥರೋ, ಅಲ್ಪ ವಿದ್ಯಾವಂತರೋ ಆಗಿಯೇ ಉಳಿಯುತ್ತಿದ್ದ ಅನೇಕನೇಕ ಮಂದಿಗೆ ಪೂರ್ಣ ವಿದ್ಯಾವಂತರನ್ನಾಗಿ ಮಾಡಿದ ಅವರು ಮಠಾಧೀಶರ ಸಾಲಿನಲ್ಲಿ ಅಗ್ರಪಕ್ತಿಯಲ್ಲಿದ್ದು ಮಾತೃ ಹೃದಯಿ ಆಗಿದ್ದರು. ತಮ್ಮ ಚಿಕಿತ್ಸಕ ಗುಣ, ಸೌಜನ್ಯ, ಸರಳತೆ ಮತ್ತು ಸಮಾಜಮುಖಿ ಚಿಂತನೆಗಳಿಂದಲೇ ಇಡೀ ನಾಡಿನ ಹೃನ್ಮನವನ್ನು ಗೆದ್ದಿದ್ದರು. ಹಾಗೆಯೇ ಇಡೀ ಜಗದ ದೃಷ್ಟಿ ತಮ್ಮತ್ತ ಬೀಳುವಂತೆ ಸಾರ್ಥಕತೆ ಮೆರೆದಿದ್ದರು.



ಬನ್ನೂರು
ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಶ್ರೀಮತ್ಸುತ್ತೂರು ವೀರ ಸಿಂಹಾಸನ ಮಹಾಸಂಸ್ಥಾನ ಮಠಕ್ಕೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವುಂಟು. ಯುದ್ಧಾಸಕ್ತನಾಗಿ ಯುದ್ಧೋನ್ಮಾದದಿಂದ ಬಂದಿದ್ದ ತಮಿಳುನಾಡಿನ ಚಕ್ರಾಧಿಪತಿ ರಾಜೇಂದ್ರ ಚೋಳ ಮತ್ತು ತಲಕಾಡಿನ ಗಂಗರ ದೊರೆ ರಾಚಮಲ್ಲರ ನಡುವೆ ಯುದ್ಧ ನಿಲ್ಲಿಸಿ, ಶಾಂತಿ–ಸಾಮರಸ್ಯಗಳನ್ನು ಮೂಡಿಸಿ ಅವರಿಂದ ಪೂಜನೀಯ ಗೌರವಕ್ಕೆ ಭಾಜನರಾದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಗಳವರಿಂದ ಸಾವಿರ ವರ್ಷಗಳ ಹಿಂದೆಯೇ ಸಮಾಜಮುಖಿ ಚಿಂತನೆಗಳ ಅಡಿಪಾಯದ ಶಾಂತಿಯ ಸಂಕೇತವಾಗಿ ಸಂಸ್ಥಾಪಿಸಿದ ಧರ್ಮ ಪೀಠವಿದು. ಇವತ್ತಿಗೂ ಈ ಪೀಠಕ್ಕೆ ಜಗದ್ಗುರುವಾದವರು. ಇದನ್ನು ಅಲಂಕರಿಸಿದ ಜಗದ್ಗುರುಗಳಿಗೂ ಅಷ್ಟೇ ಮಹತ್ವದ ಸ್ಥಾನವಿದೆ. ಈ ಪೀಠದ ಜಗದ್ಗುರು ಗಳ ದಿವ್ಯ ಪರಂಪರೆಯ ಪಥದಲ್ಲಿ ಮಹಾನ್ ಸಂತ ಶ್ರೇಷ್ಠರು, ಆಧ್ಯಾತ್ಮಿಕ ಸಾಧಕರು, ಸಮಾಜಮುಖಿ ಚಿಂತಕರು, ಅನುಭಾವಿಗಳು, ವಚನಕಾರರು, ದಾರ್ಶನಿಕರು, ದ್ರಷ್ಟಾರರು, ಗ್ರಂಥಕರ್ತರು, ಪರಿವ್ರಾಜಕರು ಆಗಿ ಹೋಗಿದ್ದು ಅವರವರ ಕಾಲ ಘಟ್ಟಗಳಲ್ಲಿ ಆರೋಗ್ಯಕರ ಸಮಾಜ ಕಟ್ಟುವಲ್ಲಿ ತೋರು ಮಾರ್ಗವಾಗಿದ್ದಾರೆ.

ಸುತ್ತೂರು ಶ್ರೀ ಮಠಕ್ಕೆ ಒಂದು ಬಹುಮುಖಿ ಆಯಾಮವನ್ನು ನೀಡಿ ಅದು ಜಗದ್ವಿಖ್ಯಾತಿಯಾಗಲು ಬಹುಮುಖ್ಯ ಕಾರಣಿಕ ಶಕ್ತಿಯಾದ ಇಂಥಾ ಸಂತಲೋಕದ ಮಹಾಬೆಳಕು ಈ ಭುವಿಯಲ್ಲಿ ಅವತರಿಸಿದ್ದೇ ಒಂದು ಪವಾಡ ಸದೃಶ. "ಸ್ವಾಮಿಗಳನ್ನು ಮಾಡಬಾರದು, ಸ್ವಾಮಿಗಳು ಆಗಬೇಕು" ಎಂಬ ಅರ್ಥಪೂರ್ಣ ನುಡಿಮುತ್ತಿಗೆ ಅನ್ವರ್ಥವಾಗಿ ಒಂದು ರೀತಿ ಹುಟ್ಟಿನಿಂದಲೇ ಸ್ವಾಮಿತ್ವ ಪಡೆದುಕೊಂಡು ಲೋಕಕ್ಕೆ ಬಂದವರಿವರು. ಪೂರ್ವಾಶ್ರಮ ಎಂಬ ಮಾತೇ ಇಲ್ಲದೆ ಹುಟ್ಟುತ್ತಲೇ 'ಶಿವರಾತ್ರಿ ರಾಜೇಂದ್ರ' ಎಂಬ ನಾಮಾಂಕಿತವನ್ನು ಪಡೆದ ಬಹು ಅಪರೂಪದ ಸ್ವಾಮಿಗಳಿವರು. ಇವರು ಜನಿಸಿದ್ದು 1916 ಆಗಸ್ಟ್ 29. ಪ್ರಕೃತಿ ಪ್ರಸನ್ನವಾಗಿ ತನ್ನ ತೇಜೋ ಕಾಂತಿಯನ್ನು ಚೆಲ್ಲುತ್ತಿದ್ದ ಶಾಲಿವಾಹನಶಕ 1838ನೇ ನಳನಾಮ ಸಂವತ್ಸರದ ಭಾದ್ರಪದ ಮಾಸ ಶುದ್ಧ ಪಾಡ್ಯದ ಸುಮುಹೂರ್ತ ಕಾಲವದು. ಜನ್ಮ ಸ್ಥಳ ಶ್ರೀಮಠದ ನೆಲೆ ಬೀಡಾದ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಸುತ್ತೂರು ಗ್ರಾಮ. ಜನ್ಮವಿತ್ತ ಪುಣ್ಯಾತ್ಮರು ತಾಯಿ ಶರಣೆ ಶಂಕರಮ್ಮ. ಇವರಿಗೆ ಮರಮ್ಮಣ್ಣಿ ಎಂಬ ಮತ್ತೊಂದು ಹೆಸರೂ ಉಂಟು. ತಂದೆ ಶರಣ ಮಲ್ಲಿಕಾರ್ಜುನ ದೇವರು. ಸುತ್ತೂರು ಶ್ರೀ ಮಠಕ್ಕೆ ಸಂಪೂರ್ಣವಾಗಿ ತಮ್ಮನ್ನು ಸಮರ್ಪಿಸಿ ಕೊಂಡಿದ್ದ ಶ್ರೀ ಶಿವರಾತ್ರೀಶ್ವರರ ಪರಮ ಭಕ್ತರಿವರು. ಇಂಥಾ ಶರಣ ದಂಪತಿಗಳ ಶಿಶು ಎಂದರೆ ಕೇಳಬೇಕೆ ಸುಸಂಸ್ಕಾರವೆಂಬುದು ಜನ್ಮತಃ ಮೈಗೂಡಿಕೊಂಡಿತ್ತು. ಬಾಲಕ ಶಿವರಾತ್ರಿ ರಾಜೇಂದ್ರರ ಬೆಳೆಯುವಿಕೆಯಲ್ಲಿ ಇಬ್ಬರು ಅಜ್ಜಿಯರ ಪಾತ್ರ ಬಹಳ ಮುಖ್ಯವಾಗಿತ್ತು.

ಒಬ್ಬ ಅಜ್ಜಿ ಇವರ ತಾಯಿಯ ತಾಯಿ ಮಲ್ಲಮ್ಮಯ್ಯ, ಇವರು ಜ್ಯೋತಿಷ್ಯದಲ್ಲಿ ಬಹಳ ಪರಿಣಿತಿ ಹೊಂದಿದ್ದರು. ಮತ್ತೊಬ್ಬ ಅಜ್ಜಿ ತಂದೆಯ ತಾಯಿ ಚಿಕ್ಕಬಸಮಯ್ಯ, ಇವರೂ ಸಹ ಹಸ್ತ ಸಾಮುದ್ರಿಕೆಯಲ್ಲಿ ಪ್ರಸಿದ್ಧರಾಗಿದ್ದರು. ತಂದೆ–ತಾಯಿಯ ಮಮತೆ, ಇಬ್ಬರು ಅಜ್ಜಿಯರ ಅಗಾಧ ಪ್ರೀತಿಯಿಂದ ಐದು ವರ್ಷಗಳವರೆಗೆ ತನ್ನ ಕುಟುಂಬದ ವಾತ್ಸಲ್ಯದ ಹಾರೈಕೆಯಲ್ಲಿ ಬೆಳೆದ ಶಿಶು ಶಿವರಾತ್ರಿ ರಾಜೇಂದ್ರರನ್ನು ಅನಂತರ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸ್ವಾಮಿಗಳಿಗೆ ಕೊಟ್ಟ ಮಾತಿನಂತೆ ಶ್ರೀ ಮಠಕ್ಕೆ ಒಪ್ಪಿಸಲಾಯಿತು. ಅಂದಿನಿಂದ ಬಾಲಕ ಶಿವರಾತ್ರಿ ರಾಜೇಂದ್ರರ ಸಂಪೂರ್ಣ ಹೊಣೆ ನೇರವಾಗಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳದಾಯಿತು. ದಿನದಿಂದ ದಿನಕ್ಕೆ ಬಾಲಕ ಶಿವರಾತ್ರಿ ರಾಜೇಂದ್ರ ಭವ್ಯವಾಗಿ ಬೆಳೆದು ದಿವ್ಯವಾಗಿ ಎಲ್ಲರನ್ನೂ, ಎಲ್ಲವನ್ನೂ ತನ್ನತ್ತ ಸೆಳೆದುಕೊಂಡರು. ಶ್ರೀ ಮಠದ ಉತ್ತರಾಧಿಕಾರಿಯಾದ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬಾಲಕ ಶಿವರಾತ್ರಿ ರಾಜೇಂದ್ರರು ಸುತ್ತೂರಿನಿಂದ ಮೈಸೂರು ನಗರದತ್ತ ಪಯಣಿಸಿದರು. ಅಲ್ಲಿ ಸಕಲ ವಿದ್ಯಾಪಾರಂಗತರಾಗಿ ರೂಪುಗೊಳ್ಳಲು ತೊಡಗಿದ ಅವರು ಶ್ರೀ ಮಠದಲ್ಲಿ ಹೊಸ ಇತಿಹಾಸವೊಂದನ್ನು ಬರೆಯುತ್ತ ಚಿಕ್ಕ ವಯಸ್ಸಿನಲ್ಲೇ ಮುಂದಾಗಿ ಬೆಳೆದು ನಿಂತರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

---

**PART TIME WORK**

ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ

**ಕೆಲಸ / JOB**

ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.

9108418233 9743217566

---

**ಮನೆ ಭೋಗ್ಯಕ್ಕಿದೆ**

30x40, 13.50 ಲಕ್ಷ ರೂ. 10 Years Lease, ನೆಲ ಮಹಡಿ, ಹೊಸದಾದ, 2BHK, Saint Anne's School ಹತ್ತ, ಗಣೇಶನಗರ, ಎನ್.ಆರ್.ಮೊಹಲ್ಲ, ಮೈಸೂರು.

9663944172

---

**Govt. Job ಇರುವ ವಿಧುರನಿಗೆ 2ನೇ ಸಂಬಂಧಕ್ಕೆ ವಧು ಬೇಕಾಗಿದ್ದಾರೆ**

Smart ಒಕ್ಕಲಿಗ ಗೌಡ Age 40/5.5/ B.E Govt. Engineer Well Settled ಇರುವಂತಹ ವಿಧುರನಿಗೆ ಯಾವುದೇ ಜಾತಿ ಅಭ್ಯಂತರವಿಲ್ಲದೆ, 2ನೇ ಸಂಬಂಧಕ್ಕೆ ವಿಧವೆ / ವಿಚ್ಛೇದಿತ ನೌಕರಸ್ಥೆ ವಧು ಬೇಕಾಗಿದ್ದಾರೆ. (ಮಕ್ಕಳಿದ್ದರೂ ಪರವಾಗಿಲ್ಲ), ಮೈಸೂರು

8310546187

---

**All Brands SOLAR WATER HEATER SALES & SERVICE**



Exchange Offer

SUN POWER SOLUTIONS Yeraganahalli, Mysore

9739804444

---

**ಬೇಕಾಗಿದ್ದಾರೆ**

ಗ್ರಾಫಿಕ್ ಡಿಸೈನರ್ (ಕೋರಲ್ ಡ್ರಾ, ಫೋಟೋಶಾಪ್) ಮತ್ತು ಆಫೀಸ್ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಆಕರ್ಷಕ ವೇತನ ಲಭ್ಯವಿದೆ.

Mob: 9535355376

---

30x40 ಸೈಟ್ 30 ಲಕ್ಷ NEW RT ನಗರದ ಹತ್ತಿರ. 20x30 ಹಳೆಮನೆ – 45 ಲಕ್ಷ ದಟ್ಟಗಳ್ಳಿ 40x60 ಸೈಟ್ 50 ಲಕ್ಷ. 30x50 ಸೈಟ್ 78 ಲಕ್ಷ ದಟ್ಟಗಳ್ಳಿ ಹತ್ತಿರ ಹಳೆ ಮನೆ, ಹೊಸಮನೆ, ಸೈಟ್ ಮಾರುವವರು – ಕೊಳ್ಳುವವರು ಸಂಪರ್ಕಿಸಿ:

9945042875

---

**ಉದ್ಯೋಗ ಅವಕಾಶ**

ಬಂದ ವಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೌಕರಿಗೆ ಊಟ, ವಸತಿಯಿರುತ್ತದೆ. ಸಂಬಳ:–ಟಿ, 15,200–86000

9740733021 / 9535028750

---

**ನಿಮ್ಮ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದೀರಾ ಇಲ್ಲಿದೆ ಪರಿಹಾರ**

Please Contact us for Psychology Counselling Yoga, Meditation & Life Skills @ your Door Steps in Homely Atmosphere

9886739125

Ref.: Dr.Shashank 9980936726 & Dr. Mansur: 9945939275

---

**ದೈವ ಕೃಪ**

ಕನ್ನಡ, ತಮಿಳ್, ತೆಲುಗು ದೇವಾಂಗ ಗಾಣಿಗ ವಕ್ಕಲಿಗ ಗೌಂಡರ್, ಮರಾಠ, ಕ್ರಿಶ್ಚಿಯನ್ ವಾಣಿಯರ್ ಮೊದಲಿಯಾರ್, ಬ್ರಾಹ್ಮಿನ್, SC, ST, ಒಕ್ಕಲಿಗ ಗೌಡ, ನಾಯಕ, ಲಿಂಗಾಯತ ಎಲ್ಲಾ ಜನಾಂಗದ ಎಲ್ಲಾ ವಿದ್ಯೆಯ ವಧು ವರರಿಗೆ ಹಾಗೂ 2ನೇ ಸಂಬಂಧಕ್ಕೆ ಕೂಡಲೇ ಸಂಪರ್ಕಿಸಿ. ಪುಟ್ಟಸ್ವಾಮಿ (OIC Rtd) ಮೈಸೂರು.–16. ಮುಂಗಡ ಹಣ ಬೇಕಿಲ್ಲ. 15 ದಿನ.

9902802154

---

**ಮನೆ ಬೇಕಾಗಿದೆ**

ವಿಜಯನಗರ 3ನೇ, 4ನೇ ಹಂತ ಅಥವಾ ಬೋಗಾದಿಯಲ್ಲಿ 4 ಅಥವಾ 5 ಬೆಡ್ ರೂಮ್ ಸೌಲಭ್ಯ ಇರುವ ಮನೆ ಬಾಡಿಗೆಗೆ ಬೇಕಾಗಿದೆ.

9845367333

---

**ಮನೆ ಮಾರಾಟಕ್ಕಿದೆ**

30 X 45

ನಂ. 134, 4ನೇ ಮುಖ್ಯ ರಸ್ತೆ, ಎ. ಬ್ಲಾಕ್, ಕುವೆಂಪುನಗರ, ಮೈಸೂರು – 570 023.

ಸಂಪರ್ಕಿಸಿ : Mob. : 9901721927 9900349557

---

**ABCD AnyBody Can Do BUSINESS**

* Looking for Serious People who are looking for Future Career Growth. Work for 25 Months and Lifetime Retirement after that.
* Requirement is 18yrs, PUC/ Graduates, MBA's Male /Female, Networkers, Exec's Housewives, Entrepreneurs, Who have URGE to Earn Money may Contact -

7406349666

---

**ಉಚಿತ ತರಬೇತಿ**

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:

7406375196, 9880548596

---

**WANTED TEACHERS**

Ideal School Yelwala, English Medium PUC, D.Ed, B.A, B.Sc, , D.Ed / B.Ed, Hindi Teacher to teach High School. RTD Teachers can also apply.

9900593211

---

**ಬೇಕಾಗಿದ್ದಾರೆ**

ಹೌಸ್ ಕೀಪಿಂಗ್ ಕೆಲಸಕ್ಕೆ ಬೆಳಿಗ್ಗೆ 7.30 to 1 pm ಮಧ್ಯಾಹ್ನ 2 pm to 6 pm ಸಂಪರ್ಕಿಸಿ: ಡಾ॥ ಪ್ರಸನ್ನ ಶಂಕರ್

9448069977

---

**ಬೇಕಾಗಿದ್ದಾರೆ**

ಶೋರೂಮ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ತಿಳಿವಳಿಕೆ ಇರುವ ಯುವತಿಯರು / ಯುವಕರು ಮತ್ತು ವರ್ಕ್‌ಶಾಪ್‌ನಲ್ಲಿ ವಾಟರ್ ವಾಶ್ ಮಾಡಲು ಯುವಕರು ಬೇಕಾಗಿದ್ದಾರೆ. ಸಂಪರ್ಕಿಸಿ: ನವೀನ್ ಮೋಟಾರ್ಸ್, ಬಿಎಮ್ ಬೈಪಾಸ್ ರೋಡ್, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ – 571105. ಸಂಪರ್ಕಿಸಿ:

7019156580 / 08222-253050

---

**ಬೋಳು ತಲೆಯ ಸಮಸ್ಯೆಯೇ?**



SMART HAIR FIXING

# 574, 9th Cross, Anikethana Road, Kuvempunagar, Mysuru

MYSURU 9611028523 BANGALORE 9343142258

---

**ಹೊಸ ಚೀಟಿಗಳ ಪ್ರಾರಂಭ**

ಸೀಟಿಂ ನರಸಿಂಹಸ್ವಾಮಿ ಚಿಟ್ಸ್ (ಹಾ) ಪ್ರೈಲಿ., ಮೈಸೂರು, ಹಾಸನ.

| ಚೀಟಿ ಮೊತ್ತ | ತಿಂಗಳು | ತಿಂಗಳ ಕಂತು | ನೆಟ್ ತಿಂಗಳಂತೆ |
|---|---|---|---|
| 1 ಲಕ್ಷ | 25 | 4000 | 3000 |
| 2 ಲಕ್ಷ | 25 | 8000 | 6000 |
| 5 ಲಕ್ಷ | 25 | 20,000 | 15,000 |
| 10 ಲಕ್ಷ | 50 | 20,000 | 15,000 |
| 10 ಲಕ್ಷ | 100 | 10,000 | 7,500 |
| 25 ಲಕ್ಷ | 100 | 25,000 | 18,750 |

7892303484 / 8749077453

---

**ತಕ್ಷಣ ಬೇಕಾಗಿದ್ದಾರೆ**

HOME BASSED E-CODE GAS SAFE

| EDUCATION | WORK TIME | SALARY |
|---|---|---|
| SSLC,PUC,DIP Any Degree | 4 HOURS Age Limit | 8000/- 18 to 35 |

ಮನೆಯಲ್ಲಿ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ android ಸ್ಮಾರ್ಟ್ ಫೋನ್ ಹೊಂದಿರಬೇಕು

9986621226

---

**ಪ್ರಸಿದ್ಧಿ ಹೊಂದುತ್ತಿರುವ ಕಾಫಿಪುಡಿ ಅಂಗಡಿ ಮಾರಾಟಕ್ಕಿದೆ**

ನಮ್ಮದೇ ಶೈಲಿಯ ಕಾಫಿಪುಡಿ ಕಲಿಸಿಕೊಡಲಾಗುವುದು ಸಂಪರ್ಕಿಸಿ:

8123094598

---

**ತಕ್ಷಣ ಬೇಕಾಗಿದ್ದಾರೆ**

1) ಸೆಕ್ಯೂರಿಟಿ ಸೂಪರ್‌ವೈಸರ್– PUC Pass / Fail
2) ಸೆಕ್ಯೂರಿಟಿ ಗಾರ್ಡ್ –SSLC Pass / Fail
3) ಹೌಸ್ ಕೀಪಿಂಗ್– ಹುಡುಗರು

ಸೌಲಭ್ಯ : ESI & PF, ಸ್ಥಳ: ಮೈಸೂರು, ಕೆ.ಆರ್.ಪೇಟೆ (ಚನಕುರಳ) ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ.

9739166772 / 9739199355

---

**ಕ್ರಯಪತ್ರ ಕಳೆದಿದೆ**

ಕಳೆದ ತಿಂಗಳು ಜೆರಾಕ್ಸ್ ಪ್ರತಿ ಪಡೆದು ಬರುವಾಗ ಮನೆ ನಂ. 37 ರ ಕ್ರಯಪತ್ರದ ಮೂಲ ದಾಖಲೆ ಕಳೆದಿದೆ. ದಯಮಾಡಿ ಯಾರಿಗಾದರೂ ಸಿಕ್ಕಿದಲ್ಲಿ ತಿಳಿಸಿರುವ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ. ಮಲ್ಲಿಕ ಬಾನು ನಂ.37, ನಾಥ್ ಈಸ್ಟ್, ಮಹದೇವಪುರ, ಕೆ.ಇ.ಬಿ. ಕಾಲೋನಿ, ಉದಯಗಿರಿ, ಮೈಸೂರು.

9342987394

---

**ಮನ ಬಾಡಿಗೆಗ ಬೇಕಾಗಿದ**

ಇಂಡಿಪೆಂಡೆಂಟ್ ಮನೆ 2BHK, Near ಬೋಗಾದಿ ಸರ್ಕಲ್, ವಿಜಯಶ್ರೀ ಪುರ, ಶಾರದಾದೇವಿನಗರ.

9482340654

---

**S M GOLD COMPANY**

ಗಿರವಿ ಚಿನ್ನಾಭರಣ ಖರೀದಿ 1 ಗ್ರಾಂ ಚಿನ್ನಕ್ಕೆ 5650

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)

9964522225

---

ಕೇರಳ ಶ್ರೀ ಪ್ರಖ್ಯಾತ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎನ್.ಕೃಷ್ಣಮೂರ್ತಿ

ಮೊ.: 9741806990

[illegible]

---

**ಬೇಕಾಗಿದ್ದಾರೆ**

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸಂಪರ್ಕಿಸಿ:

ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್

1. ಕೆನರಾ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.
2. ಪಿಳ್ಳದ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು.

---

**Security Agency HIRING**

Experienced

- Branch Manager
- Training Officer
- Area Relationship Manager (ARM)
- Client Relationship Officer (CRO)
- Female Back office Assistant

Contact through email : nightpatrollersmys@gmail.com

---

**Sudarshan Saur** SOLAR WATER HEATER



ATTRACTIVE OFFER ಸೇಲ್ಸ್ & ಸರ್ವಿಸ್ 10 ವರ್ಷಗಳ ಗ್ಯಾರಂಟಿ Bajaj Finserv Available

SUNZONE SOLAR SYSTEM Vishwamanava Double Road, Kuvempunagar, Mysuru

9845175443

---

**ಶ್ರೀ ನಿಧಿ ಟೂರ್ಸ್ ಮತ್ತು ಟ್ರಾವೆಲ್ಸ್**

ಎಂ.ಜಿ.ಎಸ್.ವಿಶಾಲೇಜ್ ಎದುರು, ಕೋಳಿಗಾಲ, ದಿ ಕೋ ಆಪರೇಟಿವ್ ಬ್ಯಾಂಕ್ ಬಿಲ್ಡಿಂಗ್, ಗಾಂಧಿನಗರ, ಮೈಸೂರು. 05–09–2022 ರಿಂದ 15 ದಿನಗಳ ಕಾಶಿ ಪ್ರವಾಸ ಕೊಲ್ಲಾಪುರ ಮಹಾಲಕ್ಷ್ಮಿ, ಮುಂಬೈ, ನಾಸಿಕ್, ಶಿರಡಿ, ಮಹಾಕಾಳೇಶ್ವರ, ಆಗ್ರ, ಮಥುರ, ಬೃಂದಾವನ, ದೆಹಲಿ, ಅಯೋಧ್ಯ, ಕಾಶಿ, ಪಂಢರಾಪುರ, ಮಂತ್ರಾಲಯ, ತಿರುಪತಿ, ಊಟ, ವಸತಿ, ಬಸ್ಸು ಸೇರಿರುತ್ತದೆ.

9740776666 / 7557553777

---

**ARCH CLINIC**

ತರಕಾರಿ ಮತ್ತು ಹಣ್ಣುಗಳ ರಸಸಾರ ಚಿಕಿತ್ಸ ಚಿಕಿತ್ಸೆ, ಪೈಲ್ಸ್, ಚರ್ಮ, ಕೀಲು ನೋವು ಮಹಿಳೆಯರ ಮಾಸಿಕ ಸಮಸ್ಯೆ ಮತ್ತು ಕಿಡ್ನಿ ಕಲ್ಲು 100% ಸುರಕ್ಷಿತ, ಶಸ್ತ್ರ ಚಿಕಿತ್ಸೆ ಇಲ್ಲದೇ, ವೈದ್ಯರ ಸಲಹೆಯಲ್ಲಿ

8867349785

ಬೋಗಾದಿ, ಮೈಸೂರು

---

**ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ**

NO TARGET, TYPING WORK

ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

---

**ಮುಡಾ ಅನುಮೋದಿತ ಸೈಟ್ ಮಾರಾಟಕ್ಕೆ**

20X30, 30X40 & 30X50 ಹೊಲಿಸ್ ಲೇಔಟ್ ಮತ್ತು ಲಲಿತಾದ್ರಿಪುರ ನಡುವೆ ರಿಂಗ್ ರೋಡ್ ಒಳಗೆ

ತಕ್ಷಣದ ನೋಂದಣಿ ಮತ್ತು ಕೂಡಲೆ ಮನೆ ಕಟ್ಟಬಹುದು ಬ್ಯಾಂಕ್ ಸಾಲ ಲಭ್ಯವಿದೆ

98800 65122 / 77956 09173

---

**WANTED**

B.E/DIPLOMA in ELECTRICAL Engg.

Contact: +91-9901922900

Santhosh Electricals, Mysuru

---

**WANTED**

- Accountant / Receptionist
- Tyre Fitter
- Alignment Technician
- Sales Supervisor
- Helper

EXPERIENCE IN TYRE SHOW ROOM

MADHU'S TYRE HOUSE Nazarbad, Mysore

Interested candidates can WhatsApp or Email

98458 49872 | mth1@mail.com

---

**ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್**

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

---

**ಗೌರಿ ಗಣೇಶ ಹಬ್ಬದ ರಿಯಾಯಿತಿ**

ನಮ್ಮಲ್ಲಿ ಗೌರಿ ಗಣೇಶ ಮಣ್ಣಿನ ಮೂರ್ತಿಗಳು ದೊರೆಯುತ್ತವೆ. ದಯವಿಟ್ಟು ಸಂಪರ್ಕಿಸಿ: ಎಸ್.ಹೆಚ್.ಪಾಳ್ಯ, ಹೆಚ್.ಡಿ.ಕೋಟೆ ಮುಖ್ಯ ರಸ್ತೆ, ಬಸ್ ಸ್ಟಾಂಡ್ ಹತ್ತಿರ, ಮೈಸೂರು – 570008. ಮಾಲೀಕರು: ಗುಣಶೇಖರ್

9036719781 / 8618709780

---

**SITE FOR SALE**

40x40 Corner site for sale at Vijayanagar 4th stage, ADHISHWAR NAGAR Attached to Rashtrotthana Vidya Kendra

9845809369 / 9620451565

---

ಕೊಳ್ಳೇಗಾಲ ಜ್ಯೋತಿಷ್ಯರು ನಂ.01 ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ

ಮೊ.: 9880583804

[illegible]

---

**ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ**

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:

ಪಾರಾವರ ಬಿಗಿನರ್ ... ಶಂಕರ್ ಕಾಂಪ್ಲೆಕ್ಸ್ ಹತ್ತಿರ, ... ಕೆ.ಆರ್.ಎಸ್. ಸರ್ಕಲ್ ಬಸ್ ಸ್ಟಾಪ್, ಮೈಸೂರು

7676844160 6361056646

---

**SDJ JEWELERS**

ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ. Qualification: SSLC/ PUC/ Degree/ Post Graduation ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ Salary : 20,000

8884304444

---

**CHANGE OF NAME**

I, Suchithra. J @ Subbalakshmi, residing at 78/1, 3rd Cross, Irwin Road, Lashkar Mohalla, Mysuru, declare that my name has been mentioned as Suchithra J. in my Aadhar Card, (3755 7192 4136) and bank pass book and other documents. But my name has been metioned as Subbalakshmi J. in my school records, hence I declare in front of Notary K.V. Vasu on 17.8.2022, that both the name i.e., Suchithra J. and Subbalakshmi J. are the names one and the same.

Sd/- Suchithra J.

---

ಮಾಂತ್ರಿಕ ಕೇರಳದ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್

ಮೊ.: 9731839596

[illegible]

---

**ಮನೆ ಸಾಲ**

ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.

# 2921/ಎ, ಸರಸ್ವತಿಪುರಂ, ಮೈಸೂರು 11B, 9&11A ಖಾತಾಗಳಿಗೂ ಮುಡಾ & ಕಾರ್ಪೋರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟ ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ. ಸಂಪರ್ಕಿಸಿ.

8088647887

---

**ತಕ್ಷಣ ಬೇಕಾಗಿದ್ದಾರೆ**

ಮೈಸೂರು, ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು, ಟೈಲರ್‌ಗಳು, ಹೆಲ್ಪರ್‌ಗಳು ಹಾಗೂ ಆಫೀಸ್ ಬಾಯ್ ಮತ್ತು ಹುಡುಗರು, ಹುಡುಗಿಯರುಗಳು ಬೇಕಾಗಿದ್ದಾರೆ. ESI & PF, ವಾರದ ರಜೆ, ಬೋನಸ್ ಹಾಗೂ ಕೆಲವು ಜಾಗಗಳಿಗೆ ಬಸ್ಸಿನ ವ್ಯವಸ್ಥೆಯಿರುವುದು. ಈ ಕ್ಷಣವೇ ಸಂಪರ್ಕಿಸಿ.

7795285485 / 8105249880

---

**ಬರವಣಿಗೆ ಕೆಲಸ**

ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ

9731891409

---

**ಮನೆಯಿಂದಲೇ ಸಂಪಾದಿಸಿ**

ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.

7795560970

---

**ಬೇಕಾಗಿದ್ದಾರೆ**

ನುಡಿ ಟೈಪಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ

ಸಂಬಳ 15000/-

Ph.9380142144

---

**ನೇರ ನೇಮಕಾತಿ**

ಮೈಸೂರಿನ ಕೈಗಾರಿಕಾ ಪ್ರದೇಶಗಳಾದ ಹೆಬ್ಬಾಳ್, ಕೂಟ ಗಳ್ಳಿ, ನಂಜನಗೂಡು, ಸರಸ್ವತಿಪುರಂ, ಬೋಗಾದಿ, ಎಸ್.ಆರ್.ಎಸ್.ಬಿ ಯಂತಹ ಮುಂತಾದ ಸ್ಥಳಗಳಲ್ಲಿರುವ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass/Fail ಆದ ಯುವಕ/ಯುವತಿಯರಿಗೆ Cashier, Billing, Reception, Admin, Assistant, Production, Packing, Helper, Labelling ಮುಂತಾದ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: 14000–39000 (ESI+PF+OT) ಸೇರಿ

9980850141 / 9663704915

---

ಮೈಸೂರಿನ ಹೆಸರಾಂತ ಆಸ್ಪತ್ರೆಯಲ್ಲಿ ಕ್ಯಾಂಟೀನ್ ಕೆಲಸಗಾರರು ಬೇಕಾಗಿದ್ದಾರೆ. ಕುಕ್, ಅಸಿಸ್ಟೆಂಟ್ ಕುಕ್, ಚೈನೀಸ್ ಕುಕ್, ಸಪ್ಲೈಯರ್, ಕಾಫಿ, ಟೀ, ಜ್ಯೂಸ್‌ಮೇಕರ್, ಕ್ಯಾಶಿಯರ್ (ಮಹಿಳೆ, ಬಿ.ಕಾಮ್), ಕ್ಲೀನಿಂಗ್ (ಮಹಿಳೆಯರು) ಊಟ, ವಸತಿ ಉಚಿತ

9731311817

---

**WANTED / REQUIRED**

Supervisor Job / Driver / Lady Cook for Madikeri Construction Site PUC/ Diploma / Any Degree.

9739247788

---

**ವಧು ಬೇಕಾಗಿದೆ**

ಬೆಂಗಳೂರು ನಗರದಲ್ಲಿ 10 ಸ್ವಂತ ಮನೆಗಳನ್ನು ಹೊಂದಿರುವ, ಒಂದು ಸೂಪರ್ ಮಾರ್ಕೆಟ್ ನಡೆಸುತ್ತಿರುವ ಬ್ರಾಹ್ಮಣ 36 ವರ್ಷದ ವ್ಯಾಪಾರೋದ್ಯಮಿ ವರನಿಗೆ ಹಿಂದೂ ಯಾವುದೇ ಜಾತಿಯ ವಧು ಬೇಕಾಗಿದೆ. ಪ್ರತಿ ತಿಂಗಳು ಒಟ್ಟಾರೆ ಆದಾಯ ಒಂದು ಲಕ್ಷ. ಜಾತಿ ಅಭ್ಯಂತರವಿಲ್ಲ (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

9019343201

---

**WANTED**

Client Care Executives - Female, 10th and above, Age : 20-35 years, Earn 7k upto 10k, Fixed Salary + Incentive. Interview 18th to 22 August 2022.

M.R.Associates Saraswathipuram, Mysuru

9900844455

---

**ಜಮೀನು ಮಾರಾಟಕ್ಕಿದೆ**

ಮೈಸೂರು ಜಿಲ್ಲೆ, ಕಾಳಮ್ಮಳ್ಳಿ ಮುಖ್ಯರಸ್ತೆಯಲ್ಲಿ 19 ಗುಂಟೆ ಸುತ್ತಲು ಕಾಂಪೌಂಡ್ ಗೇಟ್ ಪೂರ್ಣ ಅಭಿವೃದ್ಧಿ ಪಡಿಸಲಾಗಿದೆ. ಸಂಪರ್ಕಿಸಿ:

9845211818 9945661696

---

**ತಕ್ಷಣ ಬೇಕಾಗಿದ್ದಾರೆ**

ಪ್ರತಿಷ್ಠಿತ ನಾನ್ ಬ್ಯಾಂಕಿಂಗ್ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗ & ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಹುದ್ದೆ 1) ಸೇಲ್ಸ್ ಮ್ಯಾನೇಜರ್ (ಪ್ರತಿ ತಾಲ್ಲೂಕು ಜಿಲ್ಲೆ), 2) ಟೆಲಿಸೇಲ್ಸ್ ಎಕ್ಸಿಕ್ಯೂಟಿವ್, ಅರ್ಹತೆ:–Fresher @ Experience ಸಂಬಳ:– ಆಕರ್ಷಕ ಸಂಬಳ ಜೊತೆಗೆ ಇನ್ಸೆಂಟಿವ್ (Incentive) ಟಾರ್ಗೆಟ್ ಇರುತ್ತದೆ. ವಿದ್ಯಾರ್ಹತೆ: SSLC to any ಡಿಗ್ರಿ, ಸಂಪರ್ಕಿಸಿ

8050923846 / 0821-4255550

---

**ಹೆಸರು ಬದಲಾವಣೆ**

[illegible]

---

**R S Constructions Engineers & Contractors**

ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟದ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ. ದರ 1,70,000 ಪ್ರತಿ ಚದರ. ಹಳೆಯ & ಹೊಸ ಮನೆಗಳಿಗೆ Water Proofing ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:

9538575009 / 8660384527

---

**ಕೂಡಲೇ ಬೇಕಾಗಿದ್ದಾರೆ**

ಆಕರ್ಷಕ ಸಂಬಳದೊಂದಿಗೆ 12 ರಿಂದ 20 ಸಾವಿರದವರೆಗೂ ಸಂಪಾದಿಸಬಹುದು. ವೃದ್ಧರು ಮತ್ತು ರೋಗಿಗಳನ್ನು ನೋಡಿಕೊಳ್ಳಲು ಹೋಮ್ ನರ್ಸಿಂಗ್ ಕೆಲಸಕ್ಕೆ ಅನುಭವವುಳ್ಳ ಮಹಿಳೆಯರು ಹಾಗೂ ಪುರುಷರು ಹಾಗೂ ಹುಡುಗ – ಹುಡುಗಿಯರು ಕೂಡಲೇ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ: ಬೆಸ್ಟ್ ಹೋಮ್ ಕೇರ್

0821-2336935 9886045459 / 9886022944

---

**ಸಾಲ ಸೌಲಭ್ಯ**

ಪರ್ಸನಲ್, ವಾಣಿಜ್ಯ, ವ್ಯಾಪಾರ, ಸೈಟು / ಮನೆ ಖರೀದಿ. ಸಾಲಮಾಡ ಬಯಸುವವರು ಸಂಪರ್ಕಿಸಿ

8105366056

---

ಓಂ ಶ್ರೀ ಶಿವ ಶಂಕರಿ ಜ್ಯೋತಿಷ್ಯಾಲಯ ಪಂಡಿತ್ ಮೋಹನ್ ರಾವ್ ಶಾಸ್ತ್ರಿ

9535830344

ಸ್ತ್ರೀ ಪುರುಷ ಪ್ರೇಮ ವಿಚಾರ, ಅತ್ತೆ ಸೊಸೆ, ಜಗಳ ಸಂತಾನ, ಆರೋಗ್ಯ ಸಮಸ್ಯೆ, ವಿದ್ಯೆ, ವ್ಯಾಪಾರ ... ಯಾವುದೇ ಸಮಸ್ಯೆಗಳಿದ್ದರೂ ... 3 ದಿನದಲ್ಲಿ ಪರಿಹಾರ ... ನೇರವಾಗಿ ಭೇಟಿ ಕೊಡಿ.

---

**WANTED CHESS COACH**

"CHESS" Classes on Saturday & Sunday for 5 years & above.

* Required Chess Trainer (National / Sate / Senior Coach)

BIG BASE ACADEMY Sharadadevinagar, Mysore Tution Class for 1st to 10th Std (State / CBSC / ICSE)

9916777925 / 7760965075

---

**ಜಮೀನು ಮಾರಾಟಕ್ಕಿದೆ**

ಮೈಸೂರು ಜಿಲ್ಲೆ, ಮದುರಹುಂಡಿ ಗ್ರಾಮದಲ್ಲಿ 32 ಗುಂಟೆ ಹಾಗೂ 1 ಎಕರೆ 38 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:

8618848886 9945661696

---

**LOANS !**

Home Loans, Site Purchase, Mortgage Loans, Loans against Property, Four wheeler Loans in Mysore. Avail handsome Concession on various charges / Fees Contact:

9483300997

Purushottama W

---

**ATTENTION GOLDEN OPPORTUNITY**

ನಿವೃತ್ತ, ಸ್ವಯಂ ನಿವೃತ್ತ ಅಧಿಕಾರಿಗಳಿಗೆ ಹಾಗೂ ಗೃಹಿಣಿಯರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ಅರ್ಜಿಗಳನ್ನು ಆಫೀಸರ್ ಹುದ್ದೆಗೆ ಆಹ್ವಾನಿಸಲಾಗಿದೆ. Age above 30 yrs. ಸಂಪರ್ಕಿಸಿ:

9449152797 / 8660764095

---

**WANTED**

BE- Mech. Engineer, Helper, Fitter

7259016509 7259016512

---

**ಸೈಟುಗಳು ಮಾರಾಟಕ್ಕಿವೆ**

ಶ್ರೀರಾಂಪುರ ರಿಂಗ್ ರೋಡ್, ಮೈಸೂರು

8050345574

---

**WANTED FEMALE TELECALLERS**

Language: Kannada, English & Hindi, Qualification: SSLC / PUC / Degree / Post Graduation, Salary: Rs. 8,000 to Rs. 15,000 + Incentive

9538688412

---

**ಹೊಲಿಗೆ ತರಬೇತಿ ಕೇಂದ್ರ**

ನಮ್ಮಲ್ಲಿ ಹೊಲಿಗೆ ತರಬೇತಿಯನ್ನು ಉತ್ತಮ ರೀತಿಯಲ್ಲಿ ನೀಡಲಾಗುವುದು. ಸಂಪರ್ಕಿಸಿ: ಮಯೂರ ಸರ್ಕಲ್, ಹೆಬ್ಬಾಳ್

9741790299

---

**Business Loan ಬಿಸಿನೆಸ್ ಲೋನ್**

ವ್ಯಾಪಾರಕ್ಕಾಗಿ ಸಾಲ ಸೌಲಭ್ಯ ಸಣ್ಣ ಅಂಗಡಿ, ವ್ಯಾಪಾರಸ್ಥರು, ಹೋಟೆಲ್, ಬೇಕರಿ, ಚಿಲ್ಲರೆ ವ್ಯಾಪಾರಿಗಳು, ದೊಡ್ಡ ವ್ಯಾಪಾರಸ್ಥರು 1 ಲಕ್ಷ ದಿಂದ 75 ಲಕ್ಷದವರೆಗೆ

Email: royalfinsis@gmail.com

Office: 8884977977 8884633339

---

**ತಕ್ಷಣ ಬೇಕಾಗಿದ್ದಾರೆ**

ಹೋಟೆಲ್ಗಳು ವಿವಿಧೆಡೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು ಸಂಬಳ:– 15,000/-+W/o (8 hrs) ಊಟ, ತಿಂಡಿ ಸೌಲಭ್ಯವಿರುತ್ತದೆ.

9880727819 9620777819

---

**ಆದಿಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ**

BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed ವಿವಾಹ ನೋಂದಣಿಗೆ ಕರೆ ಮಾಡಿ (2nd Marriage Also)

9164743059

---

**WANTED IMMEDIATELY**

Accounts Executive (Female) Minimum 1/2 yr Experience in handling all account activities. Interested candidates are requested to send their CV to Whatsapp. Shivugowda

8722755998

---

**ತಕ್ಷಣ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**

ನಾರ್ತ್ ಇಂಡಿಯನ್, ತಂದೂರಿ ರೋಟಿ, ಚೈನೀಸ್ ಮತ್ತು ಚಾಟ್ಸ್ ಕೌಂಟರ್ ಬಾಯ್ ಮತ್ತು ಹೆಲ್ಪರ್, ಕ್ಲೀನರ್ ಬೇಕಾಗಿದ್ದಾರೆ.

8088337564

---

**SITE FOR SALE**

30x40

Jnanabharathi Layout 2nd Stage, Dadada Halli, East Face, MUDA Khata, Price: 21 Lacs

9342123373

---

**ಬಂಧನ ಮ್ಯಾರೇಜ್ ಬ್ಯೂರೋ**

ಎಲ್ಲಾ ಜಾತಿಯ ವಧು ವರರ ಅಂತರ್ಜಾಲ ತಾಣ www.bhandhana.com ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ದಾಸ್‌ಗುರೂಜಿ

6361740552

---

**ವಾಸ್ತು ಪ್ರಕಾರ**

ಹೊಸದಾಗಿ ಮನೆ ಮತ್ತು ಅಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ ಒಂದು ಚದರಕ್ಕೆ 1,60,000/– ಷರತ್ತು ಅನ್ವಯ ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್

9945442361 9380885787

---

**ಮೈಸೂರು ಮಿತ್ರ ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸರ್ಹವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. –ಜಾಹೀರಾತು ವ್ಯವಸ್ಥಾಪಕರು

---

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

# ಅಜ್ಞಾನ ಹೋಗಲಾಡಿಸಲು ಶಿಕ್ಷಣ ಅವಶ್ಯ: ಡಿ.ಸಿ.ತಮ್ಮಣ್ಣ



ಭಾರತೀನಗರ, ಆ17– ಅಜ್ಞಾನವನ್ನು ಹೋಗಲಾಡಿಸಲು ಶಿಕ್ಷಣ ಪ್ರತಿಯೊಬ್ಬರಿಗೂ ಅವಶ್ಯಕವಾಗಿದೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ಹೇಳಿದರು.

ಇಲ್ಲಿಗೆ ಸಮೀಪದ ಬಿದರಹೊಸಹಳ್ಳಿ ಆರ್ಯಭಟ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಆಯೋಜಿಸಿದ್ದ ಅಣ್ಣೂರು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಪಡೆದ ಕೂಡಲೇ ದೊಡ್ಡವರಾಗುವುದಿಲ್ಲ. ಸಂಸ್ಕಾರ, ಸಂಸ್ಕೃತಿ ಬೆಳೆಸಿಕೊಳ್ಳಬೇಕು. ಮಕ್ಕಳಿಗೆ ಮನೆಯಲ್ಲಿ ಪೋಷಕರು ಹಾಗೂ ಶಾಲೆಯಲ್ಲಿ ಶಿಕ್ಷಕರು ಉತ್ತಮ ಗುಣಗಳನ್ನು ಕಲಿಸಬೇಕು. ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ನಡೆದಾಗ ಮಾತ್ರ ದೇಶ ಸುಭೀಕ್ಷಗೊಳ್ಳುತ್ತದೆ ಎಂದರು. ನಾನು ಶಾಸಕನಾಗಿ ಬಂದ ಕೂಡಲೇ ಶಿಕ್ಷಣಕ್ಕಾಗಿ ಮೊದಲ ಆದ್ಯತೆ ನೀಡಿದೆ ಎಷ್ಟೋ ಮಕ್ಕಳು ಶಾಲೆಗೆ ಹೋಗದೆ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದ್ದರು. 12 ಪ್ರೌಢಶಾಲೆ, 6 ಪದವಿ ಪೂರ್ವ ಕಾಲೇಜು, 1 ಪದವಿ ಕಾಲೇಜು, 1 ಐಟಿಐ ಕಾಲೇಜು, 1 ಸ್ನಾತ್ತಕೋತ್ತರ ಕೇಂದ್ರ, 4 ಮೊರಾರ್ಜಿ ವಸತಿ ಶಾಲೆ ತೆರೆಯುವ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದ್ದೇನೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವು ಮಾತನಾಡಿ, ಮಕ್ಕಳಲ್ಲಿರುವ ಪ್ರತಿಭೆ ಹೊರತೆಗೆ ಯಲು ಇಂತಹ ವೇದಿಕೆಗಳು ಅತ್ಯವಶ್ಯಕ. ಹಾಗಾಗಿ ಶಿಕ್ಷಕರು ಮಕ್ಕಳ ಪ್ರತಿಭೆಯನ್ನು ಗುರುತಿಸಿ ಸಮಾಜಕ್ಕೆ ಪರಿಚಯಿಸಬೇಕು ಎಂದರು.

ಆರ್ಯಭಟ ಶಾಲೆಯ ಅಧ್ಯಕ್ಷ ಹೆಚ್.ಎಸ್. ಅರುಣ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿ ಹೆಚ್.ಎಸ್. ರವೀಶ್, ಸಿಟಿಇ ಮೈಸೂರು ಉಪನ್ಯಾಸಕ ರಾಜೇಂದ್ರ, ಕ್ಷೇತ್ರ ಸಮನ್ವಯಾಧಿಕಾರಿ ಹನುಮಶೆಟ್ಟಿ, ಸಾವಿತ್ರಿ ಬಾ ಫುಲೆ ಶಿಕ್ಷಿಯರ ಸಂಘದ ತಾಲೂಕು ಅಧ್ಯಕ್ಷೆ ಗಾಯಿತ್ರಿ, ಮುಖಂಡರಾದ ಸಿದ್ದೇಗೌಡ, ಎನ್.ಎಸ್.ನಂದೀಶ್, ನಾಗರಾಜು, ಹೇಮಾವತಿ, ಬೋರಯ್ಯ, ಹನುಮಂತಯ್ಯ, ನಾಗೇಂದ್ರ, ಶಿಕ್ಷಕರಾದ ರಾಮಕೃಷ್ಣ, ಹೆಚ್.ಎಸ್.ಕೃಷ್ಣ, ರಾಮ ಚಂದ್ರು, ಸುಬ್ರಮಣ್ಯ, ಲೋಕೇಶ್, ಸೌಮ್ಯ ಇದ್ದರು.

# ಮಕ್ಕಳೊಂದಿಗೆ ಬೆರೆತು ಖುಷಿಪಟ್ಟ ಜಿಲ್ಲಾಧಿಕಾರಿ





ಮಂಡ್ಯ, ಆ.17– ನಗರದ ಚಿಕ್ಕಮಂಡ್ಯ ಸರ್ಕಾರಿ ಪ್ರಾಥಮಿಕ ಶಾಲೆಗೆ ಜಿಲ್ಲಾಧಿಕಾರಿ ಎಸ್.ಅಶ್ವತಿ ಭೇಟಿ ನೀಡಿ, ಶಾಲೆಯ ಸ್ವಚ್ಛತೆ ಹಾಗೂ ಆಹಾರದ ಗುಣಮಟ್ಟವನ್ನು ಪರಿಶೀಲಿಸಿದರು. ಮಧ್ಯಾಹ್ನದ ಬಿಸಿಯೂಟಕ್ಕೆ ಗುಣಮಟ್ಟದ ಆಹಾರವನ್ನು ಮಕ್ಕಳಿಗೆ ನೀಡಬೇಕು ಎಂದು ಬಿಇಓ ಅವರಿಗೆ ಸೂಚನೆ ನೀಡಿದರು. ನಂತರ ಚಿಕ್ಕಮಂಡ್ಯ ಮತ್ತು ಸಾತನೂರು ಅಂಗನವಾಡಿ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಭೇಟಿ ನೀಡಿ ಮಾಹಿತಿ ಪಡೆದ ಅವರು, ಮಕ್ಕಳ ಆಟ–ಪಾಠ ಕಂಡು ಖುಷಿಪಟ್ಟರು.

## ನಾಳೆ ಶ್ರೀಕೃಷ್ಣ ಜಯಂತಿ



ಮಂಡ್ಯ, ಆ.17– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಕೃಷ್ಣ ಜಯಂತಿಯನ್ನು ಆ. 19ರಂದು ಬೆಳಗ್ಗೆ 11 ಗಂಟೆಗೆ ವಿದ್ಯಾನಗರದ ವಿ.ವಿ. ರಸ್ತೆಯ ಶ್ರೀಶಾರದ ಚಂದ್ರಮೌಳೇಶ್ವರ ಪ್ರಾರ್ಥನ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಅಬಕಾರಿ ಇಲಾಖೆಯ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಉದ್ಘಾಟಿಸಲಿದ್ದಾರೆ. ಮಂಡ್ಯ ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದು, ರೇಷ್ಮೆ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಡಾ.ಕೆ.ಸಿ. ನಾರಾಯಣಗೌಡ ಘನ ಉಪಸ್ಥಿತಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ ಅಂಬರೀಶ್, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಶಾಸಕರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ನಗರಸಭೆ ಅಧ್ಯಕ್ಷ ಹೆಚ್.ಎಸ್. ಮಂಜು, ಉಪಾಧ್ಯಕ್ಷೆ ಇಷ್ರತ್ ಫಾತಿಮಾ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ವಿ.ರಾಮ್ ಪ್ರಸಾದ್, ಮನೋಹರ್, ಇಸ್ಕಾನ್ ವ್ಯವಸ್ಥಾಪಕ ಅನಿಲೇಶ್ವರ ಹರಿದಾಸ್ ಪ್ರಭು, ಗೋವರ್ಧನ ಗುರುಕುಲ ಚಾರಿಟರಿ ಟ್ರಸ್ಟ್ ಮುಖ್ಯಸ್ಥ ಆರ್.ರಾಜೇಶ್, ಸೇರಿದಂತೆ ಇತರೆ ಗಣ್ಯರು ಭಾಗವಹಿಸಲಿದ್ದಾರೆ.

## ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಶ್ರೀರಂಗಪಟ್ಟಣ, ಆ.17– ತಾಲೂಕಿನ ಪಾಲಹಳ್ಳಿ ಗ್ರಾಮದ ಗಣಪತಿ ದೇವಸ್ಥಾನದಿಂದ ಹಳೆ ಬಿ.ಸಿ.ರಸ್ತೆವರೆಗಿನ ಕಾಮಗಾರಿಗೆ ಗ್ರಾಪಂ ಅಧ್ಯಕ್ಷೆ ಕಲಾ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷ ನವೀನ್‌ಕುಮಾರ್, ಸದಸ್ಯರಾದ ಸುನೀಲ್, ಟೆಂಪೋ ಪ್ರಕಾಶ್, ಲೋಕೇಶ್, ರಾಮಕೃಷ್ಣ, ವಿಮಲಾ, ಆಶಾ, ಜಯಲಕ್ಷ್ಮೀ, ಡೇರಿ ಅಧ್ಯಕ್ಷ ಕಿರಣ್, ಸದಸ್ಯ ಪುಟ್ಟರಾಮು, ಮುಖಂಡರಾದ ಪಿ.ಹೆಚ್.ನಾಗರಾಜು, ಶ್ರೀಧರ್, ವಾಸುದೇವ, ದಾಸೇಗೌಡ, ಜಯಶಂಕರ್, ಸುನೀಲ್‌ಕುಮಾರ್, ಸುಖೇಶ್ ಉಪಸ್ಥಿತರಿದ್ದರು.

# ಪಿಯು ವಿದ್ಯಾರ್ಥಿಗಳ ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ



ಚಿನಕುರಳಿ, ಆ.17– ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಎಸ್‌ಟಿಜಿ ಕಾಲೇಜಿನ ಆವರಣದಲ್ಲಿ ನಡೆದ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಧ್ವಜಾರೋಹಣ ನೆರವೇರಿಸಿದ ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳು ಮಾತೃಭಾಷೆಯೊಂದಿಗೆ ಇತರೆ ಭಾಷೆಗಳನ್ನು ಕಲಿಯಬೇಕು. ಈ ಮೂಲಕ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಬೇಕು. ಜೊತೆಗೆ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳಬೇಕು ಎಂದರು.

ಕ್ರೀಡಾ ಜ್ಯೋತಿ ಸ್ವೀಕರಿಸಿದ ಎಸ್‌ಟಿಜಿ ಶಿಕ್ಷಣ ಸಂಸ್ಥೆಯ ಸಿಇಓ ಸಿ.ಪಿ.ಶಿವರಾಜು ಮಾತನಾಡಿ, ವಿದ್ಯಾರ್ಥಿಗಳು ಕ್ರೀಡೆ ಹಾಗೂ ಶಿಕ್ಷಣ ಎರಡರಲ್ಲೂ ಸಾಧನೆ ಮಾಡಬೇಕು. ಕ್ರೀಡೆ ದೈಹಿಕ ಮತ್ತು ಮಾನಸಿಕ ಸದೃಢತೆ ಹೆಚ್ಚಿಸಿದರೆ, ಶಿಕ್ಷಣ ಮಕ್ಕಳಿಗೆ ಜ್ಞಾನಾರ್ಜನೆಯನ್ನು ಹೆಚ್ಚಿಸುವ ಕೆಲಸ ಮಾಡುತ್ತದೆ. ಜೀವನದಲ್ಲಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ನೆರವಾಗುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಮಾತನಾಡಿ, ಶಾಲಾ–ಕಾಲೇಜು ಹಂತದಲ್ಲಿ ನಡೆಯುವ ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾಗವಹಿಸಬೇಕು. ಕ್ರೀಡೆ ವಿದ್ಯಾರ್ಥಿಗಳ ದೈಹಿಕ ಸದೃಢತೆಗೆ ಸಹಕಾರಿಯಾಗಲಿದೆ. ಹೋಬಳಿ, ತಾಲೂಕು ಮಟ್ಟದಲ್ಲಿ ಭಾಗವಹಿಸಿ ಗೆಲುವು ಸಾಧಿಸಿ, ಜಿಲ್ಲೆ, ರಾಜ್ಯ ಮಟ್ಟದಲ್ಲಿ ಪ್ರತಿನಿಧಿಸಬೇಕು. ಜೊತೆಗೆ ಆರೋಗ್ಯದ ದೃಷ್ಟಿಯಿಂದ ನಿರಂತರವಾಗಿ ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಎಸ್‌ಟಿಜಿ ಪಿಯು ಕಾಲೇಜಿನ ಪ್ರಾಂಶುಪಾಲ ಮಾರುತಿ, ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮೀಗೌಡ(ಪಾಪಣ್ಣ), ಸದಸ್ಯರಾದ ಸಿ.ಎ.ಲೋಕೇಶ್, ಕೃಷ್ಣೇಗೌಡ, ನಾಗೇಗೌಡ, ಶ್ರೀನಿವಾಸ್, ದೇವರಾಜು, ಮಾಜಿ ಸದಸ್ಯ ಮಹದೇವು, ಕಾರ್ಯದರ್ಶಿ ಸಿ. ಹರೀಶ್‌ಕುಮಾರ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗ್ಗಣ್ಣೇಗೌಡ, ನಿರ್ದೇಶಕ ಮಂಜುನಾಥ್, ಡೇರಿ ಮಾಜಿ ಅಧ್ಯಕ್ಷ ರಮೇಶ್, ವರದರಾಜು, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ಪ್ರಾಂಶುಪಾಲರಾದ ಮಾಚಮ್ಮ, ಆಡಳಿತಾಧಿಕಾರಿ ನಿವೇದಿತಾ ನಾಗೇಗೌಡ, ಉಪಪ್ರಾಂಶುಪಾಲ ಡಾ.ನಿಶಾಂತ್ ಎ.ನಾಯ್ಡು ಪಿಆರ್‌ಓ ಗೋಪಾಲ್, ನೋಡಲ್ ಪ್ರಾಂಶುಪಾಲ ಶಿವಮಾದೇಗೌಡ, ಉಪನ್ಯಾಸಕರ ಸಂಘದ ಅಧ್ಯಕ್ಷ ರಾಮಕೃಷ್ಣೇಗೌಡ, ದೈಹಿಕ ಪರಿವೀಕ್ಷಕ ಬಸವರಾಜು, ಗ್ರೇಡ್–1 ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಶಿವಕುಮಾರ್ ಸೇರಿದಂತೆ ಹಲವರು ಹಾಜರಿದ್ದರು. ಕ್ರೀಡಾಕೂಟದಲ್ಲಿ ತಾಲೂಕಿನಿಂದ 14 ಪದವಿ ಪೂರ್ವ ಕಾಲೇಜುಗಳಿಂದ 700ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ದೇಶದ ಅಭಿವೃದ್ಧಿಗೆ ಶಿಕ್ಷಣ ಅಗತ್ಯ



ಶ್ರೀರಂಗಪಟ್ಟಣ, ಆ.17–ದೇಶದ ಅಭಿವೃದ್ಧಿಗೆ ಶಿಕ್ಷಣ ಅಗತ್ಯವಾಗಿದ್ದು, ಶಿಕ್ಷಣಕ್ಕೆ ಪ್ರತಿಯೊಬ್ಬರು ಹೆಚ್ಚಿನ ಮಹತ್ವ ನೀಡಬೇಕು ಎಂದು ಶಾಸಕ ರವಿಂದ್ರ ಶ್ರೀಕಂಠಯ್ಯ ಹೇಳಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ನಡೆದ 75ನೇ ಸ್ವಾತಂತ್ರ ಅಮೃತ ಮಹೋತ್ಸವ ಸಾಂಸ್ಕೃತಿಕ ವೇದಿಕೆ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ದಿನ ನಾವು ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸುವ ಮೂಲಕ ಅವರಿಗೆ ಗೌರವ ಸಲ್ಲಿಸಬೇಕು. ದೇಶಕ್ಕೆ ಸ್ವಾತಂತ್ರ್ಯ ಕೊಡಿಸಲು ಹಲವು ಮಹನೀಯರು ಹೋರಾಡಿದ್ದಾರೆ. ಜಗತ್ತಿನಲ್ಲಿ ಭಾರತ ಉತ್ತಮ ಹೆಸರು ಮಾಡಿದೆ ಎಂದರೆ, ಅದಕ್ಕೆ ಹೋರಾಟ ಮಾಡಿದ ಮಹನೀಯರೇ ಕಾರಣ ಎಂದರು.

ಇದೇ ವೇಳೆ ವಿಕಲ ಚೇತನರಿಗೆ ತ್ರಿಚಕ್ರ ಸ್ಕೂಟರ್ ವಿತರಿಸಲಾಯಿತು. ಬಳಿಕ ವಿವಿಧ ಶಾಲಾ– ಕಾಲೇಜು ವಿದ್ಯಾರ್ಥಿಗಳ ಸಾಂಸ್ಕೃತಿ ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷೆ ನಿರ್ಮಲಾ, ಉಪಾಧ್ಯಕ್ಷ ಕೃಷ್ಣಪ್ಪ, ತಹಸೀಲ್ದಾರ್ ಶ್ವೇತಾ, ತಾಪಂ ಇಓ ಬಿಂದು, ಡಿವೈಎಸ್‌ಪಿ ಸಂದೇಶ್‌ಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಶ್ರೀನಿವಾಸ್, ಬಿಇಓ ಅನಂತರಾಜು, ಕೃಷಿ ಸಹಾಯಕ ಅಧಿಕಾರಿ ನಿಶಾಂತ್‌ಕಿಲಾರ್, ತಾಲೂಕು ವೈದ್ಯಾಧಿಕಾರಿ ಡಾ.ವೆಂಕಟೇಶ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಮುಖಂಡರು ವೇದಿಕೆ ಇದ್ದರು.

# ರೈಲಿನಲ್ಲಿ ಮಾರಕಾಸ್ತ್ರ ಸಾಗಾಟ: ಮೂವರ ಬಂಧನ

ಮಂಡ್ಯ, ಆ.17– ರೈಲಿನಲ್ಲಿ ಮಾರಕಾಸ್ತ್ರಗಳನ್ನು ಸಾಗಿಸುತ್ತಿದ್ದ ಮೂವರನ್ನು ಮಂಡ್ಯ ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ರಿಂದ ಲಾಂಗು, ಚೂರಿ ಸೇರಿದಂತೆ ಹಲವು ಮಾರಕಾಸ್ತ್ರ ಗಳನ್ನು ವಶಕ್ಕೆ ಪಡೆದಿರುವ ಪೊಲೀಸರು, ಅವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದ್ದಾರೆ. ಆರೋಪಿಗಳು ಮೈಸೂರಿನಿಂದ ಮಾರಕಾಸ್ತ್ರ ಗಳನ್ನು ಹಿಡಿದು ಟಿಪ್ಪು ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಗಳೂರಿನತ್ತ ತೆರಳು ತ್ತಿದ್ದರು. ಟಿಪ್ಪು ಎಕ್ಸ್‌ಪ್ರೆಸ್ ಮೈಸೂರಿನಿಂದ ಹೊರಟರೆ ಮಂಡ್ಯ ಹೊರತು ಪಡಿಸಿ ನೇರ ಬೆಂಗಳೂರಿನಲ್ಲಿ ಮಾತ್ರ ನಿಲ್ಲಿಸುವುದರಿಂದ ಮಂಡ್ಯ ನಿಲ್ದಾಣದಲ್ಲಿ ರೈಲು ನಿಂತಾಗ ಮಾರಕಾಸ್ತ್ರಗಳನ್ನು ಸಾಗಿಸುತ್ತಿರುವ ಬಗ್ಗೆ ಅಕ್ಕಪಕ್ಕದವರು ಮಾಹಿತಿ ನೀಡಿದ್ದಾರೆ. ತಕ್ಷಣವೇ ಕಾರ್ಯಪ್ರವೃತ್ತರಾದ ಮಂಡ್ಯ ರೈಲ್ವೆ ಪೊಲೀಸರು 20ರಿಂದ 25 ವರ್ಷದ ವಯೋಮಾನದ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಈ ಸಂಬಂಧ ರೈಲ್ವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ



ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಗೃಹ ಕಚೇರಿಯಲ್ಲಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರನ್ನು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ ಸನ್ಮಾನಿಸಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಇನ್ನಿತರರಿದ್ದರು.



ಮೈಸೂರಿನ ಶ್ರೀ ಹರ್ಷ ರಸ್ತೆಯಲ್ಲಿರುವ ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಆವರಣದಲ್ಲಿ 75ನೇ ಸ್ವಾತಂತ್ರ್ಯ ದಿನವನ್ನು ಆಚರಣೆ ಮಾಡಲಾಯಿತು. ಬ್ಯಾಂಕ್‌ನ ಅಧ್ಯಕ್ಷ ಎಸ್.ಬಿ.ಶಿವ, ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ಹಾಜರಿದ್ದರು.

## ಅಪರಿಚಿತ ಶವಗಳ ಪತ್ತೆ

ಮೈಸೂರು, ಆ.17– ಮೈಸೂರು ನಗರದಲ್ಲಿ 2 ಪ್ರತ್ಯೇಕ ಪ್ರಕರಣಗಳಲ್ಲಿ ಅಪರಿಚಿತ ವ್ಯಕ್ತಿಗಳ ಮೃತದೇಹ ಪತ್ತೆಯಾಗಿವೆ.

ಮೈಸೂರು ವೀರನಗೆರೆಯ ಅಶೋಕ ರಸ್ತೆಯ ಗುಂಚಿ ವೃತ್ತದ ದಿ ಮೈಸೂರು ಟೈಪಿಂಗ್, ಷಾರ್ಟ್‌ಹ್ಯಾಂಡ್ ಮತ್ತು ಕಂಪ್ಯೂಟರ್ ತರಬೇತಿ ಸಂಸ್ಥೆಯ ಪಡಸಾಲೆಯಲ್ಲಿ ಆ.16ರಂದು ಬೆಳಗ್ಗೆ 9.30ರ ಸಮಯದಲ್ಲಿ ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆಯಾಗಿದ್ದು, ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೈಸೂರು ಸಯ್ಯಾಜಿರಾವ್ ರಸ್ತೆಯ ಹೈವೇ ವೃತ್ತದ ಬಳಿ ಇರುವ ಸಿಟಿ ಗ್ಲಾಸ್ ಎಂಪೋರಿಯ ಅಂಗಡಿ ಮುಂಭಾಗದ ಫುಟ್‌ಪಾತ್ ಮೇಲೆ 32 ವರ್ಷದ ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆಯಾಗಿದ್ದು, ಈ ಸಂಬಂಧ ಮಂಡಿ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ಮೃತರ ವಾರಸುದಾರರು ದೂ.ಸಂ:0821–2418339ನ್ನು ಸಂಪರ್ಕಿಸಬಹುದು.



ಮೈಸೂರು ತಾಲೂಕು ಹೂಟಗಳ್ಳಿ ಶ್ರೀರಾಮ ಸಂಘಟನೆಯಿಂದ ಸ್ವಾತಂತ್ರ್ಯದ ಅಮೃತೋತ್ಸವ ಆಚರಿಸಲಾಯಿತು.

## ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಆ. 17 – ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಎಂಆರ್‌ಸಿ ಕಣ್ಣಿನ ಆಸ್ಪತ್ರೆಯಲ್ಲಿ ನಾಳೆ (ಆ. 18) ಉಚಿತ ಬೃಹತ್ ಕಣ್ಣಿನ ತಪಾಸಣಾ ಶಿಬಿರವನ್ನು ಬೆಳಗ್ಗೆ 10.15ಕ್ಕೆ ಹಮ್ಮಿಕೊಳ್ಳಲಾಗಿದೆ. ಶಿಬಿರವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಉದ್ಘಾಟಿಸುವರು. ಹೆಚ್ಚಿನ ಮಾಹಿತಿಗೆ ದೂ. 0821–2472102, ಮೊ. 9480657223 ಸಂಪರ್ಕಿಸಬಹುದು.

# ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ವಾತಂತ್ರ್ಯೋತ್ಸವ



ಮೈಸೂರು, ಆ.17– ಆಜಾದಿ ಕಾ ಅಮೃತ ಮಹೋತ್ಸವ ಅಭಿಯಾನ ಅಂಗವಾಗಿ ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ವತಿಯಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಕಚೇರಿ ಮುಂಭಾಗ ಬಿಜೆಪಿ ಮೈಸೂರು ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಧ್ವಜಾರೋಹಣ ನೆರವೇರಿಸಿದರು. ನಂತರ 'ಹರ್ ಘರ್ ತಿರಂಗಾ' ಜಾಗೃತಿ ಯಾತ್ರೆಯ ಬೈಕ್ ಜಾಥಾಗೆ ಚಾಲನೆ ನೀಡಲಾಯಿತು. ಈ ಜಾಥಾ ಶಾರದಾದೇವಿನಗರ, ಜನತಾನಗರ, ರಾಮಕೃಷ್ಣನಗರ, ದಟ್ಟಗಳ್ಳಿ ಮೂಲಕ ಸಂಚರಿಸಿ ರಿಂಗ್ ರಸ್ತೆ ಮುಖಾಂತರ ಮಂಡಲ ಕಚೇರಿ ತಲುಪಿತು.

ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಬಿ.ಎಂ.ರಘು, ನಿಕಟಪೂರ್ವ ಜಿಲ್ಲಾಧ್ಯಕ್ಷ ಎಸ್.ಡಿ.ಮಹೇಂದ್ರ, ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ರಾಜಮಣಿ, ಈರೇಗೌಡ, ಉಪಾಧ್ಯಕ್ಷರಾಧ ರಾಕೇಶ್ ಭಟ್, ವಿಜಯ ಮಂಜುನಾಥ, ಗಿರೀಶ್, ಶಶಿಕಾಂತ್, ಪ್ರತಾಪ್, ಶಿವಕುಮಾರ್, ನಾಗರಾಜ್ ಜನ್ನು ಇನ್ನಿತರರಿದ್ದರು.

ಮೈಸೂರು ಮಿತ್ರ


# ಸಾಮಾಜಿಕ ಜಾಲತಾಣಗಳಿಂದ ಭಾಷೆಯ ಮೌಲ್ಯ, ಶುದ್ಧತೆ ಮರೆ

## ರಾಜೇಶ್ ಉತ್ತಪ್ಪ ಅವರು ಬರೆದಿರುವ 'ಕೋಲೆಲ್ಲಿಯಾ' ಪುಸ್ತಕ ಬಿಡುಗಡೆ




ಮಡಿಕೇರಿ,ಆ.17– ಅಕ್ಷರಗಳು ಕಾಗದ ಮತ್ತು ಲೇಖನಿಯಿಂದ ದೂರವಾಗಿ ಸಾಮಾಜಿಕ ಜಾಲತಾಣಗಳನ್ನು ಆವರಿಸಿಕೊಳ್ಳುತ್ತಿರುವುದರಿಂದ ಭಾಷೆಯ ಮೌಲ್ಯ ಹಾಗೂ ಶುದ್ಧತೆ ಮರೆಯಾಗುತ್ತಿದೆ ಎಂದು ಬ್ರಹ್ಮಗಿರಿ ವಾರಪತ್ರಿಕೆಯ ಸಂಪಾದಕ ಹಾಗೂ ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಡಾ.ಉಳ್ಳಿಯಡ ಎಂ.ಪೂವಯ್ಯ ಬೇಸರ ವ್ಯಕ್ತಪಡಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಕೊಡವ ಮಕ್ಕಡ ಕೂಟ ಪ್ರಕಟಿಸಿರುವ 58ನೇ ಪುಸ್ತಕ, ಬರಹಗಾರ ಉಡುವೆರ ರಾಜೇಶ್ ಉತ್ತಪ್ಪ ಅವರು ಬರೆದಿರುವ 'ಕೋಲೆಲ್ಲಿಯಾ' ಎಂಬ ಪುಸ್ತಕವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಇಂದು ಸಾಹಿತ್ಯ ಪುಸ್ತಕಗಳ ರೂಪವನ್ನು ಪಡೆದುಕೊಳ್ಳದೆ ಸಾಮಾಜಿಕ ಜಾಲತಾಣಗಳಿಗೆ ಸೀಮಿತವಾಗುತ್ತಿರುವುದರಿಂದ ಇತಿಮಿತಿ ಇಲ್ಲದ ಅಕ್ಷರಗಳ ಬಳಕೆಯಿಂದ ಭಾಷೆ ಕಲುಷಿತಗೊಳ್ಳುತ್ತಿದೆ. ಇದು ಹೀಗೆ ಮುಂದುವರೆದರೆ ಮುಂದೊಂದು ದಿನ ಭಾಷೆಯ ಮೌಲ್ಯ ಸಂಪೂರ್ಣವಾಗಿ ಕ್ಷೀಣಗೊಳ್ಳಲಿದೆ ಎಂದು ಆತಂಕ ವ್ಯಕ್ತಪಡಿಸಿದರು. ಉತ್ಸಾಹಿ ಬರಹಗಾರ ರಾಜೇಶ್ ಉತ್ತಪ್ಪ ಅವರು ರಚಿಸಿರುವ ಕೊಡವ ಭಾಷೆಯ ಪುಸ್ತಕ 'ಕೋಲೆಲ್ಲಿಯಾ'ದಲ್ಲಿ ಹಾಸ್ಯ, ಏಲಾಟ, ಕಾರ್ಯ, ಸಂದೇಶ, ಉಪದೇಶ, ಮುನ್ನೆಚ್ಚರಿಕೆ, ಅನುಭವ ಮತ್ತಿತರ 68 ವಿಚಾರಧಾರೆಗಳನ್ನು ಅಳವಡಿಸಲಾಗಿದೆ ಎಂದರು.

ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರು ಹಾಗೂ ತಿರಿ ಬೊಳ್ಚ ಕೊಡವ ಸಂಘದ ಅಧ್ಯಕ್ಷರಾದ ಉಳ್ಳಿಯಡ ಡಾಟಿ ಪೂವಯ್ಯ ಮಾತನಾಡಿ, ಜನರಿಗೆ ಉಪಯೋಗವಾಗುವಂತಹ ಸತ್ವಯುತ ಮತ್ತು ಮೌಲ್ಯಯುತ ಪುಸ್ತಕಗಳನ್ನು ಸಾಹಿತ್ಯಾಸಕ್ತರು ಕೇಳಿ ಪಡೆಯುತ್ತಾರೆ. ಈ ರೀತಿಯ ಪುಸ್ತಕಗಳು ಹೊರ ಬರಬೇಕೆ ಹೊರತು ಕೇವಲ ಸಂಖ್ಯಾ ಬಲ ಮತ್ತು ಸನ್ಮಾನಕ್ಕಾಗಿ ಬಿಡುಗಡೆಗೊಳಿಸಬಾರದು ಎಂದು ತಿಳಿಸಿದರು.

ಸಮಾಜ ಸೇವಕ ಚೆರುಮಾಡಂಡ ಸತೀಶ್ ಸೋಮಣ್ಣ ಮಾತನಾಡಿ, ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಪುಸ್ತಕಗಳನ್ನು ಓದುವವರ ಸಂಖ್ಯೆ ಕಡಿಮೆಯಾಗಿದೆ. ಪ್ರತಿಯೊಬ್ಬರು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು, ಆ ಮೂಲಕ ಬರಹಗಾರರಿಗೆ ಪ್ರೋತ್ಸಾಹ ನೀಡಬೇಕೆಂದು ಕರೆ ನೀಡಿದರು.

ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಉತ್ಸಾಹಿ ಬರಹಗಾರರಿಗೆ ಪ್ರೋತ್ಸಾಹ ನೀಡುತ್ತಾ ಬರುತ್ತಿರುವ ಕೂಟ ಇಲ್ಲಿಯವರೆಗೆ 58 ಪುಸ್ತಕಗಳನ್ನು ಹೊರ ತಂದಿದೆ ಎಂದರು. ದಕ್ಷಿಣ ಭಾರತದ ಮೊದಲ ಜಾನಪದ ಕೃತಿಯಾಗಿರುವ 'ಪಟ್ಟೋಲೆ ಪಳಮೆ'ಯನ್ನು ಹಂಚುತ್ತಿದೆ. ಆ ಮೂಲಕ ಕೊಡವ ಸಂಸ್ಕೃತಿಯ ಬೆಳವಣಿಗೆಗೂ ಕಾರಣವಾಗಿದೆ. ಹಲವು ರಸ್ತೆಗಳಿಗೆ ಕೊಂಗಂಡ ಗಣಪತಿ, ಹರದಾಸ ಅಪ್ಪನೆರವಂಡ ಅಪ್ಪಚ್ಚಕವಿ, ಕೊರವಂಡ ನಂಜಪ್ಪ, ಪಂದ್ಯಂಡ ಬೆಳ್ಯಪ್ಪ ಅವರ ಹೆಸರುಗಳನ್ನು ಮರು ನಾಮಕರಣ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಅಜ್ಜಮಾಡ ಕುಟುಂಬಸ್ಥರ ಪೂರ್ಣ ಸಹಕಾರದೊಂದಿಗೆ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ಅವರ ಪ್ರತಿಮೆ ಅನಾವರಣಗೊಳಿಸಲಾಗಿದೆ. ಅಜ್ಜಮಾಡ ದೇವಯ್ಯ ಅವರು ಹುತಾತ್ಮರಾದ ಸೆ.7ರಂದು ಪ್ರತಿವರ್ಷ ಅವರ ಸ್ಮರಣೆಗಾಗಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ ಎಂದು ಅಯ್ಯಪ್ಪ ತಿಳಿಸಿದರು.

ಬರಹಗಾರ ಉಡುವೆರ ರಾಜೇಶ್ ಉತ್ತಪ್ಪ 'ಕೋಲೆಲ್ಲಿಯಾ' ಪುಸ್ತಕದ ಕುರಿತು ಮಾತನಾಡಿದರು.

## ಇಂದು ಕೊಡಗಿಗೆ ಮಾಜಿ ಸಿಎಂ ಸಿದ್ದರಾಮಯ್ಯ ಭೇಟಿ



ಮಡಿಕೇರಿ,ಆ.17–ಕೊಡಗು ಜಿಲ್ಲೆಗೆ ಗುರುವಾರ(ಆ.18) ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಮಿಸಲಿದ್ದು, ಮಳೇ ಹಾನಿ ಪ್ರದೇಶಕ್ಕೆ ತೆರಳಿ ಪರಿಶೀಲನೆ ನಡೆಸಲಿದ್ದಾರೆ.

ಆನೆಚೌಕೂರು ಗೇಟ್ ಮೂಲಕ ಕೊಡಗಿಗೆ ಆಗಮಿಸುವ ಸಿದ್ದರಾಮಯ್ಯ ಅವರು ಬಳಿಕ ಮಡಿಕೇರಿ ಕಡೆಗೆ ಆಗಮಿಸಿ, 11 ಗಂಟೆಗೆ 2ನೇ ಮೊಣ್ಣಂಗೇರಿ, ಕರ್ತೋಜೆಯ ಅಪಾಯಕಾರಿ ಭೂ ಕುಸಿತವಾದ ಸ್ಥಳ, ದೇವರಕೊಲ್ಲಿ ಹೆದ್ದಾರಿ ಹಾನಿ, ಕೊಯನಾಡು ಕಿಂಡಿ ಅಣೆಕಟ್ಟು ಪ್ರವಾಹ ಸಂತ್ರಸ್ತರನ್ನು ಭೇಟಿ ಮಾಡಲಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ತಡೆಗೋಡೆ ಹಾನಿಯಾಗಿರುವುದನ್ನು ಪರಿಶೀಲನೆ ನಡೆಸಲಿದ್ದಾರೆ. ನಂತರ ಸುದ್ದಿ ಗೋಷ್ಠಿ ನಡೆಸಿ ಮಡಿಕೇರಿ–ಕುಶಾಲನಗರ ಮಾರ್ಗವಾಗಿ ನಿರ್ಗಮಿಸಲಿದ್ದಾರೆ ಎಂದು ಕೆಪಿಸಿಸಿ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ ಮಾಹಿತಿ ನೀಡಿದ್ದಾರೆ.

## ಆ.20, ಬಿಟ್ಟಂಗಾಲದಲ್ಲಿ ಡಿಸಿ ಗ್ರಾಮ ವಾಸ್ತವ್ಯ

ಮಡಿಕೇರಿ, ಆ.17– ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆ ಗ್ರಾಮ ವಾಸ್ತವ್ಯ ಕಾರ್ಯಕ್ರಮವು ಆಗಸ್ಟ್ 20 ರಂದು ಬೆಳಗ್ಗೆ 10 ಗಂಟೆಗೆ ವಿರಾಜಪೇಟೆ ಹೋಬಳಿಯ ಬಿಟ್ಟಂಗಾಲ ಗ್ರಾಮದ ಕೊಡಗು ಹೆಗ್ಗಡೆ ಸಮಾಜದ ಸಭಾಂಗಣದಲ್ಲಿ ನಡೆಯಲಿದೆ ಎಂದು ಡಿಸಿ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

## ಹಾರಂಗಿ ಜಲಾಶಯಕ್ಕೆ ಸಿದ್ಧಲಿಂಗ ಸ್ವಾಮೀಜಿ ಭೇಟಿ



ಕುಶಾಲನಗರ, ಆ.17– ಹಾರಂಗಿ ಜಲಾಶಯಕ್ಕೆ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಭೇಟಿ ನೀಡಿ ಜಲ ವೈಭವವನ್ನು ಕಣ್ತುಂಬಿಕೊಂಡರು. ಕಾರ್ಯನಿಮಿತ್ತ ಕುಶಾಲನಗರ ಭಾಗಕ್ಕೆ ಆಗಮಿಸಿದ್ದ ಶ್ರೀಗಳು ಸಂಜೆ ಹಾರಂಗಿಗೆ ಭೇಟಿ ನೀಡಿ ಜಲಾಶಯ ವೀಕ್ಷಿಸಿದರು.ಈ ಸಂದರ್ಭ ಹಾರಂಗಿ ಭದ್ರತಾ ವಿಭಾಗದ ಸಿಐ ಚಂದ್ರಶೇಖರ್, ಅಭಿಯಂತರ ಸಿದ್ದರಾಜು ಇದ್ದರು.

## ಮಡಿಕೇರಿ ದಸರಾಗೆ ಒಂದು ಕೋಟಿ ಮಂಜೂರು

### ಶಾಸಕ ಅಪ್ಪಚ್ಚು ರಂಜನ್ ಮನವಿಗೆ ಸ್ಪಂದಿಸಿದ ಸರ್ಕಾರ

- ಗೋಣಿಕೊಪ್ಪ ದಸರಾಕ್ಕೂ 50 ಲಕ್ಷ ರೂ. ಅನುದಾನ



ಮಡಿಕೇರಿ,ಆ.17– ಐತಿಹಾಸಿಕ ಹಿನ್ನೆಲೆಹೊಂದಿರುವ ಮಡಿಕೇರಿ ದಸರಾ ಜನೋತ್ಸವಕ್ಕೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು 1 ಕೋಟಿ ರೂ.ಗಳ ಅನುದಾನ ಮಂಜೂರು ಮಾಡಿದ್ದಾರೆ. ಮಡಿಕೇರಿ ದಸರಾಕ್ಕೆ ಅನುದಾನ ನೀಡುವಂತೆ ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್ ಅವರು ಮುಖ್ಯಮಂತ್ರಿಗಳಿಗೆ ಈ ಹಿಂದೆ ಮನವಿ ಮಾಡಿದ್ದರು. ಶಾಸಕರ ಮನವಿ ಹಿನ್ನೆಲೆಯಲ್ಲಿ 1 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ ಎಂದು ಮಡಿಕೇರಿ ದಸರಾ ಸಮಿತಿ ಕಾರ್ಯಾಧ್ಯಕ್ಷ ಕೆ.ಎಸ್. ರಮೇಶ್ ಮಾಹಿತಿ ನೀಡಿದ್ದಾರೆ. ಈ ಅನುದಾನವನ್ನು ಬಳಸಿಕೊಂಡು ಈ ಬಾರಿ ವಿಜೃಂಭಣೆಯ ದಸರಾ ಹಬ್ಬಕ್ಕೆ ಯೋಜನೆ ರೂಪಿಸಲಾಗುತ್ತದೆ ಎಂದು ರಮೇಶ್ ತಿಳಿಸಿದ್ದಾರೆ.

**ಗೋಣಿಕೊಪ್ಪಕ್ಕೆ 50 ಲಕ್ಷ:** ಗೋಣಿಕೊಪ್ಪ ದಸರಾಕ್ಕೂ ಸರ್ಕಾರ 50 ಲಕ್ಷ ರೂ. ಅನುದಾನವನ್ನು ಬಿಡುಗಡೆ ಮಾಡಿದೆ. ಬೆಂಗಳೂರಿನ ರೇಸ್ ಕೋರ್ಸ್‌ನಲ್ಲಿರುವ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಅಧಿಕೃತ ಕಚೇರಿಯಲ್ಲಿ ರಾಜ್ಯ ಸರ್ಕಾರಿ ಜಮೀನು ಸಂರಕ್ಷಣಾ ಸಮಿತಿ ಅಧ್ಯಕ್ಷ, ವಿರಾಜಪೇಟೆ ಕ್ಷೇತ್ರ ಶಾಸಕ ಕೆ.ಜಿ. ಬೋಪಯ್ಯ ಅವರು ಗೋಣಿಕೊಪ್ಪ ದಸರಾ ಅನುದಾನಕ್ಕೆ ಮನವಿ ಸಲ್ಲಿಸಿದರು. ಈ ಮನವಿಗೆ ಸ್ಪಂದಿಸಿದ ಸಿಎಂ 50 ಲಕ್ಷ ರೂ. ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಈ ಸಂದರ್ಭ ಜಿಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಹಾಗೂ ದಸರಾ ಸಮಿತಿ ಗೌರವಾಧ್ಯಕ್ಷ ಸಿ.ಕೆ. ಬೋಪಣ್ಣ ಮತ್ತು ಬಿ.ಎನ್.ಪ್ರಕಾಶ್, ಗೋಣಿಕೊಪ್ಪ ಶ್ರೀ ಕಾವೇರಿ ದಸರಾ ಸಮಿತಿ ಅಧ್ಯಕ್ಷ ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಜಿಮ್ಮ ಸುಬ್ಬಯ್ಯ ಹಾಜರಿದ್ದರು.

## ಗಾಂಜಾ ಮಾರುತ್ತಿದ್ದ ಐವರ ಬಂಧನ



ಕುಶಾಲನಗರ, ಆ.17– ಸಮೀಪದ ಕೂಡುಮಂಗಳೂರು ಸರ್ಕಾರಿ ಪ್ರಾಥಮಿಕ ಶಾಲೆಯ ಮೈದಾನದ ವೇದಿಕೆಯ ಬಳಿ ಕಾನೂನು ಬಾಹಿರವಾಗಿ ಗಾಂಜಾವನ್ನು ಮಾರಾಟ ಮಾಡುತ್ತಿದ್ದ ಐವರು ಆರೋಪಿಗಳನ್ನು ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಗ್ರಾಮಾಂತರ ಪಿಎಸ್‌ಐ ಚಂದ್ರಶೇಖರ್ ಅವರ ತಂಡವು ದಾಳಿ ಮಾಡಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದು, 30 ಸಾವಿರ ರೂ. ಬೆಲೆ ಬಾಳುವ ಒಂದು ಕೆಜಿ 915 ಗ್ರಾಂ ಒಣಗಿದ ಗಾಂಜಾ, 2,910 ರೂ ನಗದು, ಒಂದು ಸ್ಕೂಟಿ, 3 ಬೈಕ್‌ಗಳನ್ನು ಸೇರಿದಂತೆ ವಿವಿಧ ಕಂಪನಿಯ 6 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಚೇತನ್, ಕಿರಣ್ ಕುಮಾರ್, ಪ್ರವೀಣ್, ಸೂರ್ಯ, ಪ್ರತಾಪ್ ಎಂಬವರನ್ನು ಬಂಧಿಸಿ ಪ್ರಕರಣವನ್ನು ದಾಖಲಿಸಿಕೊಂಡು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಕಾರ್ಯಾಚರಣೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಎಂ.ಎ.ಅಯ್ಯಪ್ಪ ನವರ ನಿರ್ದೇಶನದಂತೆ ಉಪ ಅಧೀಕ್ಷಕ ಆರ್.ವಿ.ಗಂಗಾಧರಪ್ಪನವರ ಮಾರ್ಗದರ್ಶನದಲ್ಲಿ ಕುಶಾಲನಗರ ವೃತ್ತ ನಿರೀಕ್ಷಕರಾದ ಬಿ.ಜಿ.ಮಹೇಶ್ ಸೂಚನೆಯಂತೆ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಹೆಚ್.ವಿ.ಚಂದ್ರಶೇಖರ್, ಪಿಎಸ್‌ಐ ಭಾರತಿ, ಎಎಸ್‌ಐಗಳಾದ ಎಂ.ಎ. ಗೋಪಾಲ್, ಕುಮಾರಿ, ಸಿಬ್ಬಂದಿಗಳು ಭಾಗವಹಿಸಿದ್ದರು.

## ಶಿರಂಗಾಲ ಗ್ರಾಪಂ ಅಧ್ಯಕ್ಷೆ ಭಾಗೀರಥಿ ಪದಚ್ಯುತಿ

ಕುಶಾಲನಗರ, ಆ.17– ಉತ್ತರ ಕೊಡಗಿನ ಗಡಿಗ್ರಾಮ ಶಿರಂಗಾಲ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿದ್ದ ಭಾಗೀರಥಿ ವಿರುದ್ಧ ಆರು ಸದಸ್ಯರು ಅವಿಶ್ವಾಸ ಮಂಡಿಸಿ ಜಯಗಳಿಸಿದ ಹಿನ್ನೆಲೆಯಲ್ಲಿ ಬುಧವಾರ ಬಹುಮತ ಕಳೆದುಕೊಂಡ ಭಾಗೀರಥಿ ಅವರನ್ನು ಅಧಿಕಾರದಿಂದ ಪದಚ್ಯುತಿಗೊಳಿಸಲಾಗಿದೆ.

ಅಧ್ಯಕ್ಷೆ ಭಾಗೀರಥಿ ಅವರ ಸರ್ವಾಧಿಕಾರ ಹಾಗೂ ಕಾರ್ಯವೈಖರಿ ವಿರುದ್ಧ ಅಸಮಧಾನಗೊಂಡ ಆರು ಮಂದಿ ಸದಸ್ಯರು ಅವಿಶ್ವಾಸ ಪತ್ರ ಬರೆದು ಜಿಲ್ಲಾಧಿಕಾರಿಗಳಿಗೆ ಮೇ 16 ರಂದು ಸಲ್ಲಿಸಿದ್ದರು. ಹಾಲಿ ಉಪಾಧ್ಯಕ್ಷ ಎನ್.ಎನ್.ಧರ್ಮಪ್ಪ ನೇತೃತ್ವದಲ್ಲಿ ಆರು ಮಂದಿ ಅವಿಶ್ವಾಸ ಪತ್ರಕ್ಕೆ ಸಹಿ ಹಾಕಿದ್ದರು. ಅಧ್ಯಕ್ಷೆ ಭಾಗೀರಥಿ ತಾಂತ್ರಿಕ ಕಾರಣ ನೀಡಿ ಅವಿಶ್ವಾಸ ನಿರ್ಣಯ ಸಭೆಗೆ ತಡೆಕೋರಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಅದೇ ರೀತಿ ಸದಸ್ಯರು ಕೂಡ ನ್ಯಾಯಾಲಯದ ಮೊರೆ ಹೋಗಿದ್ದರು. ಕೊನೆಗೆ ಅವಿಶ್ವಾಸ ಸಭೆ ನಡೆಸಲು ಅವಕಾಶ ನೀಡಿ ನ್ಯಾಯಾಲಯ ಆದೇಶಿಸಿತು. ಅದೇ ಜಿಲ್ಲಾಧಿಕಾರಿಗಳು ಸೂಚನೆ ನೀಡಿತು. ಅದರಂತೆ ಜಿಲ್ಲಾಧಿಕಾರಿ ಡಾ.ಸತೀಶ್ ಅವರು ಇಂದು ಸಭೆ ನಡೆಸಲು ದಿನಾಂಕ ನಿಗದಿ ಮಾಡಿ ಆದೇಶ ಹೊರಡಿಸಿದ್ದರು. ಈ ಹಿನ್ನೆಲೆಯಲ್ಲಿ ಬುಧವಾರ ಪಂಚಾಯಿತಿ ಕಚೇರಿಯ ಸಭಾಂಗಣದಲ್ಲಿ ಉಪ ವಿಭಾಧಿಕಾರಿ ಯತೀಶ್ ಉಲ್ಲಾಳ್ ಅವರ ಅಧ್ಯಕ್ಷತೆಯಲ್ಲಿ ನಡೆದ ವಿಶ್ವಾಸ ಮತಯಾಚನೆ ಸಭೆ ನಡೆಯಿತು. ಅಧ್ಯಕ್ಷೆ ಭಾಗೀರಥಿ ಅವರಿಗೆ ಬಹುಮತ ಸಾಬೀತು ಪಡಿಸಲು ಅವಕಾಶ ನೀಡಲಾಯಿತು. ಆದರೆ 9 ಮಂದಿ ಸದಸ್ಯರ ಪೈಕಿ ಅಧ್ಯಕ್ಷೆವಿರುದ್ಧ ವಾಗಿ ಉಪಾಧ್ಯಕ್ಷ ಎನ್.ಎನ್. ಧರ್ಮಪ್ಪ ಸದಸ್ಯರಾದ ಎಸ್.ಬಿ.ಶ್ರೀಕಾಂತ್, ಎಸ್.ಎ.ಪ್ರದೀಪ, ಲಕ್ಷ್ಮಿ, ಕೆಜೆಗೀತಾ, ಎಂ.ಆರ್. ಲತಾ ಬಾಯಿ ಸೇರಿ ಆರು ಮಂದಿ ಕೈ ಎತ್ತಿದರು.

ಅಧ್ಯಕ್ಷೆಯ ಪರವಾಗಿ ಸದಸ್ಯರಾದ ಡಿ.ಎಸ್. ಸತೀಶ್, ಎಚ್.ಎಸ್.ಬಸವರಾಜು ಹಾಗೂ ಭಾಗೀರಥಿ ಸೇರಿದಂತೆ ಕೇವಲ ಮೂರು ಮಂದಿ ಮಾತ್ರ ಕೈ ಎತ್ತಿದರು. ಮೂರನೇ ಎರಡರಷ್ಟು ಸಂಖ್ಯಾಬಲ ಇಲ್ಲದೆ ಬಹುಮತ ಕಳೆದುಕೊಂಡ ಅಧ್ಯಕ್ಷೆ ಭಾಗೀರಥಿ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಸಲಾಯಿತು. ಪಂಚಾಯಿತಿ ಮುಂದಿನ ಅವದಿಗೆ ನೂತನ ಅಧ್ಯಕ್ಷರ ಆಯ್ಕೆಗೆ ಮುಂದಿನ ಒಂದು ವಾರದೊಳಗೆ ದಿನಾಂಕ ಪ್ರಕಟಿಸಲಾಗುವುದು ಎಂದು ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್ ಘೋಷಣೆ ಮಾಡಿದರು.

## ಕರಾಟೆಯಲ್ಲಿ ಕೊಡಗಿನ ವಿದ್ಯಾರ್ಥಿ ಪ್ರಜ್ವಲ್‌ಗೆ ಚಿನ್ನದ ಪದಕ



ವಿರಾಜಪೇಟೆ,ಆ.17– ಕರಾಟೆ ರಾಷ್ಟ್ರೀಯ ಚಾಂಪಿಯನ್ ಶಿಪ್‌ನಲ್ಲಿ (ಕುಮಿತೆ) ವಿರಾಜಪೇಟೆ ಸಂತ ಅನ್ನಮ್ಮ ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿ ವಿ.ಎಂ.ಪ್ರಜ್ವಲ್ ಚಿನ್ನದ ಪದಕ ಗಳಿಸಿದ್ದಾರೆ.

ಮೈಸೂರಿನ ಚಾಮುಂಡಿ ವಿಹಾರ್ ಒಳಾಂಗಣ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಚಿನ್ನದ ಪದಕ ಪಡೆದುಕೊಂಡರಲ್ಲದೆ, ಈ ಹಿಂದೆ ಮೈಸೂರಿನಲ್ಲಿ ನಡೆದ 28ನೇ ರಾಜ್ಯ ಮಟ್ಟದ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಕಂಚಿನ ಪದಕ ಪಡೆದಿದ್ದರು. ವಿ.ಎಂ.ಪ್ರಜ್ವಲ್ ವಿರಾಜಪೇಟೆಯ ಗಾಂಧಿನಗರದ ನಿವಾಸಿಯಾಗಿದ್ದು ಜೆಡಿಎಸ್ ತಾಲೂಕು ಅಧ್ಯಕ್ಷ ಪಿ.ಎ.ಮಂಜುನಾಥ್ ಹಾಗೂ ಸಂತ ಅನ್ನಮ್ಮ ಕಾಲೇಜಿನ ಉಪನ್ಯಾಸಕಿ ಅಶ್ವಿನಿ ಮಂಜುನಾಥ್ ದಂಪತಿಯ ಪುತ್ರ

## ಮರದಿಂದ ಬಿದ್ದು ಸಾವು



ಸೋಮವಾರಪೇಟೆ, ಆ.17– ಮರದಿಂದ ಬಿದ್ದು, ತಾಲೂಕಿನ ಕೂತಿ ಗ್ರಾಮದ ಹೆಚ್.ಜಿ.ಮಾದಪ್ಪ(66) ಮಂಗಳವಾರ ಸಂಜೆ ನಿಧನರಾದರು.

ಮನೆಯ ಸಮೀಪದ ಕಿತ್ತಳೆಮರಕ್ಕೆ ಹತ್ತಿ ಹಣ್ಣು ಕುಯ್ಯುತ್ತಿದ್ದ ಸಂದರ್ಭ ಆಕಸ್ಮಿಕವಾಗಿ ಕೆಳಕ್ಕೆ ಬಿದ್ದು ಮಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಬುಧವಾರ ಸಂಜೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು. ಮೃತರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

# ಪೌರಕಾರ್ಮಿಕರ ಸಮಸ್ಯೆ ಬಗೆಹರಿಸಿ ಸೌಲಭ್ಯ ಕಲ್ಪಿಸಲು ಕ್ರಮ

## ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಎಂ. ಶಿವಣ್ಣ ಭರವಸೆ






ಚಾಮರಾಜನಗರ, ಆ.17– ಪೌರಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸಫಾಯಿ ಕರ್ಮಚಾರಿಗಳ ಆಯೋಗ ಕ್ರಮ ಕೈಗೊಳ್ಳುತ್ತಿದೆ ಎಂದು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ (ಕೋಟೆ) ತಿಳಿಸಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ನಿನ್ನೆಯಿಂದ ಹನೂರು, ಮಲೆಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಿ ಪೌರಕಾರ್ಮಿಕರೊಂದಿಗೆ ಸಮಾಲೋಚಿಸಿ ಕುಂದು ಕೊರತೆಗಳನ್ನು ಆಲಿಸಿದ್ದೇನೆ ಅಧಿಕಾರಿಗಳ ಸಭೆ ನಡೆಸಿ ಸಮಸ್ಯೆ ಪರಿಹಾರಕ್ಕೆ ಸೂಚನೆ ನೀಡಿದ್ದೇನೆ ಎಂದರು.

ಈಗಾಗಲೇ 26 ರಿಂದ 27 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಪೌರಕಾರ್ಮಿಕರ ಅಹವಾಲುಗಳನ್ನು ಆಲಿಸಲಾಗಿದೆ. ಸಮಸ್ಯೆಗಳನ್ನು ತಿಳಿದುಕೊಂಡು ಅದರ ನಿವಾರಣೆಗೆ ಆಯೋಗ ಮುಂದಾಗಿದೆ. ಪೌರಕಾರ್ಮಿಕರ ಸ್ಥಿತಿ ಗತಿಗಳು, ಅವರಿಗೆ ಒದಗಿಸಬೇಕಾದ ಸವಲತ್ತುಗಳು, ಶಿಕ್ಷಣ, ಆರೋಗ್ಯ ಹೀಗೆ ನಾನಾ ವಿಷಯಗಳು ಸೇರಿದಂತೆ ಸಮಗ್ರ ಅಭಿವೃದ್ದಿಗೆ ಪೂರಕವಾಗಿರುವ 4 ವರದಿಗಳನ್ನು ಅಧ್ಯಯನ ಮಾಡಲಾಗಿದೆ. ಪೌರಕಾರ್ಮಿಕರಿಗೆ ಸಮರ್ಪಕವಾಗಿ ಸೌಲಭ್ಯ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನಿಷೇಧ ಕಾಯ್ದೆ 2013ರಲ್ಲೇ ಜಾರಿಗೆ ಬಂದಿದೆ. ತಲೆ ಮೇಲೆ ಮಲ ಹೊರುವ ಪದ್ದತಿಯನ್ನು ಈ ಹಿಂದೆಯೆ ನಿಷೇಧಿಸಲಾಗಿದೆ. ಎಲ್ಲಿಯೇ ಆಗಲಿ ಯಂತ್ರಗಳನ್ನು ಬಳಸದೇ ಪೌರಕಾರ್ಮಿಕರಿಂದ ಮ್ಯಾನ್‌ಹೋಲ್‌ಗಳಲ್ಲಿ ನೈರ್ಮಲ್ಯ ಕೆಲಸವನ್ನು ಮಾಡಿಸುವುದು ಕಾಯ್ದೆಗೆ ವಿರುದ್ಧವಾಗಿದೆ. ಇಂತಹ ಕಾಯ್ದೆಯನ್ನು ಉಲ್ಲಂಘಿಸಿ ಕೆಲಸ ಮಾಡಿಸಿದವರನ್ನು ಶಿಕ್ಷೆಗೆ ಗುರಿಯಾಗಿಸಿದ್ದಲ್ಲದೇ ದಂಡು ವಿಧಿಸಿದ ಪ್ರಕರಣಗಳು ಸಾಕಷ್ಟು ಇವೆ ಎಂದು ಅಧ್ಯಕ್ಷರು ತಿಳಿಸಿದರು.

ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಶಿಕ್ಷಾರ್ಹ ಅಪರಾಧವಾಗಿದ್ದು ಜಿಲ್ಲೆ ಸೇರಿದಂತೆ ರಾಜ್ಯದೆಲ್ಲೆಡೆ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪದ್ದತಿ ಇನ್ನೂ ಇದೆಯೆ ಎಂಬ ಬಗ್ಗೆ ಸರ್ವೆ ಕಾರ್ಯ ನಡೆಸಲಾಗಿದೆ. ಅಧಿಕಾರಿಗಳಿಗೂ ಈ ಬಗ್ಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು. ಪೌರಕಾರ್ಮಿಕರ ಮಕ್ಕಳಿಗೆ ಪ್ರಾಥಮಿಕ ಹಂತದಿಂದ ಪದವಿಯವರೆಗೆ ಉಚಿತ ಶಿಕ್ಷಣ, ಪ್ರತಿಷ್ಠಿತ ಶಾಲೆ, ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ಶುಲ್ಕ ಮರುಪಾವತಿ ಸೇರಿದಂತೆ ಇನ್ನಿತರ ಸೌಲಭ್ಯಗಳು ಒದಗಿಸುವ ನಿಟ್ಟಿನಲ್ಲಿ ಆಯೋಗ ಶಿಫಾರಸು ಮಾಡಲಿದೆ. ಪೌರಕಾರ್ಮಿಕರಿಗೆ ಸುರಕ್ಷತಾ ಧಿರಸುಗಳು ಹೊಂದಿಕೆಯಾಗುವಂತೆ ನೀಡಬೇಕು. ಕೆಲಸ ಮಾಡುವ ಸ್ಥಳಗಳಲ್ಲಿ ವಿಶ್ರಾಂತಿ ಗೃಹಗಳ ನಿರ್ಮಾಣ, ಸೇವಾ ಭದ್ರತೆ ಸೇರಿದಂತೆ ಹಲವು ಸವಲತ್ತುಗಳನ್ನು ಒದಗಿಸುವಂತೆ ಆಯೋಗ ತಿಳಿಸಿದೆ ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಸಂಶೋಧನಾ ಅಧಿಕಾರಿ ಸುವರ್ಣ, ಜಿಲ್ಲಾ ಸಫಾಯಿ ಕರ್ಮಚಾರಿ ಸಮಿತಿಯ ಸದಸ್ಯರಾದ ಭಾಗ್ಯ, ಪುಷ್ಪಲತ, ರಾಜೇಂದ್ರ ಪಿ ಉಡಿಗಾಲ, ಮುಖಂಡರಾದ ಬಸವನಪುರ ರಾಜಶೇಖರ್ ಇತರರು ಉಪಸ್ಥಿತರಿದ್ದರು.

## ಪೌರಕಾರ್ಮಿಕರಿಗೆ ವೇತನ ವಿಳಂಬ ಸಲ್ಲದು

ಚಾಮರಾಜನಗರ, ಆ.17– ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ (ಕೋಟೆ) ಪೌರಕಾರ್ಮಿಕರೊಂದಿಗೆ ಸಂವಾದ ನಡೆಸಿ ಅವರ ಅಹವಾಲು ಆಲಿಸಿದರು. ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಪೌರಕಾರ್ಮಿಕರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಪೌರಕಾರ್ಮಿಕರ ಸಮಸ್ಯೆಗಳನ್ನು ವಿವರವಾಗಿ ಆಲಿಸಿ ಚರ್ಚಿಸಿದರು.

ಪೌರಕಾರ್ಮಿಕರು ಮಕ್ಕಳ ವಿದ್ಯಾಭ್ಯಾಸ ಮತ್ತು ಜೀವನ ನಡೆಸಲು ಅವರ ಸಂಬಳವನ್ನೇ ನಂಬಿದ್ದಾರೆ. ಆದ್ದರಿಂದ ಸರಿಯಾದ ಸಮಯಕ್ಕೆ ಸಂಬಳ ನೀಡದಿದ್ದರೇ ಅವರು ಬಡ್ಡಿ ಸಾಲದ ಮೊರೆ ಹೋಗಬೇಕಾಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡದೇ ಸರಿಯಾದ ಸಮಯಕ್ಕೆ ವೇತನ ಪಾವತಿಸಿ ಎಂದು ಸೂಚಿಸಿದರು.

ಜಿಲ್ಲೆಯಲ್ಲಿನ ಎಲ್ಲಾ ಪೌರಕಾರ್ಮಿಕರಿಗೂ ಸಂಬಳದ ಜೊತೆ ವೇತನದ ಚೀಟಿಯನ್ನು ಸಹ ನೀಡಬೇಕು. ನೌಕರರಿಗೆ ವಸತಿ ಸೌಲಭ್ಯ ಕಲ್ಪಿಸಬೇಕು, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬೇಕು, ಕೋವಿಡ್ ಸಂದರ್ಭದಲ್ಲಿ ಸಾವನ್ನಪ್ಪಿದವರ ಕುಟುಂಬಕ್ಕೆ ಹಣ ಪಾವತಿಯಾಗಬೇಕು, 3 ತಿಂಗಳಿಗೊಮ್ಮೆ ಪೌರಕಾರ್ಮಿಕರ ಸಮಗ್ರ ಆರೋಗ್ಯ ತಪಾಸಣೆ ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಪೌರಕಾರ್ಮಿಕರು ಯಾವುದೇ ಸಮಸ್ಯೆಗಳಿದ್ದರೂ ನೇರವಾಗಿ ನಮ್ಮ ಗಮನಕ್ಕೆ ತರಬಹುದು. ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು. ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ ಇರುವುದು ನಿಮ್ಮ ಕಷ್ಟಗಳನ್ನು ಬಗೆಹರಿಸುವುದಕ್ಕೆ ಎಂದು ಶಿವಣ್ಣ ಅವರು ತಿಳಿಸಿದರು.

ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಸಂಶೋಧನಾ ಅಧಿಕಾರಿ ಸುವರ್ಣ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಮಲ್ಲಿಕಾರ್ಜುನ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಕೆ. ಸುರೇಶ್, ಜಿಲ್ಲಾ ಸಫಾಯಿ ಕರ್ಮಚಾರಿ ಸಮಿತಿಯ ಸದಸ್ಯರಾದ ಭಾಗ್ಯ, ಪುಷ್ಪಲತ, ಇತರರು ಉಪಸ್ಥಿತರಿದ್ದರು.

## ಹುಲಿ ಉಗುರು ಮಾರಾಟ: ಇಬ್ಬರ ಬಂಧನ





ಚಾಮರಾಜನಗರ, ಆ.17– ಹುಲಿ ಉಗುರುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಚಾಮರಾಜನಗರದ ಟೌನ್ ಅಂಬೇಡ್ಕರ್ ಭವನದ ರಸ್ತೆಯಲ್ಲಿ ಹುಲಿ ಉಗುರುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಚಾಮರಾಜನಗರ ಸೆನ್ ಕ್ರೈಂ ಪೊಲೀಸ್ ಠಾಣೆಯ ಸಿಪಿಐ ಮಹದೇವಶೆಟ್ಟಿ ಅವರ ನೇತೃತ್ವದಲ್ಲಿ ಪಿಎಸ್‌ಐ ಮಾದೇಶ್ ಹಾಗೂ ಸಿಬ್ಬಂದಿಗಳು ದಾಳಿ ಮಾಡಿ ಇಬ್ಬರು ಆಸಾಮಿಗಳನ್ನು ವಶಕ್ಕೆ ಪಡೆದು ಅಂದಾಜು 3.5 ಲಕ್ಷ ರೂ. ಮೌಲ್ಯದ 8 ಹುಲಿ ಉಗುರುಗಳನ್ನು ವಶಪಡಿಸಿಕೊಂಡು ಅರಣ್ಯ ಇಲಾಖೆ ನೀಡಿರುತ್ತಾರೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ರಾಜು, ಮಂಜುನಾಥ, ಜಗದೀಶ್ ಹಾಗೂ ಅರಣ್ಯ ಇಲಾಖೆಯ ಡಿಆರ್‌ಎಫ್‌ಓ ಗಳಾದ ಹೇಮಂತ್‌ಕುಮಾರ್, ಜಗದೀಶ್ ಅವರು ಭಾಗವಹಿಸಿದ್ದರು.

## ಪ್ರವಾಹದಿಂದ ಕೊಚ್ಚಿಹೋಗಿರುವ ಕೆಸ್ತೂರು ಕಾಲುವೆ ಏರಿ ದುರಸ್ತಿ ಪಡಿಸಲು ರೈತರ ಒತ್ತಾಯ

ಚಾಮರಾಜನಗರ, ಆ.17– ಸತತ ಸುರಿದ ಮಳೆಗೆ ತಾಲೂಕಿನ ಅವಳಿ ಜಲಾಶಯಗಳಾದ ಸುವರ್ಣಾವತಿ ಜಲಾಶಯ, ಚಿಕ್ಕಹೊಳೆ ಭರ್ತಿಗೊಂಡು ಹರಿದ ಪ್ರವಾಹದಿಂದ ತಾಲೂಕಿನ ಆಲೂರು ಹೊಮ್ಮ ಸಮೀಪ ಕೊಚ್ಚಿಹೋಗಿರುವ ಕೆಸ್ತೂರು ಕಾಲುವೆ ಏರಿಯನ್ನು ದುರಸ್ತಿ ಪಡಿಸುವಂತೆ ಆ ಭಾಗದ ರೈತರು ಒತ್ತಾಯಿಸಿದ್ದಾರೆ.



ತಾಲೂಕಿನ ಆಲೂರು ಗ್ರಾಮದ ಹತ್ತಿರ ಹಾದುಹೋಗಿರುವ ತಗಡೂರು ರಾಮಚಂದ್ರ ನಾಲೆ ಸೇರಿದಂತೆ ಹಾದು ಹೋಗಿರುವ ಕೆಸ್ತೂರು ಕಾಲುವೆ ಏರಿಯು ಪ್ರವಾಹದಿಂದ ಕೊಚ್ಚಿ ಹೋಗಿದ್ದು, ಆ ಭಾಗದ ರೈತರು ಜಮೀನುಗಳಿಗೆ ಕೃಷಿ ಎತ್ತಿನಗಾಡಿ, ಟ್ರ್ಯಾಕ್ಟರ್ ಹೋಗಿ ಬರಲು, ಕೃಷಿ ಚಟುವಟಿಕೆ ಮಾಡಲು ತುಂಬಾ ಕಷ್ಟವಾಗಿದೆ. ಅಲ್ಲದೆ ಕಾಲುವೆ ಏರಿ ಮೇಲೆ ಬೆಳೆದಿರುವ ಜಂಗಲ್ ಕಟಿಂಗ್ ಮಾಡಿಸಿ ಈ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ರೈತರು ಸಂಬಂಧಪಟ್ಟ ಇಲಾಖಾಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

## ರಾಜಕೀಯ ಚಿತ್ರಣವನ್ನೇ ಬದಲಾಯಿಸಿದ ಪಕ್ಷ ಬಿಜೆಪಿ: ಶಾಸಕ ಮಹೇಶ್




ಚಾಮರಾಜನಗರ, ಆ.17– ರಾಜಕೀಯ, ಆರ್ಥಿಕ, ಸಂಸ್ಕೃತಿಯ ಚಿತ್ರಣವನ್ನೇ ಬದಲಾಯಿಸಿ, ಡೆಲ್ಲಿಯಿಂದ ಹಳ್ಳಿಯ ಕೊನೆಯವರೆಗೂ ಸರ್ಕಾರದ ಸೌಲಭ್ಯಗಳು ತಲುಪುವಂತೆ ಮಾಡಿದ ಕೀರ್ತಿ ಬಿಜೆಪಿ ಪಕ್ಷಕ್ಕೆ ಸಲ್ಲಲಿದ್ದು, ಇದಕ್ಕೆ ಪ್ರಧಾನಿ ನರೇಂದ್ರಮೋದಿಯವರ ಆಡಳಿತವೇ ಕಾರಣ ಎಂದು ಶಾಸಕ ಎನ್.ಮಹೇಶ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಪ್ರಕೋಷ್ಠಗಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಕೋಷ್ಠಗಳು ರಚನೆ ಅದು ಬಿಜೆಪಿಯಲ್ಲಿ ಮಾತ್ರ ಜಿಲ್ಲೆಯಲ್ಲಿ 24 ಪ್ರಕೋಷ್ಠಗಳು, 6 ಸಂಕುಲಗಳಿದ್ದು, ಸಮಾಜ ಮತ್ತು ಸಮುದಾಯಗಳ ಅಭಿವೃದ್ಧಿ ಪ್ರಕೋಷ್ಠಗಳ ಜವಾಬ್ದಾರಿ ಇದಕ್ಕೆ ನಿಮ್ಮೆಲ್ಲರ ಸಹಕಾರ, ಸಂಕಲ್ಪ ಅತ್ಯಗತ್ಯವಾಗಿದೆ ಎಂದರು.

ಪ್ರಕೋಷ್ಠಗಳು ಜವಾಬ್ದಾರಿಯಿಂದ ಕೆಲಸ ಮಾಡಿದರೆ ಮುಂದಿನ ಎಲ್ಲಾ ಚುನಾವಣೆಗಳಲ್ಲೂ ಬಿಜೆಪಿ ಗೆಲುವು ಕಾಣಲಿದೆ. ಇದರಲ್ಲಿ ನಿಮ್ಮ ಜವಾಬ್ದಾರಿ ಹೆಚ್ಚಿನ ಪಾಲು ಇದೆ ಎಂದರು.

ಬಿಜೆಪಿಯ ರಾಜಕೀಯ ಸಂಸ್ಕೃತಿ ವಿರೋಧ ಪಕ್ಷಗಳ ನಾಯಕರನ್ನು ಬದಲಾಯಿಸಿದೆ. ಬೋಲೋ ಭಾರತ್ ಮಾತಾಕೀ ಜೈ ಇದು ಬಿಜೆಪಿಗೆ ಸೀಮಿತ ಎಂದು ಹೇಳುತ್ತಿದ್ದ ವಿರೋಧ ಪಕ್ಷಗಳ ನಾಯಕರು ಇಂದು ತಾವೇ ಮುಂಚಿತವಾಗಿ ಕೂಗುತ್ತಿದ್ದಾರೆ. ಅದರಲ್ಲೂ ರಾಜ್ಯದಲ್ಲಿ ಡಿಕೆಶಿ ಮುಂಚೂಣಿಯಲ್ಲಿದ್ದಾರೆ ಎಂದರು.

ಕೆಲವರಿಗೆ, ಶಿಪಾರಸು ಮಾಡಿದವರಿಗೆ ಸೀಮಿತವಾಗಿದ್ದ ರಾಜ್ಯ ಸಭಾ ಸ್ಥಾನಗಳು, ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಗಳು ಇಂದು ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದವರಿಗೆ ಸಿಗುತ್ತಿರುವುದಕ್ಕೆ ಬಿಜೆಪಿಯ ರಾಜಕೀಯ ಸಂಸ್ಕೃತಿ ಚಿತ್ರಣ ಬದಲಾವಣೆ ಕಾರಣ, ಸಾಮಾನ್ಯ ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸುವ ಕೆಲಸ, ಸಾಮಾಜಿಕ ನ್ಯಾಯ ಇವೆಲ್ಲವು ಬಿಜೆಪಿಯಲ್ಲಿ ಮಾತ್ರ ಇವುಗಳನ್ನು ಪ್ರಕೋಷ್ಠದ ಮುಂಚೂಣಿಯ ನಾಯಕರು ಸಾಮಾನ್ಯ ಜನರಿಗೆ ತಿಳಿಸಬೇಕು ಎಂದರು.

ಮನ್ ಕೀ ಬಾತ್ ಮೂಲಕ ಸಾಮಾನ್ಯ ಜನರನ್ನು ಭೇಟಿ ಮಾಡುವ ಪ್ರಧಾನಿ ಎಂದರೆ ಅವರು ನರೇಂದ್ರಮೋದಿಯವರು, ಇವರ ಯೋಜನೆಗಳ ಬಗ್ಗೆ ಸಾಮಾನ್ಯ ಜನರಿಗೆ ತಿಳಿಸಿ, ಇನ್ನು 10 ವರ್ಷಗಳ ಕಾಲ ನರೇಂದ್ರ ಮೋದಿಯವರು ಪ್ರಧಾನಿಯನ್ನಾಗಿ ಮಾಡಿದರೆ ದೇಶ ಅಭಿವೃದ್ಧಿ ಹೊಂದಿದ ದೇಶವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ, ಅಂತಹ ದೂರದೃಷ್ಟಿ ಅವರ ಯೋಜನೆಗಳಲ್ಲಿದ್ದು, ವಿರೋಧ ಪಕ್ಷಗಳು ವಿನಾಕಾರಣ ಆರೋಪ ಮಾಡುತ್ತಿವೆ, ನಮ್ಮ ಪಕ್ಷದ ಕೊರತೆ ಎಂದರೆ, ಸಾಧನೆ ಮತ್ತು ಒಳ್ಳೆಯ ಯೋಜನೆಗಳ ಬಗ್ಗೆ ಜನರಿಗೆ ಸರಿಯಾಗಿ ತಿಳಿಸದೇ ಇರುವುದು, ಇದನ್ನು ಬಿಡಿ ಎಂದರು.

ಪಕ್ಷದ ರಾಜ್ಯ ಉಪಾಧ್ಯಕ್ಷ, ಜಿಲ್ಲಾ ಪ್ರಭಾರಿ ರಾಜೇಂದ್ರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರಕೋಷ್ಠದ ರಾಜ್ಯ ಸಂಚಾಲಕ ಪ್ರತಾಪಸಿಂಹ ನಾಯಕ್, ಸಹ ಸಂಚಾಲಕ ಸ್ವಾಮಿಯ್ಯ ಕುಲಮ್ಮ ನೂರೊಂದು ಶೆಟ್ಟಿ ಜಿಲ್ಲಾಧ್ಯಕ್ಷ ಆರ್. ಸುಂದರ್, ಮುಖಂಡರಾದ ಎಂ. ರಾಮಚಂದ್ರ, ಅಮ್ಮನಪುರ ಮಲ್ಲೇಶ್, ಡಾ. ಎ.ಆರ್. ಬಾಬು, ಗಾಯಿತ್ರಿ, ನಾಗಶ್ರೀ ಪ್ರತಾಪ್, ಬಾಲಸುಬ್ರಹ್ಮಣ್ಯಂ, ಸಿ.ಎನ್. ಬಾಲರಾಜ್ ಇತರರು ಇದ್ದರು.

## ಸ್ವಾತಂತ್ರ್ಯ ದಿನಾಚರಣೆಯ ಕವಾಯತಿನಲ್ಲಿ ಮೊದಲ ಬಾರಿಗೆ ಅಬಕಾರಿ ಇಲಾಖೆಯ ತುಕಡಿಗೆ ಬಹುಮಾನ



ಚಾಮರಾಜನಗರ, ಆ.17– ಅಬಕಾರಿ ಇಲಾಖೆಯ ತುಕಡಿಯು 76ನೇ ಸ್ವಾತಂತ್ರ್ಯ ದಿನಾಚರಣೆಯ ಕವಾಯತಿನಲ್ಲಿ ಪ್ರಪ್ರಥಮ ಬಾರಿಗೆ ಭಾಗವಹಿಸಿ ದ್ವಿತೀಯ ಬಹುಮಾನ ಪಡೆದುಕೊಂಡಿದೆ.

ರಾಷ್ಟ್ರೀಯ ಹಬ್ಬಗಳ ಪೆರೇಡ್‌ನಲ್ಲಿ ಅಬಕಾರಿ ಇಲಾಖೆ ಈವರೆಗೆ ಭಾಗವಹಿಸಿರಲಿಲ್ಲ. ಆಗಸ್ಟ್ 15ರಂದು ನಡೆದ 76ನೇ ಸ್ವಾತಂತ್ರ್ಯ ದಿನಾಚರಣೆಯ ಕವಾಯತಿನಲ್ಲಿ ಹಾಲಿ ಅಬಕಾರಿ ಇಲಾಖೆಯು ಅಬಕಾರಿ ಉಪ ಆಯುಕ್ತರಾದ ಟಿ.ಎಂ. ಶ್ರೀನಿವಾಸ್ ಅವರ ನೇತೃತ್ವದಲ್ಲಿ ಇಲಾಖೆಯು ಸಶಸ್ತ್ರ ದಳಗಳ ತುಕಡಿಗಳೊಂದಿಗೆ ಭಾಗವಹಿಸಿ ದ್ವಿತೀಯ ಬಹುಮಾನವನ್ನು ಪಡೆದುಕೊಂಡಿದೆ.

ಮೈಸೂರು ವಿಭಾಗದ ಜಾರಿ ಮತ್ತು ತನಿಖೆ ವಿಭಾಗದ ಅಬಕಾರಿ ಜಂಟಿ ಆಯುಕ್ತರು ಬಹುಮಾನ ಪಡೆದ ಚಾಮರಾಜನಗರ ಜಿಲ್ಲೆಯ ಅಬಕಾರಿ ಇಲಾಖೆಯ ತಂಡ ಹಾಗೂ ಉಪ ಆಯುಕ್ತರಾದ ಟಿ.ಎಂ ಶ್ರೀನಿವಾಸ್ ಅವರನ್ನು ಶ್ಲಾಘಿಸಿದ್ದಾರೆ ಎಂದು ಜಿಲ್ಲಾ ಅಬಕಾರಿ ಇಲಾಖೆ ಪ್ರಕಟಣೆ ತಿಳಿಸಿದೆ.

## ಒಂದನೇ ಪುಟದಿಂದ

### ಡಬಲ್ ಧಮಾಕಾ

ದಿವಂಗತ ಅನಂತಕುಮಾರ್ ಈ ಮೊದಲು ಎರಡು ಉನ್ನತ ಮಟ್ಟದ ಸಮಿತಿಯಲ್ಲೂ ಸದಸ್ಯರಾಗಿದ್ದರು. ಆನಂತರ ಯಡಿಯೂರಪ್ಪ ಮತ್ತು ಸಂತೋಷ್ ಅವರಿಗೆ ಈ ಸ್ಥಾನ ದೊರೆತಿದೆ. ಇತ್ತೀಚೆಗೆ ಕರ್ನಾಟಕಕ್ಕೆ ಬಂದಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಯಡಿಯೂರಪ್ಪ ಅವರ ಜತೆ ಸುಧೀರ್ಘ ಚರ್ಚೆ ನಡೆಸಿ ಹಿಂತಿರುಗಿದ ನಂತರ ಈ ನೇಮಕಾತಿ ನಡೆದಿದ್ದು, ಇದು ಯಡಿಯೂರಪ್ಪ ಅವರನ್ನು ಪಕ್ಷ ನಿರ್ಲಕ್ಷಿಸುವುದಿಲ್ಲ ಎಂಬ ವರಿಷ್ಠರ ಸಂದೇಶದಂತಿದೆ. ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದ ನಂತರ ಯಡಿಯೂರಪ್ಪ ಅವರು ಬೇರೆ ಯಾವ ಸ್ಥಾನಗಳನ್ನೂ ಪಡೆಯಲು ನಿರಾಸಕ್ತಿ ತೋರಿಸಿದ್ದರಿಂದ ಅವರಿಗೆ ರಾಜ್ಯಪಾಲ ಹುದ್ದೆ ನೀಡುವ ವರಿಷ್ಠರ ಯೋಚನೆ ಹಾಗೇ ಕರಗಿತ್ತು. ಆದರೆ ಇದೀಗ ಯಡಿಯೂರಪ್ಪ ಅವರ ಬಲ ಕರ್ನಾಟಕದಲ್ಲಿ ಪಕ್ಷಕ್ಕೆ ಅಗತ್ಯ ಎಂಬುದನ್ನು ಮನಗಂಡಿರುವ ವರಿಷ್ಠರು ಯಡಿಯೂರಪ್ಪ ಅವರನ್ನು ಕೇಂದ್ರ ಸಂಸದೀಯ ಮಂಡಳಿಗೆ ನೇಮಕ ಮಾಡುವ ಮೂಲಕ ಸಮಾಧಾನಪಟ್ಟು ಕೊಂಡಿದ್ದಾರೆ. ಉನ್ನತ ಮೂಲಗಳ ಪ್ರಕಾರ, ಕರ್ನಾಟಕದಲ್ಲಿ ಪಕ್ಷವನ್ನು ಬಲಿಷ್ಟಗೊಳಿಸಲು ಪಕ್ಷ ಮತ್ತು ಸರ್ಕಾರಕ್ಕೆ ತುರ್ತು ಸರ್ಜರಿಯ ಅಗತ್ಯವಿದೆ ಎಂದು ಯಡಿಯೂರಪ್ಪ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ವಿವರಿಸಿದ್ದರು. ಯಡಿಯೂರಪ್ಪ ಅವರಿಗೆ ಗೌರವದ ಸ್ಥಾನ ನೀಡಿರುವ ವರಿಷ್ಠರು ಕರ್ನಾಟಕದಲ್ಲಿ ಪಕ್ಷ ಮತ್ತು ಸರ್ಕಾರಕ್ಕೆ ಸರ್ಜರಿ ಮಾಡಲು ತಯಾರಿ ನಡೆಸಿದ್ದಾರೆ ಎಂಬುದು ಇದೇ ಮೂಲಗಳ ಹೇಳಿಕೆ. ಕೇಂದ್ರ ಬಿಜೆಪಿಯಲ್ಲಿ ಯಡಿಯೂರಪ್ಪ ಅವರಿಗೆ ಉನ್ನತ ಸ್ಥಾನ ದೊರೆತ ನಂತರ ರಾಜ್ಯ ಬಿಜೆಪಿ ಮತ್ತು ಸರ್ಕಾರದಲ್ಲೂ ಬದಲಾವಣೆಯಾಗುವ ಸಾಧ್ಯತೆ ಇದೆ.

### ಅಧಿಕಾರಕ್ಕೆ ಬರಲು ಬಿಡುವುದಿಲ್ಲ

ಹರಿಸಲು ಸೂಚನೆ ನೀಡಲಾಗಿದೆ. ಜವಾಬ್ದಾರಿಯನ್ನು ವಿನಮ್ರತೆಯಿಂದ ಸ್ವೀಕರಿಸಿ ರಾಜ್ಯದಲ್ಲಿ ಓಡಾಡುವೆ.ಇನ್ನೂ10 ವರ್ಷಗಳ ಕಾಲ ಪಕ್ಷ ಸಂಘಟಿಸುತ್ತೇನೆ.

ಎಲ್ಲಾ ಮುಖಂಡರು ಒಟ್ಟಾಗಿ ರಾಜ್ಯ ಪ್ರವಾಸ ಮಾಡುತ್ತೇವೆ. ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಬೇರೆ ಪಕ್ಷ ಅಧಿಕಾರಕ್ಕೆ ಬರಲು ಬಿಡುವುದಿಲ್ಲ. ಎಲ್ಲರೂ ಸೇರಿ 140ಕ್ಕೂ ಹೆಚ್ಚು ಸ್ಥಾನ ಗೆಲ್ಲಲು ಕೆಲಸ ಮಾಡಿತ್ತೇವೆ. ನನಗೆ ಜವಾಬ್ದಾರಿ ನೀಡಿದ ಬಿಜೆಪಿ ಹೈಕಮಾಂಡ್‌ಗೆ ಧನ್ಯವಾದಗಳು ಎಂದು ಬಿಎಸ್‌ವೈ ತಿಳಿಸಿದರು.

### ಸಿಎಂ ಬೊಮ್ಮಾಯಿ ಸಂತಸ

ಆದೇಶ ಹೊರ ಬರುತ್ತಿ ದ್ದಂತೆಯೆ ಸಿಎಂ ಅವರು ಕರೆ ಮಾಡಿ ಶುಭ ಕೋರಿದರು. ತಾವು ಈ ಹುದ್ದೆಗೆ ಏರಿರುವುದರಿಂದ ಕರ್ನಾಟಕ ಬಿಜೆಪಿಗೆ ಆನೆ ಬಲ ಬಂದಂತಾಗಿದೆ. ಕರ್ನಾಟಕ ಬಿಜೆಪಿಗೆ ಅಭೂತಪೂರ್ವ ಬೆಂಬಲ ಸಿಕ್ಕಂತಾಗಿದೆ. 2023 ರಲ್ಲಿ ರಾಜ್ಯ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ನಿಶ್ಚಿತ. ತಮ್ಮನ್ನು ಈ ಉನ್ನತ ಹುದ್ದೆಗೆ ನೇಮಕ ಮಾಡಿರುವ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಗೆ ಹಾಗೂ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದು ಅವರು ತಿಳಿಸಿದ್ದಾರೆ.

### ತಾಲೀಮು ಆರಂಭ

ತೂಕದ ಮರಳು ಮೂಟೆಯನ್ನು ಇಟ್ಟು ತಾಲೀಮಿಗೆ ಕೊಂಡೊಯ್ಯಲಾಗುತ್ತದೆ. ನಾಳೆಯಿಂದ ಆರಂಭವಾಗುವ ಭಾರ ಹೊರುವ ತಾಲೀಮು ಹಂತ ಹಂತವಾಗಿ ತೂಕವನ್ನು ಹೆಚ್ಚಿಸಿ ಜಂಬೂ ಸವಾರಿ ವೇಳೆಗೆ 750 ಕೆ.ಜಿ. ತೂಕವನ್ನು ಭಾರ ಹೊರಲು ಗಜಪಡೆಯನ್ನು ಸನ್ನದ್ದುಗೊಳಿಸಲಾಗುತ್ತದೆ. ಅದಕ್ಕಾಗಿ ಈಗಾಗಲೇ ಸ್ಪೆಷಲ್ ಡಯಟ್ ಮೂಲಕ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದ್ದು, ಗಜಪಡೆಯ ಭುಜದ ಬಲವನ್ನು ಹೆಚ್ಚಿಸಲು ಅರಣ್ಯ ಇಲಾಖೆ ಕ್ರಮ ಕೈಗೊಂಡಿದೆ.

### ಡಾ.ಎಂ.ಎಸ್.ವಿಶ್ವೇಶ್ವರ ಇನ್ನಿಲ್ಲ

ಅಪಾರ ಜ್ಞಾನ ಧಾರೆ ಎರೆಯುತ್ತಿದ್ದ ಡಾ.ವಿಶ್ವೇಶ್ವರ ಅವರು, ಭಾರತೀಯ ವೈದ್ಯಕೀಯ ಸಂಘ(IMA) ಮೈಸೂರು ಚಾಪ್ಟರ್ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ವೈದ್ಯ ವೃತ್ತಿ ಜೊತೆಗೆ ಹಾಡುಗಾರಿಕೆಯಲ್ಲೂ ಆಸಕ್ತಿ ಹೊಂದಿದ್ದ ಅವರು, ವೈದ್ಯ ವೃಂದದವರು ಪ್ರತೀ ವರ್ಷ ನಡೆಸಿಕೊಡುತ್ತಿದ್ದ 'ಗೀತ್-ಗಾತ್ ಚಲ್' ಸಾಂಸ್ಕೃತಿಕ ಕಾರ್ಯಕ್ರಮದಲ್ಲೂ ಪಾಲ್ಗೊಂಡು ಹಳೇ ಚಲನಚಿತ್ರ ಗೀತೆಗಳನ್ನು ತಮ್ಮ ಕಂಠ ಸಿರಿಯಿಂದ ಹಾಡಿ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸುತ್ತಿದ್ದುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಡಾ. ವಿಶ್ವೇಶ್ವರ ಅವರ ನಿಧನಕ್ಕೆ ಭಾರತ್ ಕ್ಯಾನ್ಸರ್ ಆಸ್ಪತ್ರೆ ವೈದ್ಯ ವೃಂದ, ವೈದ್ಯಕೇತರ ಸಿಬ್ಬಂದಿ, ಐಎಂಎ ಪದಾಧಿಕಾರಿಗಳು ಹಾಗೂ ಸದಸ್ಯರು, ಮಾಜಿ ಶಾಸಕ ಡಾ. ಭಾರತಿ ಶಂಕರ್ ತೀವ್ರ ಸಂತಾಪ ಸೂಚಿಸಿದ್ದಾರೆ.

**ಜಿಟಿಡಿ ಸಂತಾಪ:** ಮೈಸೂರಿನ ಪ್ರತಿಷ್ಠಿತ ಭಾರತ್ ಆಸ್ಪತ್ರೆ ಮತ್ತು ಆಂಕೋಲಾಜಿ ಸಂಸ್ಥೆಯ ವೈದ್ಯಕೀಯ ಅಧೀಕ್ಷರಾಗಿ ಸೇವೆಯನ್ನು ಸಲ್ಲಿಸಿ, ಅಪಾರ ಕ್ಯಾನ್ಸರ್ ರೋಗಿಗಳನ್ನು ಗುಣಮುಖರನ್ನಾಗಿ ಮಾಡಿ, ಸಾವಿರಾರು ಜನರ ಆರಾಧ್ಯದೈವರಾಗಿದ್ದ ಡಾ. ಎಂ.ಎಸ್.ವಿಶ್ವೇಶ್ವರ ಅವರ ನಿಧನ ತುಂಬಲಾರದ ನಷ್ಟವನ್ನುಂಟು ಮಾಡಿದೆ. ಶ್ರೀಯುತರು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನಿವಾಸಿಯಾಗಿ ವೈದ್ಯಕೀಯ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ್ದಾರೆ, ಶ್ರೀಯುತರ ನಿಧನ ಅವರ ಕುಟುಂಬ ವರ್ಗಕ್ಕಷ್ಟೆ ಮಾತ್ರವಲ್ಲದೆ, ಇಡೀ ವೈದ್ಯಕೀಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಶ್ರೀಯುತರ ನಿಧನದಿಂದ ಅವರ ಕುಟುಂಬ ವರ್ಗಕ್ಕೆ ಆಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ತಾಯಿ ಚಾಮುಂಡೇಶ್ವರಿ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸಂತಾಪ ವ್ಯಕ್ತಪಡಿಸಿದ್ದಾರೆ.

**ಡಾ.ಎಸ್.ಪಿ. ಯೋಗಣ್ಣ ಸಂತಾಪ :** ಹಿರಿಯ ಕ್ಯಾನ್ಸರ್ ತಜ್ಞ ಡಾ.ವಿಶ್ವೇಶ್ವರ ಅವರು ನಾಡು ಕಂಡ ಅಪರೂಪದ ವೈದ್ಯರು. ಮೈಸೂರಿನಲ್ಲಿ ಪ್ರಪ್ರಥಮ ಕ್ಯಾನ್ಸರ್ ತಜ್ಞರಾಗಿ ಅಪಾರ ಜನಮನ್ನಣೆ ಗಳಿಸಿದ್ದರು. ತಮ್ಮ ವೃತ್ತಿಯಲ್ಲಿ ಬಹು ಪಾವಿತ್ರ್ಯತೆಯನ್ನು ಹೊಂದಿದ್ದ ಅವರು ಮಾನವೀಯ ಮೌಲ್ಯಗಳನ್ನಿಟ್ಟುಕೊಂಡು ಸೇವೆ ಮಾಡುತ್ತಿದ್ದ ಅಪರೂಪ ವೈದ್ಯರು. ಅವರ ಅಕಾಲಿಕ ನಿಧನ ನಾಡಿಗೆ ತುಂಬಲಾರದ ನಷ್ಟ. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಸುಯೋಗ್ ಆಸ್ಪತ್ರೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಸಂತಾಪ ವ್ಯಕ್ತಪಡಿಸಿದ್ದಾರೆ.

### ರಾಜ್ಯದಲ್ಲಿ ಮತ್ಸ್ಯ ಕ್ರಾಂತಿಗೆ ನಿರ್ಧಾರ

ಇದಕ್ಕೆ ಕೆರೆಗಳಿರುವ ಕಡೆ ಬಿಡಿಎ ಜಾಗ ಒದಗಿಸಲು ಒಪ್ಪಿದೆ ಎಂದು ಹೇಳಿದರು.

ರಾಜ್ಯದಲ್ಲಿ ಮೀನನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸಲು ನಿರ್ಧರಿಸಲಾಗಿದ್ದು ಇದಕ್ಕಾಗಿ ಎಲ್ಲ ಜಿಲ್ಲೆಗಳಲ್ಲಿ ಮೀನು ಮರಿ ಸಾಕಾಣಿಕೆ ಕೇಂದ್ರಗಳನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದ ಅವರು,ಇಂತಹ ಸಾಕಾಣಿಕೆ ಕೇಂದ್ರವನ್ನು ಆಲಮಟ್ಟಿ ಜಲಾಶಯದಲ್ಲೂ ಸ್ಥಾಪಿಸಲು ತೀರ್ಮಾನಿಸಲಾಗಿದೆ ಎಂದರು. ಆಲಮಟ್ಟಿ ಜಲಾಶಯದಲ್ಲಿ ಮೀನು ಮರಿ ಸಾಕಾಣಿಕೆ ಮಾಡಲು ಇಪತ್ತೈದು ಎಕರೆ ಜಾಗವನ್ನು ನೀರಾವರಿ ಇಲಾಖೆ ಒದಗಿಸಿದ್ದು ಇದೇ ರೀತಿ ಕೆ.ಆರ್.ಎಸ್.ಲಿಂಗನಮಕ್ಕಿ,ಭದ್ರಾ ಸೇರಿದಂತೆ ಹನ್ನೆರಡು ಪ್ರಮುಖ ಜಲಾಶಯಗಳಲ್ಲಿ ಮೀನು ಮರಿ ಸಾಕಾಣಿಕೆ ಕೇಂದ್ರಗಳನ್ನು ಸ್ಥಾಪಿಸಲು,ಆ ಮೂಲಕ ಎಲ್ಲ ಜಲಾಶಯಗಳಲ್ಲಿ ಗರಿಷ್ಟ ಪ್ರಮಾಣದಲ್ಲಿ ಮೀನು ಉತ್ಪಾದಿಲು ತೀರ್ಮಾನಿಸಲಾಗಿದೆ ಎಂದರು.


ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯನ್ನು ದೊಡ್ಡ ಮಟ್ಟದಲ್ಲಿ ಬೆಳೆಸುವುದಾಗಿ ನುಡಿದ ಅವರು,ಹೊರರಾಜ್ಯಗಳಿಂದ ಮೀನು ಮರಿಗಳನ್ನು ಆಮದು ಮಾಡಿಕೊಳ್ಳುವ ಅನಿವಾರ್ಯತೆಯಿಂದ ಇದುವರೆಗೆ ಇದು ನಮಗೆ ಸಾಧ್ಯವಾಗಿರಲಿಲ್ಲ.ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳ ಮೇಲಿದ್ದ ಇಂತಹ ಅವಲಂಬನೆಯನ್ನು ತಪ್ಪಿಸಲು ನಮ್ಮಲ್ಲೇ ಹೆಚ್ಚು ಮೀನು ಸಾಕಾಣಿಕಾ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತಿರುವುದರಿಂದ ಅನುಕೂಲವಾಗಲಿದೆ ಎಂದರು. ಪ್ರತಿ ಜಿಲ್ಲೆಗಳಲ್ಲಿ ಸ್ಥಳೀಯ ಅಗತ್ಯಗಳಿಗೆ ಅನುಗುಣವಾದ ಮೀನಿನ ತಳಿಗಳನ್ನು ಉತ್ಪಾದಿಸುವುದು ನಮ್ಮ ಉದ್ದೇಶ,ಮಡೆಂಜಿ, ಮರೆಂಜಿ ತಳಿಯ ಮೀನುಗಳು ದಕ್ಷಿಣ ಕನ್ನಡದಲ್ಲಿ ಹೆಚ್ಚು.ಇದೇ ರೀತಿ ಆಯಾ ಜಿಲ್ಲೆಗಳಿಗೆ ವಿಶಿಷ್ಟವಾದ ತಳಿಗಳು ಇದ್ದು ಅವನ್ನು ಅಭಿವೃದ್ದಿಪಡಿಸುವುದು ನಮ್ಮ ಯೋಚನೆ ಎಂದರು. ಕರಾವಳಿ ಭಾಗದಲ್ಲಿ ಸಮುದ್ರ ಕೊರತೆಯಿಂದ ಅಪಾರ ನಷ್ಟವಾಗುತ್ತಿದ್ದು ತಡೆಗೋಡೆಗಳನ್ನು ನಿರ್ಮಿಸುವ ಮೂಲಕ ತಾತ್ಕಾಲಿಕವಾಗಿ ಸಮಸ್ಯೆ ನಿವಾರಣೆ ಮಾಡಿದರೂ ಕೆಲವೇ ಕಾಲದಲ್ಲಿ ಅದು ಮರುಕಳಿಸುತ್ತಿದೆ.ಇದೇ ಕಾರಣಕ್ಕಾಗಿ ಉಲ್ಲಾಲದ ಬಟ್ಟಂಪಾಡಿ ಮತ್ತು ಮರವಂತೆಗಳಲ್ಲಿ ಎರಡು ಪ್ರತ್ಯೇಕ ತಂತ್ರಜ್ಞಾನಗಳನ್ನು ಪ್ರಾಯೋಗಿಕವಾಗಿ ಅಳವಡಿಸಿ ಸಮುದ್ರ ಕೊರೆತವನ್ನು ತಡೆಗಟ್ಟಲು ನಿರ್ಧರಿಸಲಾಗಿದೆ ಎಂದರು. ಬಟ್ಟಂಪಾಡಿಯಲ್ಲಿ ಸೀ ವೇವ್ ಬ್ರೇಕರ್ ತಂತ್ರಜ್ಞಾನ ಅಳವಡಿಸಲಾಗುವುದು ಇದೇ ರೀತಿ ಮರವಂತೆಯಲ್ಲೂ ಪ್ರತ್ಯೇಕ ತಂತ್ರಜ್ಞಾನ ಬಳಸಿ ಸಮುದ್ರ ಕೊರೆತವನ್ನು ತಡೆಗಟ್ಟಲಾಗುವುದು ಎಂದ ಅವರು,ಈ ತಂತ್ರಜ್ಞಾನ ಬೇರೆ ರಾಜ್ಯಗಳಲ್ಲಿ ಯಶಸ್ವಿಯಾಗಿದ್ದು ನಮ್ಮಲ್ಲೂ ಪರಿಣಾಮಕಾರಿಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಇದಕ್ಕಾಗಿ ಸುಮಾರು ಇಪ್ಪತ್ತೈದು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು ಎಂದ ಅವರು,ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಮುದ್ರ ಕೊರೆತ ತಡೆಗಟ್ಟಲು ಜಾರಿಗೊಳಿಸಿದ ಮುನ್ನೂರೈವತ್ತು ಕೋಟಿ ರೂಪಾಯಿ ವೆಚ್ಚದ ಕಾಮಗಾರಿ ಕಳಪೆಯಾಗಿದ್ದು ಈ ಸಂಬಂಧ ತನಿಖೆ ನಡೆಸಲು ಸರ್ಕಾರ ತೀರ್ಮಾನಿಸಿದೆ ಎಂದರು.

ಸೆಪ್ಟೆಂಬರ್ ಹತ್ತರೊಳಗಾಗಿ ತನಿಖೆಯನ್ನು ಪೂರ್ಣಗೊಳಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ನುಡಿದ ಅವರು,ರಾಜ್ಯದಲ್ಲಿ ಬಂದರುಗಳ ಅಭಿವೃದ್ದಿಗೆ ವಿಶೇಷ ಕ್ರಮ ಕೈಗೊಳ್ಳಲಾಗಿದೆ ಎಂದರು. ವಾಣಿಜ್ಯ ವಹಿವಾಟುಗಳಿಗಾಗಿ ಕೊಚ್ಚಿನ್ ಸೇರಿದಂತೆ ಬೇರೆ ಬಂದರುಗಳ ಮೇಲೆ ನಾವು ಹೆಚ್ಚು ಅವಲಂಬಿತವಾಗಿದ್ದೆವಾದರೂ ಈಗ ಮಂಗಳೂರು ಬಂದರನ್ನು ಅಭಿವೃದ್ಧಿಪಡಿಸಿ ವಾಣಿಜ್ಯ ಚಟುವಟಿಕೆಗಳ ಕೇಂದ್ರ ಬಿಂದುವನ್ನಾಗಿ ಮಾಡಲು ತೀರ್ಮಾನಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ಅವರು ವಿವರಿಸಿದರು. ಬಂದರಿನಲ್ಲಿ ಹೆಚ್ಚು ಹಡಗು,ದೋಣಿಗಳು ಬಂದು ತಂಗಲು ಅವಕಾಶ ಮಾಡಿಕೊಡಲಾಗುವುದು ಎಂದ ಅವರು, ಆ ಮೂಲಕ ವಾಣಿಜ್ಯ ಚಟುವಟಿಕೆಗಳಿಗೆ, ಆಮದು-ರಫ್ತು ಕಾರ್ಯಗಳಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಸ್ಪಷ್ಟ ಪಡಿಸಿದರು.

# ದಸರಾ ಒಳಗಾಗಿ ಮೈಸೂರಿನ ರಿಂಗ್ ರಸ್ತೆಯಲ್ಲಿ ಬೆಳಗಲಿವೆ ಎಲ್‌ಇಡಿ ದೀಪಗಳು

**ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಗುದ್ದಲಿಪೂಜೆ**



ಮೈಸೂರು, ಆ. 17 (ಆರ್‌ಕೆ)- ಮೈಸೂರಿನ ರಿಂಗ್ ರಸ್ತೆ ವಿದ್ಯುತ್ ಕಂಬಗಳಿಗೆ ಭೂಗತ ಕೇಬಲ್ ಹಾಕಿ ಎಲ್‌ಇಡಿ ದೀಪ ಅಳವಡಿಸುವ ಕಾಮಗಾರಿ ಆರಂಭಿಸಲಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಸೋಮವಾರ ದಟ್ಟಗಳ್ಳಿಯ ರಿಂಗ್ ರಸ್ತೆಯಲ್ಲಿ ಗುದ್ದಲಿಪೂಜೆ ನೆರವೇರಿಸಿದರು.

42 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆಯಲ್ಲಿರುವ 2,135 ವಿದ್ಯುತ್ ಕಂಬಗಳಿಗೆ 4818 ಎಲ್‌ಇಡಿ ದೀಪಗಳನ್ನು ಅಳವಡಿಸುವುದು ಹಾಗೂ ಹೊಸದಾಗಿ ಅಂಡರ್‌ಗ್ರೌಂಡ್ ಕೇಬಲ್ ಹಾಕುವ ಕೆಲಸ ಆರಂಭವಾಗಿದ್ದು, ದಸರಾ ಒಳಗಾಗಿ ರಿಂಗ್ ರಸ್ತೆಯಲ್ಲಿ ಎಲ್‌ಇಡಿ ದೀಪಗಳನ್ನು ಬೆಳಗಿಸಲು ಮೈಸೂರು ಮಹಾನಗರ ಪಾಲಿಕೆಯು ಕ್ರಮ ವಹಿಸಿದೆ.

2014ರಲ್ಲಿ ಮುಡಾದಿಂದ ಅಳವಡಿಸಿರುವ ರಿಂಗ್ ರಸ್ತೆ ದೀಪದ ಕೇಬಲ್‌ಗಳು ಹಾಗೂ ಸೋಡಿಯಂ ದೀಪಗಳು ಹಾಳಾಗಿರುವುದರಿಂದ ರಿಂಗ್ ರೋಡ್‌ನಲ್ಲಿ ರಾತ್ರಿ ವೇಳೆ ಕಗ್ಗತ್ತಲು ಆವರಿಸಿರುವುದರಿಂದ ಅಪಘಾತಗಳು ಸಂಭವಿಸುವುದಲ್ಲದೆ, ಅಪರಾಧ ಪ್ರಕರಣಗಳು ನಡೆಯುತ್ತಿರುವುದರಿಂದ ಕಳೆದ ಮಾರ್ಚ್ ಮಾಹೆಯಲ್ಲಿ ಸಂಸದ ಪ್ರತಾಪ್ ಸಿಂಹ ಅವರು ಮುಡಾ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಕೇಬಲ್ ಅಳವಡಿಸಿ ಎಲ್‌ಇಡಿ ದೀಪ ಬೆಳಗಿಸಲು ನಿರ್ಧರಿಸಲಾಗಿತ್ತು.

ಈ ಯೋಜನೆಗಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು 12 ಕೋಟಿ ರೂ. ಅನುದಾನ ನೀಡುತ್ತಿದೆ. ಮೈಸೂರು ಮಹಾನಗರ ಪಾಲಿಕೆಯು ಭೂಗತ ಕೇಬಲ್ ಹಾಗೂ ಉತ್ತಮ ಇಂಧನ ಕ್ಷಮತೆಯುಳ್ಳ ಎಲ್‌ಇಡಿ ಬೀದಿ ದೀಪ ಅಳವಡಿಸಿ ಕೇಂದ್ರೀಕೃತ ಚಾಲನೆ ಮತ್ತು ನಿರ್ವಹಣಾ ವ್ಯವಸ್ಥೆ (ಸಿಸಿಎಂಎಸ್) ಮಾಡಲಿದೆ.

ಡಾರ್ಕ್ ಸ್ಪಾಟ್ ಇರುವ ಜಂಕ್ಷನ್‌ಗಳಲ್ಲಿ ಹೆಚ್ಚುವರಿ ವಿದ್ಯುತ್ ಕಂಬ ಹಾಕಿ ಒಟ್ಟು 4,818 ಎಲ್‌ಇಡಿ ಬೀದಿ ದೀಪ, 70 ಸಿಸಿಎಂಎಸ್ ಹಾಗೂ 98 ಹೆಚ್ಚುವರಿ ಓಕ್ಟೋಜೋನಲ್ ಕಂಬಗಳನ್ನು ಅಳವಡಿಸಲಾಗುತ್ತಿದೆ. ಪ್ರತೀ ತಿಂಗಳೂ ವಿದ್ಯುತ್ ಬಿಲ್ ಪಾವತಿಸುವುದು, ನಿರ್ವಹಣೆಯನ್ನು ಪಾಲಿಕೆ ವತಿಯಿಂದ ಮಾಡಲಾಗುವುದು.

ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ.ಜೆ. ಸಿಂಧು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಎ.ಬಿ. ಕವನ ಅವರು ಕಾಮಗಾರಿಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾರೆ. ಕಾಮಗಾರಿಯ ಗುದ್ದಲಿ ಪೂಜೆ ವೇಳೆ ಸಂಸದ ಪ್ರತಾಪ್ ಸಿಂಹ, ಮೇಯರ್ ಸುನಂದ ಪಾಲನೇತ್ರ, ಶಾಸಕರಾದ ಜಿ.ಟಿ. ದೇವೇಗೌಡ, ಎಲ್.ನಾಗೇಂದ್ರ, ಉಪ ಮೇಯರ್ ಅನ್ವರ್ ಬೇಗ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕಾರ್ಪೊರೇಟರ್ ಲಕ್ಷ್ಮೀ ಕಿರಣ್‌ಗೌಡ, ಬಿಜೆಪಿ ಮುಖಂಡರಿಂದ ಅಪ್ಪಣ್ಣ, ಜಯಪ್ರಕಾಶ್, ಲಕ್ಷ್ಮಿ ಹಾಗೂ ಇತರರು ಉಪಸ್ಥಿತರಿದ್ದರು.

## ನಾಳೆಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವ



ಮೈಸೂರು, ಆ.17(ಆರ್‌ಕೆಬಿ)- ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಮೈಸೂರಿನ ಭಾವಸಾರ ಕ್ಷತ್ರಿಯ ಮಂಡಳಿ ವತಿಯಿಂದ ಮೈಸೂರಿನ ಲಷ್ಕರ್ ಮೊಹಲ್ಲಾ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ವಿಠ್ಠಲಸ್ವಾಮಿ ದೇವಸ್ಥಾನದಲ್ಲಿ ಆ.19 ಮತ್ತು 20ರಂದು ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ. ಆ.19ರಂದು ಬೆಳಗ್ಗೆ ವಿಶೇಷ ಪೂಜಾ ಕಾರ್ಯಗಳು, ಸಂಜೆ 7 ಗಂಟೆಗೆ 8 ವರ್ಷದೊಳಗಿನ ಸಮಾಜದ ಮಕ್ಕಳಿಗೆ ರಾಧಾ ಕೃಷ್ಣ ವೇಷ ಭೂಷಣ ಸ್ಪರ್ಧೆ ನಡೆಯಲಿದೆ. ರಾತ್ರಿ 10.30ಕ್ಕೆ ಭಾವಸಾರ ಕ್ಷತ್ರಿಯ ಭಜನಾ ಮಂಡಳಿಯಿಂದ ಪಂಡರೀ ಭಜನೆ, 20ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ದಿಂಡಿ ಭಜನೆ, ಕೃಷ್ಣನ ಉತ್ಸವ ನಡೆಯಲಿದೆ. ಮಧ್ಯಾಹ್ನ 1.30ಕ್ಕೆ ಅನ್ನ ಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸಮಾಜದ ಗೌರವ ಕಾರ್ಯದರ್ಶಿ ಎಸ್.ರಾಕೇಶ್ ನಾಯಕ್ ತಿಳಿಸಿದ್ದಾರೆ.



**ಸ್ವಾತಂತ್ರ್ಯ ಅಮೃತ ಮಹೋತ್ಸವ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ ಅಂಗವಾಗಿ ಮೈಸೂರಿನ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಸಿದ್ಧಾರ್ಥನಗರದ ಕಾಗಿನೆಲೆ ಶಾಖಾಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಸಾನಿಧ್ಯದಲ್ಲಿ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ನಗರಪಾಲಿಕೆ ಸದಸ್ಯರಾದ ಕೆ.ಜೆ.ರಮೇಶ್, ರೂಪಾ ಯೋಗೇಶ್, ಮುಖಂಡರಾದ ಮಹೇಂದ್ರ ಜೋಗಿ ಮಂಜು, ಜಯರಾಂ, ಪುನೀತ್ ರಾಯಣ್ಣ, ವಿಜಯಕುಮಾರ್, ಕ್ಯಾಂಟೀನ್ ನಾಗಣ್ಣ, ಸವಿತಾ, ಕಮಲ, ಶೋಭಾ, ಕೃಷ್ಣ ಚಂದ್ರುಗುಪ್ತ ಲೋಕೇಶ್, ಮಲ್ಲ, ಸಂಜು, ವಿನೋದ, ಮೋಹನ ಇನ್ನಿತರರು ಭಾಗವಹಿಸಿದ್ದರು.**

## ಅಪಾರ ಜ್ಞಾನ ಭಂಡಾರ ಹೊಂದಿರುವ ಸಂಸ್ಕೃತ ಅಧ್ಯಯನ ಮಾಡುವವರ ಸಂಖ್ಯೆ ವಿರಳ

**ಸಂಸ್ಕೃತೋತ್ಸವದಲ್ಲಿ ಪ್ರೊ.ಡಾ.ಗುರುಪಾದ ಕೆ.ಹೆಗಡೆ ಬೇಸರ**


ಮೈಸೂರು, ಆ.17(ಆರ್‌ಕೆಬಿ)- ಅಗಾಧ ಜ್ಞಾನ ಭಂಡಾರ ಹೊಂದಿರುವ ಸಂಸ್ಕೃತ ಭಾಷೆ ಎಲ್ಲಾ ಭಾರತೀಯ ಭಾಷೆಗಳ ಮಾತೃ ಸ್ಥಾನ ಹೊಂದಿರುವ ಸಂಸ್ಕೃತ ಭಾಷೆ ಅಗಾಧ ಜ್ಞಾನ ಭಂಡಾರವಾಗಿದೆ ಎಂದು ಪ್ರೊ.ಡಾ.ಗುರುಪಾದ ಕೆ.ಹೆಗಡೆ ತಿಳಿಸಿದರು.

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ, ಸಂಸ್ಕೃತ ವಿಭಾಗ, ಸಂಸ್ಕೃತ ಭಾರತೀ ಸಹಯೋಗದಲ್ಲಿ ನಡೆದ ಸಂಸ್ಕೃತೋತ್ಸವದದಲ್ಲಿ ಅವರು ಮಾತನಾಡಿದರು.

ಸಂಸ್ಕೃತ ಭಾಷೆ ಯಾವುದೇ ಒಂದು ಜನಾಂಗಕ್ಕೆ ಸೀಮಿತವಾಗಿರದೆ ವಿಶ್ವದಾದ್ಯಂತ ಪಸರಿಸಿದೆ. ನಮ್ಮ ಜೀವನದ ದಿಕ್ಕನ್ನು ಬದಲಿಸುವಂತಹ ಅನೇಕ ವಿಚಾರಧಾರೆಗಳು ಸಂಸ್ಕೃತ ಸಾಹಿತ್ಯದಲ್ಲಿ ಇದ್ದರೂ ಇದನ್ನು ಅಧ್ಯಯನ ಮಾಡುವವರ ಸಂಖ್ಯೆ ಬಹಳ ವಿರಳವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಭಾರತದ ಪ್ರಾಚೀನ ಭಾಷೆಯೂ ಧಾರ್ಮಿಕ ಮಹತ್ವ ವನ್ನೂ ಹೊಂದಿರುವಂತಹ ಸಂಸ್ಕೃತ ಭಾಷೆಯ ಉಳಿವಿಗಾಗಿ ಎಲ್ಲರೂ ಪ್ರಯತ್ನಿಸಬೇಕಾಗಿದೆ ಎಂದರು. ಮಹಾಜನ ಸಂಸ್ಥೆಯ ಸ್ನಾತಕೋತ್ತರ ವಿಭಾಗದ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾ ಚಾರ್ಯ, ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್.ಜಯಕುಮಾರಿ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ್ ಇನ್ನಿತರರು ಉಪಸ್ಥಿತರಿದ್ದರು.



## ನಿಗದಿತ ಸಮಯಕ್ಕೆ ಶಾಲೆಗೆ ಹಾಜರಾಗದ ಶಿಕ್ಷಕರ ವಿರುದ್ಧ ಶಿಸ್ತು ಕ್ರಮ



ಬೆಂಗಳೂರು, ಆ. 17 (ಕೆಎಂಶಿ)-ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ನಿಗದಿತ ಸಮಯಕ್ಕೆ ಶಿಕ್ಷಕರು ಮತ್ತು ಸಿಬ್ಬಂದಿ ಹಾಜರಾಗದಿದ್ದರೆ ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಇಂದಿಲ್ಲಿ ಎಚ್ಚರಿಕೆ ನೀಡಿದ್ದಾರೆ.

ಇತ್ತೀಚೆಗೆ ನಾನು ಕೆಲವು ಶಾಲೆಗಳಿಗೆ ಹಠಾತ್ ಆಗಿ ಭೇಟಿ ನೀಡಿದ ಸಂದರ್ಭದಲ್ಲಿ ಸಮಯ ಮೀರಿದರೂ, ವಿದ್ಯಾರ್ಥಿಗಳು ಶಿಕ್ಷಕರಿಗಾಗಿ ಕಾಯುತ್ತಿದ್ದರು. ಮಕ್ಕಳನ್ನು ಭೋದನೆಯಿಂದ ವಂಚಿತರಾಗಿಸಿ, ಅವರ ಸುರಕ್ಷತೆಗೆ ಧಕ್ಕೆ ತರಬಹುದಾದ ಶಿಕ್ಷಕರ ಗೈರು ಹಾಜರಿಯನ್ನು ಗಂಭೀರವಾಗಿ ಪರಿಗಣಿಸಿ ಎಂದು ಹಿರಿಯ ಅಧಿಕಾರಿಗಳಿಗೆ ಆದೇಶ ಮಾಡಿದ್ದಾರೆ. ರಾಜ್ಯದಲ್ಲಿ ಬಹುತೇಕ ಶಿಕ್ಷಕರು ಸಮಯಕ್ಕೆ ಸರಿಯಾಗಿ ಶಾಲೆಗೆ ಹಾಜರಾಗುವುದರ ಜೊತೆ ಶ್ರದ್ಧೆಯಿಂದ ಪರಿಣಾಮಕಾರಿಯಾಗಿ ಪಾಠ ಭೋದನೆಯಲ್ಲಿ ತೊಡಗಿಸಿಕೊಂಡಿರುವುದನ್ನು ನಾನು ಅಧಿಕಾರಿಗಳಿಂದ ತರಿಸಿಕೊಂಡ ವರದಿಯಲ್ಲಿ ನೋಡಿದ್ದೇನೆ. ಆದರೆ ಕೆಲವಡೆ ಶಿಕ್ಷಕರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇಂತಹದ್ದಕ್ಕೆ ಇನ್ನು ಮುಂದೆ ಅವಕಾಶ ನೀಡುವುದಿಲ್ಲ ಎಂದರು.

## ವಧೂ-ವರರ ಮುಖಾಮುಖಿ ಸಮಾವೇಶ

ಮೈಸೂರು, ಆ. 17- ಜೆಎಸ್‌ಎಸ್ ವಿವಾಹ ವೇದಿಕೆ ವತಿಯಿಂದ ಆ. 21 ರಂದು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನ ಸಭಾಂಗಣದಲ್ಲಿ ವಧೂ-ವರರ ಸಮಾವೇಶ ಏರ್ಪಡಿಸಲಾಗಿದೆ. ನೋಂದಾಯಿಸಿಕೊಂಡವರಿಗೆ ಮಾತ್ರ ಪ್ರವೇಶವಿರುತ್ತದೆ. ನೋಂದಾಯಿಸಿಕೊಂಡಿಲ್ಲದವರು ವಧೂ-ವರರ ಮುಖಾಮುಖಿ ಸಮಾವೇಶದ ದಿನದಂದು ನೋಂದಾಯಿಸಿಕೊಳ್ಳಬಹುದು. ಸಮಾವೇಶ ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದೆ. ದೂ. 0821-2430322, ಮೊ. 9611070674 ಸಂಪರ್ಕಿಸಬಹುದು.



**ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಶಾಲಾ ವೃತ್ತದಲ್ಲಿ ಬಿಜೆಪಿ ಫಲಾನುಭವಿಗಳ ಪ್ರಕೋಷ್ಠ ವತಿಯಿಂದ ಮಕ್ಕಳಿಗೆ ಓದುವ ಸಾಮಗ್ರಿ, ಬ್ಯಾಗ್, ಸಿಹಿ ವಿತರಿಸಲಾಯಿತು. ಪ್ರಕೋಷ್ಠ ಸಂಚಾಲಕ ಪರಮೇಶ್‌ಗೌಡ, ರಾಜ್ಯ ಸಮಿತಿ ಸದಸ್ಯ ಬಿ.ಉಮೇಶ್, ನಗರಪಾಲಿಕೆ ಸದಸ್ಯರಾದ ಪ್ರಮೀಳಾ ಭರತ್, ಚಿಕ್ಕವೆಂಕಟು, ಮೃಗಾಲಯ ಪ್ರಾಧಿಕಾರ ಸದಸ್ಯ ಗೋಕುಲ್ ಗೋವರ್ಧನ್, ಬಿಜೆಪಿ ಮುಖಂಡರಾದ ಚೌಡಪ್ಪ, ರಮೇಶ್, ಪ್ರದೀಪ್‌ಕುಮಾರ್, ನಗರ ಸಮಿತಿ ಸದಸ್ಯ ದೀಪಕ್ ಇನ್ನಿತರು ಇದ್ದರು.**

**ಅಸ್ಪೃಶ್ಯತೆ ಆಚರಣೆ ಸಂಬಂಧ ಘರ್ಷಣೆ**

## ಅರಸಿನಕೆರೆ, ಮಾರ್ಬಳ್ಳಿ, ಚುಂಚರಾಯನಹುಂಡಿಯಲ್ಲಿ ಶಾಂತಿ ಸಭೆ

**ಸೌಹಾರ್ದದಿಂದ ಸಹಬಾಳ್ವೆ, ಎಲ್ಲರೂ ಸೇರಿ ಹಬ್ಬ ಆಚರಿಸಲು ಒಮ್ಮತದ ನಿರ್ಧಾರ**



ಮೈಸೂರು, ಆ. 17(ಆರ್‌ಕೆ)- ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ದೇವಸ್ಥಾನ, ಹೋಟೆಲ್‌ಗಳಲ್ಲಿ ಮುಕ್ತ ಪ್ರವೇಶ ನೀಡದೇ ಅಸ್ಪೃಶ್ಯತೆ ಆಚರಣೆ ಸಂಬಂಧ ಉಂಟಾಗಿದ್ದ ಘರ್ಷಣೆ ಹಿನ್ನೆಲೆಯಲ್ಲಿ ಮೈಸೂರು ತಾಲೂಕಿನ ಜಯಪುರ ಹೋಬಳಿ ಅರಸಿನಕೆರೆ, ಮಾರ್ಬಳ್ಳಿ ಹಾಗೂ ಚುಂಚರಾಯನ ಹುಂಡಿ ಗ್ರಾಮಗಳಲ್ಲಿ ತಹಸೀಲ್ದಾರ್ ಗಿರೀಶ್ ಅವರ ನೇತೃತ್ವದಲ್ಲಿ ಮಂಗಳವಾರ ಶಾಂತಿ ಸಭೆ ನಡೆಸಲಾಯಿತು.

ದೇವಸ್ಥಾನಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಸೇರಿದಂತೆ ಎಲ್ಲಾ ವರ್ಗ, ಸಮುದಾಯದವರಿಗೂ ಮುಕ್ತ ಅವಕಾಶ ನೀಡಬೇಕು, ಸಾರ್ವಜನಿಕ ಸ್ಥಳಗಳಲ್ಲಿ ಸಮಾನತೆ ಕಾಯ್ದುಕೊಂಡು ಗ್ರಾಮದ ಎಲ್ಲರೂ ಒಗ್ಗಟ್ಟಿನಿಂದ ಸಹೋದರರಂತೆ ಸೌಹಾರ್ದಯುತವಾಗಿ ಜೀವನ ನಡೆಸುವಂತೆ ತಹಸೀಲ್ದಾರ್ ಸಲಹೆ ನೀಡಿದರು.

ಈ ಹಿನ್ನೆಲೆಯಲ್ಲಿ ಸಾಮರಸ್ಯದ ಕೊರತೆಯಿಂದಾಗಿ ನಿಂತು ಹೋಗಿರುವ ಹಬ್ಬಗಳನ್ನು ಎಲ್ಲರೂ ಸೇರಿ ಆಚರಿಸುವುದು, ಬೇಧ-ಭಾವ ಮರೆತು ಸಹಬಾಳ್ವೆ ನಡೆಸುವುದು, ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟ ಯೋಜನೆಗೆ ದಲಿತರನ್ನು ನೇಮಿಸಿ ಕೊಳ್ಳುವುದು, ಆಚಾರ-ವಿಚಾರಗಳು ಬೇರೆ ಬೇರೆಯಾದರೂ, ಸಮಾನತೆಯಿಂದ ಸಹಬಾಳ್ವೆ ನಡೆಸಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು.

ಮಾಜಿ ಮೇಯರ್ ಪುರುಷೋತ್ತಮ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೆ. ಸಿದ್ದಲಿಂಗು, ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಗಿರೀಶ್, ರೆವಿನ್ಯೂ ಇನ್ಸ್‌ಪೆಕ್ಟರ್, ವಿಲೇಜ್ ಅಕೌಂಟೆಂಟ್, ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಗ್ರಾಮಗಳ ಮುಖಂಡರು ಶಾಂತಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ಜೂನ್ 29ರಂದು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಕೆಲ ಸದಸ್ಯರು ಜಿಲ್ಲೆಯ ಕೆಲವೆಡೆ ಅಸ್ಪೃಶ್ಯತೆ ಜೀವಂತವಾಗಿದ್ದು, ದಲಿತರಿಗೆ ಹೋಟೆಲು, ದೇವಸ್ಥಾನಗಳಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ ಎಂದು ಆರೋಪಿಸಿದ್ದರು. ನಂತರ ಮಾತನಾಡಿದ ಜಿಲ್ಲಾಧಿಕಾರಿಗಳು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟು ಅಧಿನಿಯಮ ಕಾಯ್ದೆಯನ್ವಯ ಅಸ್ಪೃಶ್ಯತೆ ಆಚರಣೆ ಶಿಕ್ಷಾರ್ಹ ಅಪರಾಧವಾಗಿದ್ದು, ಆ ಬಗ್ಗೆ ಗ್ರಾಮಗಳಲ್ಲಿ ಶಾಂತಿ ಸಭೆ ನಡೆಸಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ತಿಳುವಳಿಕೆ ಮೂಡಿಸಬೇಕೆಂದು ಸೂಚಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಮಂಗಳವಾರ ಬೆಳಗ್ಗೆ 11ರಿಂದ ಮಧ್ಯಾಹ್ನ 12.30 ಗಂಟೆವರೆಗೆ ಅರಸಿನಕೆರೆ ಗ್ರಾಮದಲ್ಲಿ, ಮಧ್ಯಾಹ್ನ 12.45ರಿಂದ 2 ಗಂಟೆವರೆಗೆ ಮಾರ್ಬಳ್ಳಿ ಹಾಗೂ ಮಧ್ಯಾಹ್ನ 2.15ರಿಂದ ಸಂಜೆ 4 ಗಂಟೆವರೆಗೆ ಚುಂಚರಾಯನ ಹುಂಡಿ ಗ್ರಾಮದಲ್ಲಿ ತಹಸೀಲ್ದಾರ್ ಗಿರೀಶ್ ಶಾಂತಿ ಸಭೆ ನಡೆಸಿದರು.

## ಒಂದನೇ ಪುಟದಿಂದ

### ಡಿಸೆಂಬರ್ ವೇಳೆಗೆ ಪೂರ್ಣ

6 ಸಾವಿರ ಚ.ಅಡಿ ವಿಸ್ತೀರ್ಣದಲ್ಲಿ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡ ನಿರ್ಮಿಸಿ, 400 ಕಾರು ಹಾಗೂ 200 ದ್ವಿಚಕ್ರ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗಿತ್ತು. ಆದರೆ ದಶಕ ಕಳೆದರೂ ಉದ್ದೇಶಿತ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡ ಪೂರ್ಣಗೊಳ್ಳದ ಕಾರಣ ಸಾರ್ವಜನಿಕ ವಲಯದಿಂದ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ.

ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡ ನಿರ್ಮಾಣಕ್ಕೆ 18.28 ಕೋಟಿ ರೂ. ಯೋಜನೆಗೆ ಗುತ್ತಿಗೆ ಪಡೆದಿದ್ದ ಹೈದ್ರಾಬಾದ್ ಮೂಲದ ಛಾಬ್ರಿಯಾ ಅಸೋಸಿಯೇಟ್ಸ್ ಸಂಸ್ಥೆ 2011ರ ಏಪ್ರಿಲ್ 29ರಂದು ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿತ್ತು. 2012ರ ಏಪ್ರಿಲ್ ತಿಂಗಳಲ್ಲಿ ಪೂರ್ಣಗೊಳಿಸುವ ಷರತ್ತಿನೊಂದಿಗೆ ಕಾಮಗಾರಿ ಆರಂಭಿಸಿತ್ತು. ಆದರೆ, ಕಟ್ಟಡ ನಿರ್ಮಾಣದ ವಸ್ತುಗಳ ಬೆಲೆ ಏರಿಕೆ ಮುಂದಿಟ್ಟುಕೊಂಡು ಹೆಚ್ಚುವರಿ ಅನುಧಾನ ನೀಡುವಂತೆ ಪೀಡಿಸಿದ್ದ ಗುತ್ತಿಗೆದಾರ ಕಾಮಗಾರಿ ಸ್ಥಗಿತಗೊಳಿಸಿದ ಹೈದ್ರಾಬಾದ್‌ಗೆ ಪಲಾಯನ ಮಾಡಿದ್ದ.

**ಏನಿದೆ ಕಟ್ಟಡದಲ್ಲಿ:** ಸುಮಾರು 6000 ಚದರ ಅಡಿ ವಿಸ್ತೀರ್ಣದಲ್ಲಿ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡ ನಿರ್ಮಿಸಲಾಗುತ್ತಿದೆ. ಮೂರು ಅಂತಸ್ತಿನಲ್ಲಿ ಪಿಲ್ಲರ್‌ಗಳನ್ನು ಬಳಸಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದ್ದು, ಸುಮಾರು 400 ಕಾರು ಹಾಗೂ 200 ದ್ವಿಚಕ್ರ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗುತ್ತದೆ. ಈ ಕಟ್ಟಡದ ಮೇಲ್ಭಾಗದಲ್ಲಿ ಬಯಲು ರಂಗಮಂದಿರ ನಿರ್ಮಿಸಲಾಗಿದೆ. ಈಗಾಗಲೇ ಬಯಲು ರಂಗಮಂದಿರದ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಆದರೆ ಪಾರ್ಕಿಂಗ್ ಕಟ್ಟಡ ಮಾತ್ರ ಶೇ.80ರಷ್ಟು ಪೂರ್ಣಗೊಂಡಿದ್ದು, ಶೇ.20 ರಷ್ಟು ಕಾಮಗಾರಿ ಬಾಕಿ ಇದೆ. ಅಲ್ಲದೆ, ದ್ವಿಚಕ್ರ ವಾಹನ ನಿಲುಗಡೆಗೆ ನಿರ್ಮಿಸಬೇಕಾದ ಕಟ್ಟಡದ ಕಾಮಗಾರಿಗೆ ಕೇವಲ ಪಿಲ್ಲರ್‌ಗಳನ್ನಷ್ಟೇ ಅಳವಡಿಸಲಾಗಿತ್ತು. ಆದರೆ ಈಗ ಕಾಮಗಾರಿ ಆರಂಭಿಸಲಾಗಿದೆ.

**ತಾತ್ಕಾಲಿಕ ಪಾರ್ಕಿಂಗ್:** ಪ್ರಸಕ್ತ ಸಾಲಿನ ನಾಡ ಹಬ್ಬ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸರ್ಕಾರ ನಿರ್ಧರಿಸಿರುವ ಹಿನ್ನೆಲೆಯಲ್ಲಿ ಈ ಬಾರಿ ಮೈಸೂರಿಗೆ ಆಗಮಿಸುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುವುದು ಖಚಿತ. ಈ ಹಿನ್ನೆಲೆಯಲ್ಲಿ ಪಾರ್ಕಿಂಗ್ ಸಮಸ್ಯೆ ಉದ್ಭವಿಸುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಪುರ ಭವನದ ಮಲ್ಟಿ ಲೆವೆಲ್ ಪಾರ್ಕಿಂಗ್ ಕಟ್ಟಡದಲ್ಲಿ ತಾತ್ಕಾಲಿಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಪಾಲಿಕೆ ಉದ್ದೇಶಿಸಿದೆ. 2018 ಹಾಗೂ 19ನೇ ಸಾಲಿನ ದಸರಾ ಮಹೋತ್ಸವದಲ್ಲಿ ಮಲ್ಟಿ ಲೆವೆಲ್ ಪಾರ್ಕಿಂಗ್ ಕಟ್ಟಡದಲ್ಲಿ ತಾತ್ಕಾಲಿಕ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಈ ಬಾರಿಯೂ ತಾತ್ಕಾಲಿಕ ಪಾರ್ಕಿಂಗ್ ವ್ಯವಸ್ಥೆ ಜಾರಿಗೊಳಿಸಲು ಮುಂದಾಗಿರುವುದು ದಸರಾ ಸಂದರ್ಭದಲ್ಲಿ ಪ್ರವಾಸಿಗರಿಗೆ ಸಹಕಾರಿಯಾಗಲಿದೆ.

**ಸ್ಥಗಿತಗೊಳಿಸದಂತೆ ಆಗ್ರಹ:** 11 ವರ್ಷದ ಹಿಂದೆ ಆರಂಭವಾಗಿರುವ ಮಲ್ಟಿ ಲೆವೆಲ್ ಪಾರ್ಕಿಂಗ್ ಕಟ್ಟಡದ ಕಾಮಗಾರಿ ಪೂರ್ಣಗೊಳಿಸುವುದಕ್ಕೆ ಇಚ್ಛಾಶಕ್ತಿ ಪ್ರದರ್ಶಿಸದೇ ಇರುವುದಕ್ಕೆ ನಾಗರಿಕರು ಸ್ಥಳೀಯ ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೇ ಪ್ರಸ್ತುತ ಆರಂಭವಾಗಿರುವ ಕಾಮಗಾರಿಯನ್ನು ಯಾವುದೇ ಕಾರಣಕ್ಕೂ ಸ್ಥಗಿತಗೊಳಿಸದಂತೆ ಆಗ್ರಹಿಸಿದ್ದಾರೆ. ಅಲ್ಲದೇ ನಿಗದಿತ ಸಮಯದೊಳಗೆ ಈಗಲಾದರೂ ಮಲ್ಟಿ ಲೆವೆಲ್ ಪಾರ್ಕಿಂಗ್ ಕಟ್ಟಡವನ್ನು ಪೂರ್ಣಗೊಳಿಸುವಂತೆ ಆಗ್ರಹಿಸಿದ್ದಾರೆ.

### ಮುಡಾ ಕಚೇರಿಯಲ್ಲಿ ತನಿಖೆ ಆರಂಭ

ಮುಡಾ ಸಭೆಗಳಲ್ಲಿ ಚರ್ಚೆಗೆ ಬಂದ ವಿಷಯಗಳು, ಕೈಗೊಂಡ ನಿರ್ಧಾರಗಳು, ಅವುಗಳ ಅನುಷ್ಠಾನ, ಕೈಗೊಂಡಿರುವ ಕಾಮಗಾರಿಗಳು, ಬಳಸಿರುವ ಅನುದಾನ ಕುರಿತಂತೆ ಪ್ರಾಧಿಕಾರದ ಇಂಜಿನಿಯರ್‌ಗಳು, ನಗರಯೋಜನಾ ವಿಭಾಗದ ಸಿಬ್ಬಂದಿ ಹಾಗೂ ಬಿಲ್ಲುಗಳಿಗೆ ಸಹಿ ಮಾಡಿರುವ ಮುಖ್ಯ ಲೆಕ್ಕಾಧಿಕಾರಿಗಳಿಂದ ಅಗತ್ಯ ಮಾಹಿತಿಗಳನ್ನು ಕಲೆ ಹಾಕಿದ ಸಮಿತಿ ಸದಸ್ಯರು, ಸಂಬಂಧಪಟ್ಟ ದಾಖಲೆಗಳ ಪ್ರತಿಗಳನ್ನು ವಶಕ್ಕೆ ಪಡೆದುಕೊಂಡರು. ಕೆಲ ಖಾಸಗಿ ಬಡಾವಣೆಗಳಿಗೆ ನಕ್ಷೆ ಅನುಮೋದನೆ, ನಿವೇಶನಗಳ ಬಿಡುಗಡೆ, ಬದಲಿ ನಿವೇಶನ ಹಂಚಿಕೆ, ತುಂಡು ಜಾಗ ಮಂಜೂರಾತಿ, ಖಾತಾ-ಕ್ರಯ-ಹಕ್ಕುಪತ್ರ ನೀಡಿರುವ ಬಗ್ಗೆಯೂ ಸುದೀರ್ಘ ಪರಿಶೀಲನೆ ನಡೆಸಿ ಮಾಹಿತಿಗಳನ್ನು ಕಲೆ ಹಾಕಿದರು. ಈ ಹಿಂದಿನ ಮುಡಾ ಅಧ್ಯಕ್ಷರು, ಕಮೀಷನರ್ ವಿರುದ್ಧ ಹಾಗೂ ಕಮೀಷನರ್ ಅಧ್ಯಕ್ಷರ ವಿರುದ್ಧ ನೀಡಿರುವ ದೂರು ಹಾಗೂ ಪರಸ್ಪರ ಆರೋಪಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ತರೆಸಿಕೊಂಡು ಸಂಜೆಯವರೆಗೂ ಪರಿಶೀಲಿಸಿದ ಮುರಳಿ ನೇತೃತ್ವದ ತನಿಖಾಧಿಕಾರಿಗಳು, ನಿಯಮಾನುಸಾರ ಕಡತಗಳ ವಿಲೇವಾರಿ ಮಾಡಲಾಗಿದೆಯೇ? ಅದಕ್ಕೆ ಪೂರಕ ಸರ್ಕಾರಿ ಆದೇಶಗಳನ್ನು ಉಲ್ಲೇಖಿಸಲಾಗಿದೆಯೇ? ಎಂಬುದರ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರಲ್ಲದೆ, ಅನುದಾನದ ದುರ್ಬಳಕೆ, ಅಕ್ರಮ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಿದ್ದಾರೆಂಬ ಕೆಲ ಆರ್‌ಟಿಐ ಕಾರ್ಯಕರ್ತರ ದೂರುಗಳ ಬಗ್ಗೆಯೂ ತೀವ್ರ ಪರಿಶೀಲನೆ ನಡೆಸಿದರು. ಬಿಲ್ಲುಗಳಿಗೆ ಹಣ ಪಾವತಿ ಮಾಡಿರುವ ಬಗ್ಗೆ ಹಾಗೂ ಮುಡಾ ಬ್ಯಾಂಕ್ ಖಾತೆಗೆ ಹಣ ಸಂದಾಯವಾಗಿರುವ ಕುರಿತಂತೆ ಮುಖ್ಯ ಲೆಕ್ಕಾಧಿಕಾರಿಗಳಿಂದ ಮಾಹಿತಿ ತರಿಸಿಕೊಂಡರು.

ಮುಡಾ ನಗರ ಯೋಜಕ ಸದಸ್ಯ ಶೇಷ ಅವರಿಂದ ನಕ್ಷೆ ಅನುಮೋದನೆ ಕುರಿತಂತೆ ಅಗತ್ಯ ಮಾಹಿತಿ ಪಡೆದುಕೊಂಡ ಅವರು, ಎಲ್ಲಾ ಆರು ವಲಯಗಳ ವಿಶೇಷ ತಹಸೀಲ್ದಾರ್‌ಗಳು, ವಲಯಾಧಿಕಾರಿಗಳು ಹಾಗೂ ಕೆಲ ವಿಭಾಗಗಳ ಕಚೇರಿ ಅಧೀಕ್ಷಕರುಗಳನ್ನು ಕರೆಸಿ ದೂರುಗಳ ಸಂಬಂಧ ಹೇಳಿಕೆಗಳನ್ನು ಪಡೆದುಕೊಂಡ ತನಿಖಾ ತಂಡದ ಅಧಿಕಾರಿಗಳು ಇಂದು ಮೈಸೂರಿನಲ್ಲೇ ವಾಸ್ತವ್ಯ ಹೂಡಿ ನಾಳೆ (ಗುರುವಾರ)ಯೂ ಪ್ರಾಧಿಕಾರದ ಸಭಾಂಗಣದಲ್ಲಿ ತನಿಖೆಯನ್ನು ಮುಂದುವರೆಸಲಿದ್ದಾರೆ. ಇಂದು ಮಧ್ಯಾಹ್ನ ಕಛೇರಿಗೆ ಆಗಮಿಸಿದ ತಂಡದ ಸದಸ್ಯರನ್ನು ಮುಡಾ ಕಮೀಷನರ್ ಜಿ.ಟಿ. ದಿನೇಶ್‌ಕುಮಾರ್ ಅವರು ಬರಮಾಡಿಕೊಂಡರು.

ಪ್ರಾಧಿಕಾರದ ಸಭೆಯಲ್ಲಿ ಕಾಯ್ದೆ, ನಿಯಮ ಹಾಗೂ ವಲಯ ನಿಯಮಗಳಿಗೆ ವಿರುದ್ಧವಾಗಿ ವಿಷಯಗಳನ್ನು ಮಂಡಿಸಿ ನಿರ್ಣಯ ಕೈಗೊಂಡಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದು, ಮುಡಾ ಅಧ್ಯಕ್ಷರ ವಿರುದ್ಧ ಆಯುಕ್ತರು ಹಾಗೂ ಆಯುಕ್ತರ ವಿರುದ್ಧ ಅಧ್ಯಕ್ಷರು ಪರಸ್ಪರ ಆರೋಪಿಸಿ ದೂರುಗಳನ್ನು ಸಲ್ಲಿಸಿದ್ದ ಹಿನ್ನೆಲೆಯಲ್ಲಿ ತನಿಖೆ ನಡೆಸಲು ಸರ್ಕಾರವು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಹೆಚ್ಚುವರಿ ನಿರ್ದೇಶಕ ಮುರಳಿ ನೇತೃತ್ವದಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಿತ್ತು. ಅದರಂತೆ ಇಂದು ತನಿಖೆ ಆರಂಭಿಸಿರುವ ಸಮಿತಿ ಸದಸ್ಯರು ಸಂಪೂರ್ಣ ಮಾಹಿತಿಯೊಂದಿಗೆ ಸರ್ಕಾರಕ್ಕೆ ತನಿಖಾ ವರದಿಯನ್ನು ಸಲ್ಲಿಸಲಿದ್ದಾರೆ.

ಮೈಸೂರು ಮಿತ್ರ ಗುರುವಾರ 18 ಆಗಸ್ಟ್ 2022

# ಜಾಗೃತ ಪ್ರಜೆಗಳಿಂದ ರಾಮರಾಜ್ಯ ಕನಸು ನನಸಾಗಲು ಸಾಧ್ಯ

ಕೆ.ಆರ್.ನಗರ, ಆ.17– ಜಾಗೃತ ಪ್ರಜೆಗಳು ರಾಷ್ಟ್ರದ ಹೆಮ್ಮೆಯ ಆಸ್ತಿಯಾಗಿದ್ದು, ಅಂತಹವರ ಪಡೆ ದೇಶದ ಉದ್ದಗಲಕ್ಕೂ ತಲೆ ಎತ್ತಿದರೆ ನಮ್ಮ ದಶಕ ಗಳ ಕನಸಿನ ರಾಮರಾಜ್ಯ ನನಸಾಗುವ ದಿನಗಳು ದೂರವಿಲ್ಲ ಎಂದು ಶಾಸಕ ಸಾ.ರಾ.ಮಹೇಶ್ ಅಭಿಪ್ರಾಯಪಟ್ಟರು.

ಪಟ್ಟಣದ ಡಾ.ರಾಜ್‌ಕುಮಾರ್ ಸಾಂಸ್ಕೃತಿಕ ಭವನದಲ್ಲಿ (ಪುರಸಭೆ ಬಯಲು ರಂಗ ಮಂದಿರ)ದ ಆವರಣದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ ಹಾಗೂ ಪುರಸಭೆ ಸಂಯುಕ್ತಾಶ್ರಯದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಾರತ ಸ್ವಾತಂತ್ರ್ಯ ಜಗತ್ತಿನ ಇತರ ಸರ್ವಾಧಿಕಾರ ಮುಕ್ತವಾದ ರಾಷ್ಟ್ರಗಳ ಜೊತೆ ನಿಕಟವಾದ ಸಂಬಂಧವನ್ನು ಹೊಂದಿದೆ. ತೃತೀಯ ಜಗತ್ತಿನ ರಾಷ್ಟ್ರಗಳ ನಾಯಕ ರಾಷ್ಟ್ರವಾಗಿ ಭಾರತ ಮುನ್ನಡೆಯುತ್ತಿದೆ. ಸ್ವಾತಂತ್ರ್ಯವೆಂಬುದು ಅಧಿಕಾರದ ಹಸ್ತಾಂತರ ಎಂದು ಬಹಳಷ್ಟು ಯುವಕರು ಭಾವಿಸುವುದು ಉಂಟು. ಕ್ರಾಂತಿಗಳ ತ್ಯಾಗದ ವ್ಯಾಪ್ತಿಯಷ್ಟು ಸ್ವಾತಂತ್ರ್ಯ ಗಳಿಕೆಯಲ್ಲಿ ಕಳೆದುಹೋದ ಬಲಿದಾನಗಳ ಸಂಖ್ಯೆಯಿದೆ. ಇಂತಹ ಹಲವಾರು ಅಂಶಗಳ ಕುರಿತು ಆಂತರಿಕ ವಿಮರ್ಶೆ ಮಾಡಿಕೊಳ್ಳದೆ ಹೋದರೆ ನೈಜ ಸ್ವಾತಂತ್ರ್ಯದ ಸಂಕಲ್ಪ ತಿಳಿಯುವುದೇ ಇಲ್ಲ ಎಂದರು. ಕಾರ್ಯಕ್ರಮಕ್ಕೂ ಮೊದಲು ಪಟ್ಟಣದ ಕೃಷ್ಣರಾಜೇಂದ್ರ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಮೈದಾನದಿಂದ ಡಾ.ರಾಜ್‌ಕುಮಾರ್ ಸಾಂಸ್ಕೃತಿಕ ಭವನಗಳವರೆಗೆ ಶಾಲಾ-ಕಾಲೇಜು ವಿದ್ಯಾರ್ಥಿಗಳ ಪಥಸಂಚಲನ, ತೆರೆದ ವಾಹನಗಳಲ್ಲಿ ಗಣ್ಯ ಮಹನೀಯರ ಭಾವಚಿತ್ರ ಮತ್ತು ವಿವಿಧ ಸ್ತಬ್ಧಚಿತ್ರಗಳನ್ನು ಮೆರವಣಿಗೆ ಮಾಡಲಾಯಿತು.



ಇದೇ ವೇಳೆ ವಿವಿಧ ಕ್ಷೇತ್ರಗಳ ಸಾಧಕರನ್ನು ತಾಲೂಕು ಆಡಳಿತದಿಂದ ಗೌರವಿಸಲಾಯಿತು. ತಹಸೀಲ್ದಾರ್ ಎಸ್.ಸಂತೋಷ್ ಧ್ವಜಾರೋಹಣ ನೆರವೇರಿಸಿ ಸ್ವಾತಂತ್ರ್ಯ ದಿನಾಚರಣೆ ಕುರಿತು ಮಾತನಾಡಿದರು. ಪಥಸಂಚಲನದಲ್ಲಿ ಭಾಗವಹಿಸಿದ್ದ ಶಾಲೆಗಳು ಮತ್ತು ಸ್ತಬ್ಧಚಿತ್ರಗಳಿಗೆ ಬಹುಮಾನಗಳನ್ನು ನೀಡಲಾಯಿತು.

ಹಿರಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಕಸ್ತೂರಬಾ ಗಾಂಧಿ ಬಾಲಕಿಯರ ಶಾಲೆ ಪ್ರಥಮ, ಲಯನ್ಸ್ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ದ್ವಿತೀಯ ಹಾಗೂ ಸಂತ ಜೋಸೆಫರ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ತೃತೀಯ ಸ್ಥಾನ ಪಡೆದರೆ, ಪ್ರೌಢಶಾಲಾ ವಿಭಾಗದಲ್ಲಿ ಆದರ್ಶ ವಿದ್ಯಾಲಯ ಪ್ರಥಮ, ಲಯನ್ಸ್ ಪ್ರೌಢ ಶಾಲೆ ದ್ವಿತೀಯ ಹಾಗೂ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ(ಬನ್ನಿಮಂಟಪ ಬಡಾವಣೆ) ತೃತೀಯ ಸ್ಥಾನ ಪಡೆದವು. ಸ್ತಬ್ಧಚಿತ್ರ ವಿಭಾಗದಲ್ಲಿ ಲೋಕೋಪಯೋಗಿ ಇಲಾಖೆ ಪ್ರಥಮ, ಅರಣ್ಯ ಇಲಾಖೆ ದ್ವಿತೀಯ ಮತ್ತು ಕಂದಾಯ ಇಲಾಖೆ ತೃತೀಯ ಸ್ಥಾನ ಪಡೆದುಕೊಂಡವು.

ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಜೈಲರ್ ಧರಣೇಶ್, ಪತ್ರಕರ್ತ ಎ.ಚೈತನ್ಯ, ಸಮಾಜ ಸೇವಕ ವೈ.ಆರ್.ಶಿವಕುಮಾರ್, ನಿವೃತ್ತ ಸೈನಿಕ ಪಾಪೇಗೌಡ, ಡಾ.ಶಂಕರ್, ಅರುಣ ಬಿ.ನರಗುಂದ, ರಾಜೀವ್ ಅವರನ್ನು ಸನ್ಮಾನಿಸಲಾಯಿತು.

ಪುರಸಭೆ ಅಧ್ಯಕ್ಷ ಕೋಳಿಪ್ರಕಾಶ್, ಸದಸ್ಯರಾದ ಸರೋಜ ಮಹದೇವ್, ಕೆ.ಎಲ್.ಜಗದೀಶ್, ಉಮೇಶ್, ಬಿ.ಎಸ್.ತೋಂಟದಾರ್ಯ, ವಿಧಾನಪರಿಷತ್ತಿನ ಮಾಜಿ ಸದಸ್ಯ ಟಿ.ಕೆ.ಚಿನ್ನಸ್ವಾಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ.ಅರುಣ್‌ಕುಮಾರ್, ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಹೆಚ್.ಕೆ.ಸತೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎನ್.ಗಾಯತ್ರಿ, ದೈಹಿಕ ಶಿಕ್ಷಣ ಪರಿವೀಕ್ಷಕ ಉಮೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಕೆ.ಆರ್. ಮಹೇಂದ್ರಪ್ಪ, ಜಲಸಂಪನ್ಮೂಲ ಇಲಾಖೆ ಕಾರ್ಯಪಾಲಕ ಅಭಿಯಂತರ ಜಿ.ಜಿ.ಈರಣ್ಣ, ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ, ಸಿಆರ್‌ಪಿ ಈಶ್ವರ್, ದೈಹಿಕ ಶಿಕ್ಷಣ ಶಿಕ್ಷಕ ಬೀರೇಶ್, ಮುಖಂಡರಾದ ಹನಸೋಗೆ ನಾಗರಾಜು, ಶ್ರೀನಿವಾಸಪ್ರಸಾದ್ ಹಾಜರಿದ್ದರು.

## ಬಡವರ ಹಿತಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆ

ಹುಲ್ಲಹಳ್ಳಿ, ಆ.17– ಗ್ರಾಮೀಣ ಬಡ ಜನರ ಹಿತ ಕಾಯಲು ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆ ಮುಂದಾಗಿದೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಮಂಜುನಾಥ್ ತಿಳಿಸಿದರು.

ಗ್ರಾಮದ ಜಯಮ್ಮ ಕಲ್ಯಾಣ ಮಂಟಪದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ 2001ನೇ ಸಂಘ ಹಾಗೂ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು, ಗ್ರಾಮೀಣ ಬಡ ಜನರಿಗಾಗಿ ಮಹಿಳಾ ಸಂಘ ಸ್ಥಾಪಿಸಿ ಸಾಲ ನೀಡುತ್ತಿದ್ದಾರೆ. ಇದನ್ನು ಪ್ರತಿಯೊಬ್ಬರು ಸದುಪಯೋಗಪಡಿಸಿಕೊಳ್ಳಬೇಕು. ಸಾಲ ಪಡೆದ ಮಹಿಳೆಯರು ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡಿದರೆ ಸಂಘ ಉತ್ತಮವಾಗಿ ಬೆಳೆಯುತ್ತದೆ ಎಂದರು.

## ಕಾಯಕದಲ್ಲಿಯೇ ದೇವರನ್ನು ಕಂಡ ಮಹಾಶರಣರು ನುಲಿಯ ಚಂದಯ್ಯ

ತಿ.ನರಸೀಪುರ, ಆ.17– ಹನ್ನೆರಡನೇ ಶತಮಾನದಲ್ಲಿ ಕಾಯಕಕ್ಕೆ ಒತ್ತು ನೀಡುವ ಮೂಲಕ ಕೊರಚ, ಕೊರವ ಸಮುದಾಯದ ಸಾಂಸ್ಕೃತಿಕ ಪ್ರತಿನಿಧಿಯಾಗಿ ಕಾಯಕದ ಮಹತ್ವವನ್ನು ಸಾರಿದ ನುಲಿಯ ಚಂದಯ್ಯನವರು ಕಾಯಕದಲ್ಲಿಯೇ ದೇವರನ್ನು ಕಂಡ ಮಹಾಶರಣರು ಎಂದು ದಾವಣಗೆರೆಯ ನಿವೃತ್ತ ಜಿಲ್ಲಾಧಿಕಾರಿ ಎಸ್.ಟಿ.ಅಂಜನ್ ಕುಮಾರ್ ಹೇಳಿದರು.



ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಸ್ಥಳೀಯ ಅಖಿಲ ಕರ್ನಾಟಕ ಕುಳುವ ಮಹಾಸಂಘದ ಆಶ್ರಯದಲ್ಲಿ ಪಟ್ಟಣದ ತಾಪಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ಕುಳುವ ನುಲಿಯ ಚಂದಯ್ಯ ಶರಣರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಿ ಅವರು ಮಾತನಾಡಿದರು.

ಕಲ್ಯಾಣ ನಾಡಿನ ಶ್ರೇಷ್ಠ ಶರಣ, ಅನುಭಾವಿ, ವಚನಕಾರ ನುಲಿಯ ಚಂದಯ್ಯನವರು ಕಾಯಕ ನಿಷ್ಠೆ ಶಿವನಿಗೆ ಅರ್ಪಿತವಾಗುತ್ತದೆ ಎಂದು ಅಚಲವಾಗಿ ನಂಬಿ ಅದರಂತೆ ನಡೆದರು. ಪೂಜೆ, ಪುನಸ್ಕಾರಗಳಿಗಿಂತ ಕಾಯಕ ನಿಷ್ಠೆಯೇ ಮೇಲು ಎಂದು ಸಾರಿದವರು. ಅಂತಹ ಮಹಾನ್ ಶರಣರ ಮೌಲ್ಯಗಳನ್ನು ಜೀವನದಲ್ಲಿ ಎಲ್ಲರೂ ಅಳವಡಿಸಿಕೊಳ್ಳಬೇಕಿದೆ ಎಂದರು.

ಕುಳುವ ಮಹಾಸಂಘದ ರಾಜ್ಯ ಸಮಿತಿಯ ಜಂಟಿ ಕಾರ್ಯದರ್ಶಿ ಕಿರಣ್ ಕುಮಾರ್ ಮಾತನಾಡಿ, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಹಿಂಭಾಗದಲ್ಲಿ ಕಳೆದ 25 ವರ್ಷಗಳಿಂದ ಕೊರಚ ಸಮುದಾಯದವರು ನೆಲೆ ಇಲ್ಲದೇ ಪ್ರಾಣಿಗಳಿಗಿಂತ ಕಡೆಯಾಗಿ ಬದುಕುತ್ತಿದ್ದಾರೆ ಎಂದರು. ತಾಲೂಕಿನಲ್ಲಿ ಕೊರಚ ಸಮುದಾಯದವರು 3 ರಿಂದ 4 ಸಾವಿರ ಸಂಖ್ಯೆಯಲ್ಲಿದ್ದಾರೆ.ಆದರೆ ತಾಲೂಕು ಆಡಳಿತ ಸರಿಯಾಗಿ ಪ್ರಚಾರ ಮಾಡಿಲ್ಲದ ಪರಿಣಾಮ ಹೆಚ್ಚಿನ ಜನರಿಗೆ ಕಾರ್ಯಕ್ರಮದ ಬಗ್ಗೆ ತಿಳಿದಿಲ್ಲ.ಮುಂದಿನ ವರ್ಷದಿಂದ ಸಮುದಾಯವನ್ನು ನಿರ್ಲಕ್ಷ್ಯ ಮಾಡದೇ ಹೆಚ್ಚಿನ ಪ್ರಚಾರದೊಂದಿಗೆ ಅಂಬೇಡ್ಕರ್ ಭವನದಲ್ಲಿ ಕಾರ್ಯಕ್ರಮ ನಡೆಸುವಂತೆ ಅವರು ತಾಲೂಕು ಆಡಳಿತಕ್ಕೆ ಮನವಿ ಮಾಡಿದರು. ಭೈರಾಪುರ ಗ್ರಾ.ಪಂ. ವ್ಯಾಪ್ತಿಯ ಹೆಳವರಹುಂಡಿ ಸಮೀಪವಿರುವ ಜೇಡಿಕಟ್ಟೆ ಜಾಗದಲ್ಲಿ 2.26 ಗುಂಟೆ ಪೈಕಿ 1 ಎಕರೆ ಜಾಗವನ್ನು ಸಮುದಾಯದವರಿಗೆ 2017ರಲ್ಲಿ ನೀಡಿ ಅಧಿಸೂಚನೆ ಹೊರಡಿಸಲಾಗಿದೆಯಾದರೂ ಅದನ್ನು ಸಮುದಾಯದವರಿಗೆ ಹಸ್ತಾಂತರಿಸಲು ಕ್ರಮ ಕೈಗೊಂಡಿಲ್ಲ. ಹಾಗಾಗಿ ಕೂಡಲೇ ಸಂಬಂಧಿಸಿದ ಜಾಗವನ್ನು ಹಿಂದುಳಿದ ಕೊರಚ ಸಮುದಾಯಕ್ಕೆ ನೀಡಿ ಇತರರಂತೆ ಅವರ ಬದುಕು ಹಸನಾಗಲು ಕ್ರಮ ವಹಿಸಬೇಕೆಂದು ಅವರು ಮನವಿ ಮಾಡಿದರು.

ತಹಸೀಲ್ದಾರ್ ಸಿ.ಜೆ.ಗೀತಾ ಕಾರ್ಯಕ್ರಮದಲ್ಲಿ ಮಾತನಾಡಿದರು. ತಾಪಂ ಇಓ ಕೃಷ್ಣ, ಕುಳುವ ಮಹಾಸಂಘದ ಅಧ್ಯಕ್ಷ ಎನ್.ರವಿಕುಮಾರ್, ಗೌರವಾಧ್ಯಕ್ಷ ರಾಜಣ್ಣ, ಉಪಾಧ್ಯಕ್ಷ ದೊರೆಸ್ವಾಮಿ, ಕಾರ್ಯದರ್ಶಿ ದ ಸಿ.ರಾಜು(ದಾವಣಗೆರೆ) ಸಮುದಾಯದ ಹಿರಿಯ ನಾಯಕ ಗೋಪಾಲ್, ಸಂಘದ ಉಪಾಧ್ಯಕ್ಷೆ ನಾಗಮ್ಮ, ಮಹೇಶ್, ನಾಗರಾಜು, ಮಹೇಂದ್ರ ಸೇರಿದಂತೆ ನೂರಾರು ಮಂದಿ ಸಮುದಾಯದ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಹುಣಸೂರು ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಹುಣಸೂರು, ಆ.17– ಹುಣಸೂರು ನಗರಸಭೆ ಅಧ್ಯಕ್ಷರಾಗಿ ಗೀತಾ ನಿಂಗರಾಜು ಹಾಗೂ ಉಪಾಧ್ಯಕ್ಷರಾಗಿ ಆಶಾ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಪ್ಪಂದದಂತೆ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಗೀತಾ ನಿಂಗರಾಜು ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಆಶಾ ಅವರುಗಳು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಗಳು ಅವಿರೋಧ ಆಯ್ಕೆ ಎಂದು ಘೋಷಿಸಿದರು.

ನೂತನವಾಗಿ ಆಯ್ಕೆಯಾದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಶಾಸಕ ಹೆಚ್.ಪಿ. ಮಂಜುನಾಥ್ ಅಭಿನಂದಿಸಿ ಮಾತನಾಡಿ, ಕೊಟ್ಟ ಮಾತಿನಂತೆ ಇವರಿಬ್ಬರನ್ನು ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ನಮ್ಮ ಪಕ್ಷ ಆಯ್ಕೆ ಮಾಡಿದೆ. ಇನ್ನು ಮುಂದೆ ಪಕ್ಷದ ಸಿದ್ಧಾಂತಕ್ಕೆ ಬದ್ಧರಾಗಿ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು.



ಈ ಸಂದರ್ಭದಲ್ಲಿ ನಗರಸಭೆ ಮಾಜಿ ಅಧ್ಯಕ್ಷ ಸಮೀನಾ ಪರ್ವಿನ್, ಸೌರಭ ಸಿದ್ದರಾಜು, ಕಾಂಗ್ರೆಸ್ ಅಧ್ಯಕ್ಷ ಟಿ.ವಿ.ನಾರಾಯಣ್, ದೇವರಾಜ್, ಕಲ್ಕುಣಿಕೆ ರಮೇಶ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ಕಾರ್ಯಕರ್ತರ ಸಂಭ್ರಮ:** ಗೀತಾ ನಿಂಗರಾಜು ಮತ್ತು ಆಶಾ ಅವರ ಅವಿರೋಧ ಆಯ್ಕೆ ಘೋಷಿಸುತ್ತಿದ್ದಂತೆ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು. ನಂತರ ನಗರಸಭೆಯಿಂದ ಕಾಂಗ್ರೆಸ್ ಕಚೇರಿಯವರೆಗೆ ಮೆರವಣಿಗೆ ನಡೆಸಿದರು.

## ಹುಲ್ಲಹಳ್ಳಿ ಬಿಜೆಪಿ ಶಕ್ತಿ ಕೇಂದ್ರದಿಂದ ಬೈಕ್ ರ‍್ಯಾಲಿ

ಮಲ್ಕುಂಡಿ, ಆ.17– ಪ್ರಧಾನಿ ಮೋದಿ ಕರೆ ನೀಡಿರುವ 'ಹರ್ ಘರ್ ತಿರಂಗಾ' ಅಭಿಯಾನದಡಿ ಹುಲ್ಲಹಳ್ಳಿ ಬಿಜೆಪಿ ಶಕ್ತಿ ಕೇಂದ್ರದಿಂದ ಬೈಕ್ ರ‍್ಯಾಲಿ ನಡೆಯಿತು.

75ನೇ ಸ್ವಾತ್ರಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ಹುಲ್ಲಹಳ್ಳಿಯಲ್ಲಿ ಆಯೋಜಿಸಿದ್ದ ಬೈಕ್ ರ‍್ಯಾಲಿಗೆ ಹುಲ್ಲಹಳ್ಳಿ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ ಚಾಲನೆ ನೀಡಿದರು. ಹುಲ್ಲಹಳ್ಳಿಯಿಂದ ಹೊರಟ ಬೈಕ್ ರ‍್ಯಾಲಿ ಶಕ್ತಿ ಕೇಂದ್ರ ಗ್ರಾಮಗಳ ವ್ಯಾಪ್ತಿಯಲ್ಲಿ ಸಾಗಿತು. ಈ ವೇಳೆ ರಾಷ್ಟ್ರಧ್ವಜ ಹಿಡಿದ ಬಿಜೆಪಿ ಕಾರ್ಯಕರ್ತರು ದೇಶದ ಪರ ಘೋಷಣೆ ಕೂಗಿ ಜನರಲ್ಲಿ ರಾಷ್ಟ್ರೀಯತೆಯ ಅರಿವು ಮೂಡಿಸಿದರು.

ಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ ಮಾತನಾಡಿ, ಪ್ರಧಾನಿ ಮೋದಿ ಅವರ ಆದೇಶದ ಮೇರೆಗೆ ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವದ ಅಂಗವಾಗಿ ದೇಶದ ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ ಹಾರಿಸುವ ಅಭಿಯಾನ ಹಮ್ಮಿಕೊಳ್ಳಲಾಗಿತ್ತು ಎಂದರು. ಈ ವೇಳೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹೆಚ್.ಎಂ.ಕೆಂಡಗಣ್ಣಪ್ಪ, ತಾಪಂ ಮಾಜಿ ಸದಸ್ಯರಾದ ಎಸ್.ಬಸವರಾಜ್, ಶಿವಣ್ಣನಾಯ್ಕ, ನಲ್ಲಿತಾಳಪುರ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಹುಲ್ಲಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್, ಗ್ರಾಪಂ ಸದಸ್ಯರಾದ ನಾಗೇಂದ್ರ ಮಲ್ಲಿಕಾರ್ಜುನ, ಬಸಪ್ಪ ಪುಟ್ಟಸ್ವಾಮಿ ಇನ್ನಿತರರಿದ್ದರು.





75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಪಿರಿಯಾಪಟ್ಟಣ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ಮಾಜಿ ಶಾಸಕ ಕೆ.ವೆಂಕಟೇಶ್ ನೇತೃತ್ವದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪಾದಯಾತ್ರೆ ನಡೆಸಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೆಹಮತ್ ಜಾನ್ ಬಾಬು, ಡಿ.ಟಿ.ಸ್ವಾಮಿ ಸೇರಿದಂತೆ ಸಾವಿರಾರು ಕಾರ್ಯಕರ್ತರು ಕೈಯಲ್ಲಿ ರಾಷ್ಟ್ರಧ್ವಜ ಹಿಡಿದು ದೇಶಪ್ರೇಮ ಮೆರೆದರು. ಪಾದಯಾತ್ರೆಗೆ ಹಲವು ಜಾನಪದ ಕಲಾ ತಂಡಗಳು ಮೆರಗು ನೀಡಿದ್ದವು.



ಮೈಸೂರು ತಾಲೂಕು ಕಡಕೊಳ ಗ್ರಾಮದ ಶ್ರೀ ಗುರು ವಿದ್ಯಾ ವಿಕಾಸ ಪ್ರೌಢಶಾಲೆಯಲ್ಲಿ 75ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಯೂನಿಯನ್ ರೈತ ಸಹಕಾರ ಬ್ಯಾಂಕ್‌ನ ಉಪಾಧ್ಯಕ್ಷ ಕಡಕೊಳ ಕುಮಾರಸ್ವಾಮಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಕಡಕೊಳ ಗ್ರಾಪಂ ಮಾಜಿ ಅಧ್ಯಕ್ಷ ಜೆ. ರಮೇಶ್, ಯುವ ಮುಖಂಡ ಶಿವಕುಮಾರ್, ಶಾಲೆಯ ಮುಖ್ಯೋಪಾಧ್ಯಾಯ ಪ್ರಭುಸ್ವಾಮಿ, ಶಾಲೆಯ ಶಿಕ್ಷಕ ವರ್ಗದವರು ಮತ್ತು ಪೋಷಕರು ಉಪಸ್ಥಿತರಿದ್ದರು.



75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಹೆಚ್.ಡಿ.ಕೋಟೆ ತಾಲೂಕಿನ ಸೊಳ್ಳೆಪುರ ಹಾಡಿ, ಬಸವನಗಿರಿ ಹಾಡಿಗಳಿಗೆ ಭೇಟಿ ನೀಡಿದ ಬಿಜೆಪಿ ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ ಅಲ್ಲಿನ ನಿವಾಸಿಗಳಿಗೆ ರಾಷ್ಟ್ರಧ್ವಜ ನೀಡಿ, ಸಿಹಿ ಹಂಚಿದರು. ಈ ವೇಳೆ ಗ್ರಾಪಂ ಮಾಜಿ ಸದಸ್ಯ ಸ್ವಾಮಿ, ನ್ಯಾಯಬೆಲೆ ಅಂಗಡಿ ಕಾರ್ಯದರ್ಶಿ ನಟರಾಜು, ಶಿಕ್ಷಕ ಸದಾನಂದ, ಎಸ್‌ಸಿ ಮೋರ್ಚಾ ರಾಜು, ಮಾರ, ಹನುಮಂತ ನಾಯಕ, ಶಿವಕುಮಾರ, ಜಯರಾಂ, ಬಸಮ್ಮ, ನಿಂಗಮಣಿ, ಮಹೇಶ, ಗೋಪಾಲಯ್ಯ, ಶಿವು, ಕೃಷ್ಣಯ್ಯ, ವಿರಾಜ್ ನಾಯ್ಕ, ಸೋಮಶೇಖರ್, ಶ್ರೀರಾಮುಲು, ರಾಜೇಶ್ ಇನ್ನಿತರರಿದ್ದರು.

## ಸಾಲಿಗ್ರಾಮದಲ್ಲಿ ಅಮೃತ ಸ್ವಾತಂತ್ರ್ಯೋತ್ಸವ ಆಚರಣೆ

ಸಾಲಿಗ್ರಾಮ, ಆ.17 (ಜ್ಯೋತಿ)– ಸ್ವಾತಂತ್ರ್ಯ ತಂದುಕೊಟ್ಟ ತ್ಯಾಗಿಗಳನ್ನು ಆಗಸ್ಟ್ 15 ರಂದು ಮಾತ್ರ ನೆನಪು ಮಾಡಿಕೊಳ್ಳದೆ ಮುಂದಿನ ಪೀಳಿಗೆಗೆ ಮನವರಿಕೆ ಮಾಡುವ ಮೂಲಕ ಮಹನೀಯರ ಸ್ಮರಣೆ ಮಾಡುವಂತೆ ಎಲ್ಲರೂ ಕ್ರಮ ವಹಿಸಬೇಕು ಎಂದು ಶಿಕ್ಷಣ ತಜ್ಞ ಎಸ್.ಆರ್.ರಾಮೇಗೌಡ ಮನವಿ ಮಾಡಿದರು.



ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರವೀಂದ್ರನಾಥ ಠಾಗೋರ್ ಸಭಾಂಗಣದಲ್ಲಿ ಆಯೋಜಿಸಿದ್ದ ಅಮೃತ ಸ್ವಾತಂತ್ರ್ಯೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನಿವೃತ್ತ ಯೋಧ ಚಿಕ್ಕ ನಾಯಕನಹಳ್ಳಿ ಪಾಪೇಗೌಡ ಅವರನ್ನು ಸನ್ಮಾನಿಸಲಾಯಿತು.

ಸಾಲಿಗ್ರಾಮ ತಾಲೂಕು ಆಡಳಿತವು ನಿವೃತ್ತ ಸೈನಿಕ ಅಂಕನಹಳ್ಳಿ ಹರೀಶ್, ಪತ್ರಕರ್ತ ಎಸ್.ಬಿ. ಹರೀಶ್, ಲಾಲೂ ಸಾಬ್, ರತ್ನಮ್ಮ, ಎಸ್.ಎನ್.ರಾಮಯ್ಯ, ಎಸ್‌ಎಸ್‌ಎಲ್‌ಸಿಯಲ್ಲಿ 625 ಅಂಕ ಗಳಿಸಿದ ಮಿರ್ಲೆ ಗ್ರಾಮದ ಸೃಷ್ಟಿ ಎಂ ಆರ್ ಅವರನ್ನು ಗೌರವಿಸಲಾಯಿತು.



ನಂಜನಗೂಡು ತಾಲೂಕಿನ ನಗರ್ಲೆ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಧ್ವಜಾರೋಹಣ ನೆರವೇರಿಸಲಾಯಿತು. ಇದೇ ವೇಳೆ ಪಿಎಸಿಎಸ್ ಕಾರ್ಯದರ್ಶಿ ಎನ್.ಬಿ. ಮಹೇಂದ್ರ ಮಕ್ಕಳಿಗೆ ಸಮವಸ್ತ್ರ ವಿತರಿಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ಸುಮನ್‌ರಾಜ್, ಸದಸ್ಯರಾದ ಎನ್.ಇ.ಪ್ರಮೋದ್ ಕುಮಾರ್, ಧರ್ಮೇಂದ್ರ, ಸಂಧ್ಯಾ, ಅಂಗನವಾಡಿ ಶಿಕ್ಷಕಿಯರು ಹಾಗೂ ಮುಖಂಡರು, ಮಕ್ಕಳು ಹಾಜರಿದ್ದರು.



ಹೆಚ್.ಡಿ.ಕೋಟೆ ಸ್ಟೇಡಿಯಂ ಮುಖ್ಯದ್ವಾರ, ರಂಗಮಂದಿರ ಹಾಗೂ ಸಂತೆ ಮೈದಾನದಲ್ಲಿ ನಿರ್ಮಾಣಗೊಂಡಿರುವ ತಂತಿಬೇಲಿ ಕಾಮಗಾರಿಗಳನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು. ನಿರ್ಮಿತಿ ಕೇಂದ್ರದ ಅಧಿಕಾರಿಗಳಾದ ಸುಪ್ರೀತ್, ವಿನೋದ್‌ರಾಜ್, ಪುರಸಭಾ ಸದಸ್ಯೆ ಸುಹಾಸಿನಿ, ನಾಗಮ್ಮ, ಮಧು, ಆಸಿಫ್ ಇಕ್ಬಾಲ್, ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್ ಅವರುಗಳು ಉಪಸ್ಥಿತರಿದ್ದರು.

## ರಾತ್ರೋರಾತ್ರಿ ಪುರಸಭೆಯ ಆಶ್ರಯ ಸಮಿತಿ ಸಭೆ ರದ್ದು

### ಶಾಸಕ ಯತೀಂದ್ರ ಸಿದ್ದರಾಮಯ್ಯ, ಪುರಸಭಾ ಅಧಿಕಾರಿಗಳ ವಿರುದ್ಧ ಹರಿಹಾಯ್ದ ನಾಮ ನಿರ್ದೇಶಿತ ಸದಸ್ಯ ಸಿ. ರಮೇಶ್

ತಿ.ನರಸೀಪುರ, ಆ.17– ಎಂಟು ತಿಂಗಳ ನಂತರ ಕರೆಯಲಾಗಿದ್ದ ಪುರಸಭೆಯ ಆಶ್ರಯ ಸಮಿತಿ ಸಭೆಯನ್ನು ರಾತ್ರೋರಾತ್ರಿ ದಿಡೀರ್ ಅಂತ ರದ್ದುಗೊಳಿಸಿದ ವರುಣಾ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ವಿಧಾನ ಪರಿಷತ್ ನ ಮಾಜಿ ಸದಸ್ಯರೂ ಆದ ಸಮಿತಿಯ ಸರ್ಕಾರದ ನಾಮ ನಿರ್ದೇಶಿತ ಸದಸ್ಯ ಸಿ.ರಮೇಶ್ ಬುಧವಾರ ಪುರಸಭೆ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.



ವರುಣಾ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಪುರಸಭೆಯಲ್ಲಿ ಇಂದು ನಡೆಯಬೇಕಿದ್ದ ಆಶ್ರಯ ಸಮಿತಿ ಸಭೆಯನ್ನು ಮಂಗಳವಾರ ರಾತ್ರಿ ರದ್ದುಗೊಳಿಸಿದ ಹಿನ್ನೆಲೆಯಲ್ಲಿ ಮೂವರು ಸದಸ್ಯರೊಂದಿಗೆ ಪುರಸಭೆ ಸಭಾಂಗಣಕ್ಕೆ ಆಗಮಿಸಿದ ಸಿ.ರಮೇಶ್ ಅವರು ಯಾವುದೇ ಮುನ್ಸೂಚನೆ ಇಲ್ಲದೆ ಕೇವಲ ಅರ್ಧ ದಿನದಲ್ಲೇ ಸಭೆಯನ್ನು ರದ್ದುಗೊಳಿಸಿದ ಶಾಸಕ ಹಾಗೂ ಪುರಸಭಾ ಅಧಿಕಾರಿಗಳ ಸರ್ವಾಧಿಕಾರಿ ಧೋರಣೆಯ ವಿರುದ್ಧ ಕಿಡಿಕಾರಿದರು. ಅಲ್ಲದೆ ಕಚೇರಿಗೆ ತಡವಾಗಿ ಆಗಮಿಸಿದ ಮುಖ್ಯಾಧಿಕಾರಿ ಹೆಚ್.ಆರ್. ಬಸವರಾಜು ಅವರನ್ನು ತರಾಟೆಗೆ ತೆಗೆದುಕೊಂಡರು.

ಮಾಜಿ ಸಿಎಂ ಸಿದ್ದರಾಮಯ್ಯ ಅವರ ಹೆಸರನ್ನು ಬಳಸಿಕೊಂಡು ಶಾಸಕರಾಗಿರುವ ಯತೀಂದ್ರ ಅವರಿಗೆ ಅನುಭವದ ಕೊರತೆಯಿದೆ. ಈಗಲೇ ಅವರಂತಾಗಬೇಡಿ, ನಾನು ಸೇರಿದಂತೆ ಮೂವರು ಆಶ್ರಯ ಸಮಿತಿಗೆ ಸರ್ಕಾರದಿಂದ ನಾಮ ನಿರ್ದೇಶನಗೊಂಡು ಎಂಟು ತಿಂಗಳ ಬಳಿಕ ಸಭೆಯೊಂದನ್ನು ಕರೆದಿದ್ದೀರಿ. ಯಾವುದೋ ನೆಪ ಹೇಳಿ ಬೆಳಿಗ್ಗೆ ನಡೆಯಬೇಕಿದ್ದ ಸಭೆಯನ್ನು ಕಳೆದ ರಾತ್ರಿಯೇ ರದ್ದುಗೊಳಿಸಿರುವ ಕ್ರಮ ಸರಿಯಲ್ಲ. ಸಭೆ ಕರೆದಾಗ ಬರೋಕೆ, ರದ್ದುಗೊಳಿಸಿದಾಗ ಬಾರದಿರಲು ನಾವ್ಯಾರೂ ಕೆಲಸವಿಲ್ಲದೆ ಕುಳಿತುಕೊಂಡಿಲ್ಲ. ಪಟ್ಟಣದಲ್ಲಿ ಸರ್ಕಾರಿ ಭೂಮಿಯ ಕಬಳಿಕೆ, ಅತಿಕ್ರಮಣ ವ್ಯಾಪಕವಾಗಿದ್ದು, ಹಲವು ನಿವೇಶನಗಳ ಹಂಚಿಕೆ ದಶಕಗಳಿಂದಲೂ ನೆನೆಗುದಿಗೆ ಬಿದ್ದಿವೆ. ಇಂತಹ ಮಹತ್ವದ ಸಭೆಯನ್ನ ರದ್ದುಗೊಳಿಸಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಸ್ಥಳೀಯನಾಗಿರುವ ನಾನು ಕೂಡ ಹಿಂದೊಮ್ಮೆ ಶಾಸನ ಸಭೆಗೆ ಆಯ್ಕೆಗೊಂಡಿದ್ದೆ ಎಂಬುದು ನೆನಪಿರಲಿ. ಸರ್ಕಾರ ನಿಮ್ಮನ್ನ(ಮುಖ್ಯಾಧಿಕಾರಿ) ನಿಯೋಜಿಸಿರುವಂತೆಯೇ ನಮ್ಮನ್ನು ಕೂಡ ನಾಮ ನಿರ್ದೇಶಿಸಿದೆ. ಆಶ್ರಯ ಸಮಿತಿ ಸಭೆಯನ್ನ ಶಾಸಕರೇ ರದ್ದುಗೊಳಿಸುವ ಸರ್ವಾಧಿಕಾರಿಯಾದರೆ ನಮ್ಮಗಳ ಅಗತ್ಯವಾದರೂ ಏನಿದೆ. ವಿರೋಧ ಪಕ್ಷದ ನಾಯಕರ ಬೆಂಬಲವಿದೆಯೆಂದು ನೀವು ನಮ್ಮನ್ನ ನಿರ್ಲಕ್ಷಿಸುತ್ತಿದ್ದೀರಿ ಎಂದು ಹೆಚ್.ಆರ್. ಬಸವರಾಜು ಅವರನ್ನು ತರಾಟೆಗೆ ತೆಗೆದುಕೊಂಡರು. ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಹಾಗೂ ಮುಖ್ಯ ಕಾರ್ಯದರ್ಶಿಗಳಿಗೆ ದೂರು ನೀಡುವುದಾಗಿ ಎಚ್ಚರಿಸಿದರು.

ಮುಖ್ಯಾಧಿಕಾರಿ ಹೆಚ್.ಆರ್. ಬಸವರಾಜು ಮಾತನಾಡಿ, ಆಶ್ರಯ ಸಮಿತಿ ಸಭೆಯನ್ನು ನಡೆಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ನೀತಿಯ ಅಧ್ಯಕ್ಷರಾದ ಶಾಸಕರು ಕಾರ್ಯನಿಮಿತ್ತ ಸಭೆಯನ್ನು ಮುಂದೂಡಲು ಸೂಚನೆ ನೀಡಿದ್ದ ಹಿನ್ನೆಲೆಯಲ್ಲಿ ಇಂದಿನ ಸಭೆಯನ್ನು ರದ್ದುಗೊಳಿಸಲಾಗಿದೆ. ಸಮಿತಿಯ ಅಧ್ಯಕ್ಷರ ತೀರ್ಮಾನದಂತೆ ಸಭೆ ರದ್ದಾಗಿದೆಯಷ್ಟೇ, ಮುಂದಿನ ಸಭೆಯ ಬಗ್ಗೆ ತಮ್ಮ ಗಮನಕ್ಕೂ ತರಲಾಗುವುದು ಎಂದು ಸಿ. ರಮೇಶ್ ಅವರಿಗೆ ಮಾಹಿತಿ ನೀಡಿದರು. ವಿಚಾರ ತಿಳಿದ ಪುರಸಭೆ ಅಧ್ಯಕ್ಷ ಎಸ್ ಮದನ ರಾಜ್ ಕೂಡ ಸಭಾಂಗಣಕ್ಕೆ ಆಗಮಿಸಿ ಸಿ.ರಮೇಶ್ ಅವರ ಮನವೊಲಿಸಲು ಪ್ರಯತ್ನಿಸಿದರು.

ಸ್ಥಾಯಿ ಸಮಿತಿ ಅಧ್ಯಕ್ಷ ಅಹಮದ್ ಸಯೀದ್, ಆಶ್ರಯ ಸಮಿತಿ ನಾಮ ನಿರ್ದೇಶಿತ ಸದಸ್ಯರಾದ ಸೈಫುಲ್ಲಾ, ಲಕ್ಷ್ಮಿ, ಹೇಳವರಹುಂಡಿ ಮಲ್ಲೇಶ್, ಮಾಜಿ ಸದಸ್ಯ ಸಿ.ಮಹದೇವ ಹಾಗೂ ಇನ್ನಿತರರು ಹಾಜರಿದ್ದರು.

## ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ



ಮೈಸೂರಿನ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಸದಸ್ಯರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಇತ್ತೀಚೆಗೆ ಹೋಟೆಲ್ ಪೈ ವಿಸ್ತಾದಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು. ಮುಖ್ಯ ಅತಿಥಿಗಳಾಗಿ ಐಎಎಸ್ ಅಧಿಕಾರಿ ಡಾ. ಎಂ.ಆರ್.ರವಿ ಭಾಗವಹಿಸಿದ್ದರು. ಬ್ಯಾಂಕ್ ಅಧ್ಯಕ್ಷ ಆರ್.ಆನಂದ್, ಉಪಾಧ್ಯಕ್ಷ ಆರ್.ಪಿ.ಕೃಷ್ಣಮೂರ್ತಿ, ನಿರ್ದೇಶಕರಾದ ಬಿ.ಆರ್.ನಂದೀಶ್, ಸಿ.ವಿ.ಸೋಮಶೇಖರ್, ಕೆ.ಪ್ರೇಮ್‌ಕುಮಾರ್, ಎ.ಪ್ರಭುಪ್ರಸಾದ್, ಎಂ.ಎನ್.ಮಹೇಶ್, ಶ್ರೀಮತಿ ಎನ್.ಸುಧಾ, ಶ್ರೀಮತಿ ಸಿ.ಎಸ್.ಗಂಗಾಂಬಿಕೆ, ಎನ್.ಕಣ್ಣನ್, ಎನ್.ರಾಘವ, ಶ್ರೀಮತಿ ಎಂ.ಆರ್.ವಿಜಯಲಕ್ಷ್ಮಿ, ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಶ್ರೀಧರ್ ಬಿ.ಕುಲಕರ್ಣಿ ಉಪಸ್ಥಿತರಿದ್ದರು.

## ಆ.20ರಂದು ಡಿ.ದೇವರಾಜ ಅರಸು ಅವರ 107ನೇ ಜನ್ಮದಿನಾಚರಣೆ

ಮೈಸೂರು, ಆ.17– ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಡಿ.ದೇವರಾಜ ಅರಸು ಅವರ 107 ನೇ ಜನ್ಮದಿನಾಚರಣೆ ಆ.20ರಂದು ಬೆಳಗ್ಗೆ 10.30 ಗಂಟೆಗೆ ಕಲಾಮಂದಿರದಲ್ಲಿ ಆಚರಿಸಲಾಗುತ್ತಿದೆ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಸುನಂದಾ ಪಾಲನೇತ್ರ, ಸಂಸದ ಪ್ರತಾಪ್‌ಸಿಂಹ, ವಿಧಾನಸಭೆ ಮತ್ತು ವಿಧಾನಪರಿಷತ್ ಸದಸ್ಯರು, ನಿಗಮ ಮಂಡಳಿಯ ಅಧ್ಯಕ್ಷರು ಹಾಗೂ ಎಲ್ಲಾ ಹಿಂದುಳಿದ ವರ್ಗಗಳ ಸಂಘ ಸಂಸ್ಥೆಯವರು, ಸಾರ್ವಜನಿಕರು ಭಾಗವಹಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಅವರು ತಿಳಿಸಿದ್ದಾರೆ.

## ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಗುಲಾಂನಬಿ ಅಜಾದ್



ನವದೆಹಲಿ, ಆ.17– ಹಿರಿಯ ಕಾಂಗ್ರೆಸ್ ನಾಯಕ ಗುಲಾಂ ನಬಿ ಆಜಾದ್ ಅವರು ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಜಮ್ಮುಕಾಶ್ಮೀರದ ರಾಜಕೀಯ ವ್ಯವಹಾರದ ಸಮಿತಿಗೂ ಗುಲಾಂ ನಬಿ ಅಜಾದ್ ರಾಜೀನಾಮೆ ನೀಡಿದ್ದಾರೆ ಎನ್ನಲಾಗಿದೆ. ಜಮ್ಮು ಕಾಶ್ಮೀರ ಕಾಂಗ್ರೆಸ್ ಸಮಿತಿಯ ಪ್ರಚಾರ ಸಮಿತಿ ಅಧ್ಯಕ್ಷರಾಗಿ ನೇಮಿಸಲಾಗಿತ್ತು. ನೇಮಕಾತಿ ಆದೇಶ ಹೊರಬಿದ್ದ ಕೆಲ ಹೊತ್ತಿನಲ್ಲಿಯೇ ಅವರು ರಾಜೀನಾಮೆ ನೀಡುವ ನಿರ್ಧಾರ ಪ್ರಕಟಿಸಿದರು.

ಆರೋಗ್ಯ ಕಾರಣಗಳಿಂದಾಗಿ ಜಮ್ಮು ಮತ್ತು ಕಾಶ್ಮೀರದ ಪ್ರಚಾರ ಸಮಿತಿ ಅಧ್ಯಕ್ಷ ಸ್ಥಾನವನ್ನು ವಹಿಸಿ ಕೊಳ್ಳಲು ಆಜಾದ್ ನಿರಾಕರಿಸಿದ್ದಾರೆ. ಈ ವಿಚಾರವನ್ನು ಕಾಂಗ್ರೆಸ್ ಹೈಕಮಾಂಡ್ ಗಮನಕ್ಕೆ ತಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.







# ಮಂಡಕಳ್ಳಿಯಲ್ಲಿ ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಆ.17(ಎಂಟಿವೈ)–ಮೈಸೂರು ತಾಲೂಕಿನ ಮಂಡಕಳ್ಳಿ ಸರ್ಕಾರಿ ಶಾಲೆಯ ಆವರಣದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ನೂರಾರು ಮಂದಿ ಗ್ರಾಮಸ್ಥರು ಆರೋಗ್ಯ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆದರು.

ಮೈಸೂರಿನ ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ, ಡಾ. ವಿಷ್ಣುಮೂರ್ತಿ ರೇಖಾ ಟ್ರಸ್ಟ್ ಹಾಗೂ ಕರುಣಾ ಟ್ರಸ್ಟ್ ವತಿಯಿಂದ ಥಾರ್ (Thar) ಯೋಜನೆಯಡಿ ಮಂಡಕಳ್ಳಿ ಸರ್ಕಾರಿ ಶಾಲೆ ಆವರಣದಲ್ಲಿ ನಡೆದ ಆರೋಗ್ಯ ತಪಾಸಣಾ ಶಿಬಿರದಲ್ಲಿ ನೂರಾರು ಮಂದಿ ಗ್ರಾಮಸ್ಥರು ಪಾಲ್ಗೊಂಡು ತಪಾಸಣೆಗೆ ಒಳಗಾದರು.

ಇದೇ ವೇಳೆ ನ್ಯೂರೋಜೋನ್ ಮುಖ್ಯಸ್ಥರಾದ ಡಾ. ಹೆಚ್.ವಿ.ಸುಶ್ರುತ್ ಮಾತನಾಡಿ, ಸೇವಾ ಮನೋಭಾವದ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗುತ್ತಿದೆ. ಡಿಸೆಂಬರ್ ಅಂತ್ಯದ ವೇಳೆಗೆ 10 ಸಾವಿರ ಜನರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸುವ ಗುರಿ ಇಟ್ಟುಕೊಳ್ಳಲಾಗಿದೆ. ಈಗಾಗಲೇ ವೀರಾಜಪೇಟೆ, ಸೋಮವಾರಪೇಟೆ, ಹುಣಸೂರು, ಕಡಕೊಳ, ಸಿಂಧುವಳ್ಳಿ ಸೇರಿದಂತೆ ವಿವಿಧೆಡೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗಿದ್ದು, ಎರಡೂವರೆ ತಿಂಗಳಲ್ಲಿ 1500 ಜನರಿಗೆ ಚಿಕಿತ್ಸೆ ನೀಡಲಾಗಿದೆ. ಅಲ್ಲದೇ ಮುಂದಿನ 1 ವರ್ಷದವರೆಗೆ ರೋಗಿಗಳಿಗೆ ಫೋನ್ ಮಾಡಿ ಆರೋಗ್ಯದ ಬಗ್ಗೆ ವಿಚಾರಿಸಿಕೊಳ್ಳಲಾಗುತ್ತಿದೆ ಎಂದರು.

12 ನುರಿತ ತಜ್ಞ ವೈದ್ಯರು ಸೇರಿದಂತೆ 35 ಜನರ ತಂಡ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಉಚಿತವಾಗಿ ಔಷಧಿಯನ್ನು ನೀಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಮೈಸೂರಿನ 25 ಸ್ಲಂಗಳಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಲಾಗುವುದು ಎಂದು ಹೇಳಿದ ಅವರು ಗ್ರಾಮೀಣ ಭಾಗದ ಜನರಲ್ಲಿ ಬಿ.ಪಿ. ಮತ್ತು ಸಕ್ಕರೆ ಖಾಯಿಲೆ ಹೆಚ್ಚಾಗಿ ಕಂಡುಬರುತ್ತಿದ್ದು, ಜನರು ಉದಾಸೀನ ಮಾಡದೆ ವರ್ಷಕ್ಕೆ ಒಮ್ಮೆಯಾದರೂ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಮಾರ್ಬಳ್ಳಿ ಕುಮಾರ್, ಗೋಪಾಲಗೌಡ ಆಸ್ಪತ್ರೆಯ ನ್ಯೂರೋಜೋನ್‌ನ ಆಡಳಿತಾಧಿಕಾರಿ ಧನ್ಯಾ ಸುಶ್ರೂತ ಹಾಜರಿದ್ದರು.



## ಅಮೆರಿಕಾದಲ್ಲಿ ಭಾರತದ ಸ್ವಾತಂತ್ರ್ಯೋತ್ಸವ ಆಚರಣೆ

ಮೈಸೂರು, ಆ.17(ಎಸ್‌ಪಿಎನ್)– ಅಮೆರಿಕದ ಮೇರಿಲ್ಯಾಂಡ್ ನಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನಲ್ಲಿ ಆ.15ರಂದು 75ನೇ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ಹಿರಿಯ ವಿಜ್ಞಾನಿ ಡಾ.ಪಾಂಡುರಂಗ ರೆಡ್ಡಿ ಧ್ವಜಾರೋಹಣ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಜನ್ಮಭೂಮಿಯಿಂದ ದೂರವಿದ್ದರೂ ಭಾರತೀಯತೆ ನಮ್ಮ ಹೃದಯ ಅಂತರಾಳದಲ್ಲಿದೆ. ನಾವು ಎಂದಿಗೂ ನಮ್ಮ ಸಂಸ್ಕೃತಿ ಹಾಗೂ ದೇಶವನ್ನು ಮರೆಯಲು ಸಾಧ್ಯವಿಲ್ಲ. ಬದುಕು ಕಟ್ಟಿಕೊಳ್ಳಲು ಅನಿವಾರ್ಯವಾಗಿ ಪರದೇಶದಲ್ಲಿ ವಾಸಿಸುತ್ತಿದ್ದೇವೆ. ಆದರೆ ಎಂದಿಗೂ ನಾವು ಭಾರತೀಯರೆ. ನಮ್ಮ ಸಂಸ್ಕೃತಿ ಆಚರಣೆಗಳನ್ನು ನಾವು ಎಂದಿಗೂ ಮರೆಯುವುದಿಲ್ಲ. ಅವೆಲ್ಲವನ್ನು ನಾವಿರುವ ಸ್ಥಳದಲ್ಲೇ ಆಚರಿಸಿ ಉಳಿಸಿ, ಬೆಳೆಸಿಕೊಂಡು ಹೋಗುತ್ತೇವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಮೆರಿಕ ಸೇನೆಯಲ್ಲಿ ಸೇವೆ ಸಲ್ಲಿಸಿದ ಡಿಮಿಟ್ರಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಸುತ್ತಮುತ್ತಲಿನ ಅನಿವಾಸಿ ಭಾರತೀಯರು,



ವಿದ್ಯಾರ್ಥಿಗಳು ಹಾಗೂ ಮಿಷನ್‌ನ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಆಲಮಟ್ಟಿ ಡಾ.ರುದ್ರ ಮುನಿದೇವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

## ನಾಳೆ ಎರಡು ಕೃತಿಗಳ ಬಿಡುಗಡೆ

ಮೈಸೂರು, ಆ.17(ಎಸ್‌ಪಿಎನ್)– ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣೆ ವಿಭಾಗದ 2 ಕೃತಿಗಳ ಲೋಕಾರ್ಪಣೆ ಮತ್ತು ಪ್ರಶಸ್ತಿಗಳ ಪ್ರದಾನ ಸಮಾರಂಭವನ್ನು ಆ.19ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಸಾಪ ಅಧ್ಯಕ್ಷ ಡಾ. ಮಹೇಶ್ ಜೋಷಿ ಪ್ರಶಸ್ತಿಗಳನ್ನು ಪ್ರದಾನ ಮಾಡುವರು. ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ. ಸತೀಶಕುಮಾರ ಎಸ್. ಹೊಸಮನಿ ಅವರು, ಜೆಎಸ್‌ಎಸ್ ಗ್ರಂಥಮಾಲೆಯಿಂದ ಪ್ರಕಟವಾಗಿರುವ 'The Heritage of Suttur Math' ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯ ಹಾಗೂ ಕಲಾವಿದ ಎಂ.ಸಿ. ಮಹದೇವಸ್ವಾಮಿ ಅವರ ಕೃತಿಗಳನ್ನು ಬಿಡುಗಡೆಗೊಳ್ಳಲಿದೆ. 2020ನೇ ಸಾಲಿನ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ' ಹಾಗೂ 2021ನೇ ಸಾಲಿನ 'ಎಂ.ವೀರಪ್ಪ ದತ್ತಿ ಪ್ರಶಸ್ತಿ' ಹಾಗೂ 'ಡಿ.ವಿ.ಹಾಲಭಾವಿ' ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದು ಕಾರ್ಯನಿರ್ವಾಹಕ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ಅಗತ್ಯವಿದ್ದಲ್ಲಿ ಮೊ:97312–54484/99009–53152 ಅನ್ನು ಸಂಪರ್ಕಿಸಬಹುದು.



# ಸರ್ಕಾರ ಮುಡಾ ಅಧ್ಯಕ್ಷ ಸ್ಥಾನ ಹರಾಜಿಗೆ ಇಟ್ಟಿದೆ: ಕಾಂಗ್ರೆಸ್ ಆರೋಪ

ಮೈಸೂರು, ಆ.17(ಜಿಎ)– ಸರ್ಕಾರ ಮುಡಾ ಅಧ್ಯಕ್ಷ ಸ್ಥಾನವನ್ನು ಹರಾಜಿಗೆ ಇಟ್ಟಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ರಾಜ್ಯ ಸರ್ಕಾರ ವಿರುದ್ಧ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದ್ದು, ಇದಕ್ಕೆ ಸಚಿವ ಮಾಧುಸ್ವಾಮಿ ಅವರ ಆಡಿಯೋ ಸಾಕ್ಷಿಯಾಗಿದೆ. ಸಿಎಂ ಬೊಮ್ಮಾಯಿ ಸುಮ್ಮನೇ ಸರ್ಕಾರವನ್ನು ಮೇನ್ಟೈನ್ ಮಾಡುತ್ತಿದ್ದಾರೆ ಅಷ್ಟೇ ಎಂದು ಲೇವಡಿ ಮಾಡಿದರು. ರಾಜ್ಯದ 17 ಜಿಲ್ಲೆಗಳಲ್ಲಿ ಮಳೆ ಹಾನಿಯಾಗಿದೆ. ಎಷ್ಟು ಕಡೆ ಬೊಮ್ಮಾಯಿ ಅವರೇ ಭೇಟಿ ನೀಡಿದ್ದೀರಿ? ಜನರ ಕಷ್ಟ ಸುಖ ಕೇಳಿಲ್ಲ. ನಿಮ್ಮ ಅಧಿಕಾರ ಅವಧಿಯಲ್ಲಿ ನಿಮ್ಮ ಯೋಜನೆಗಳೇನು..? ನೀವು ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಸಾಲ ಮಾಡಿದ್ದೀರಿ ಹೇಳಿ.? ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರ ಕಾರ್ಯವೈಖರಿಯನ್ನು ಪ್ರಶ್ನಿಸಿದ ಅವರು, ರಾಜ್ಯದಲ್ಲಿ ಈವರೆಗೂ ಸಾಲದ ಮೊತ್ತ 5 ಲಕ್ಷದ 77 ಸಾವಿರ ಕೋಟಿ ರೂ., ಗೆ ತಲುಪಿದೆ. ಬಿಜೆಪಿ ಬಂದ ಮೇಲೆ 2.5 ಲಕ್ಷ ಕೋಟಿ ಮಾಡಿದೆ. ಇದನ್ನು ನೋಡಿದರೆ ತಿಳಿಯುತ್ತಿದೆ ಸರ್ಕಾರ ತೆವಳ್ತಾ ಇದೆ ಎನ್ನುವ ಮಾಧುಸ್ವಾಮಿ ಅವರ ಹೇಳಿಕೆ ನೂರಕ್ಕೆ ನೂರು ಸತ್ಯ ಎಂದರು. ಸದ್ಯಕ್ಕೆ ಕಾಂಗ್ರೆಸ್‌ಗೆ ಬಿಜೆಪಿಯಿಂದ 9, ಜೆಡಿಎಸ್‌ನಿಂದ 11 ಮುಖಂಡರು ಬರಲು ರೆಡಿಯಾಗಿದ್ದಾರೆ. ಅವರ ಹೆಸರುಗಳು ನನಗೆ ಗೊತ್ತು ಕಾಲ ಬಂದಾಗ ತಿಳಿಸುತ್ತೇನೆ ಎಂದು ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಹೇಳಿದರು. ಇದೇ ವೇಳೆ ಮುಡಾ ಅಧ್ಯಕ್ಷ ಸ್ಥಾನವನ್ನು ಹರಾಜಿಗೆ ಇಟ್ಟಿದ್ದಾರೆ ಎಂದು ಆರೋಪಿಸಿದ ಅವರು, ಎಲ್ಲಾ ನಿಗಮ ಮಂಡಳಿಗಳಿಗೂ ಅಧ್ಯಕ್ಷರನ್ನು ನೇಮಕ ಮಾಡಿದ್ದಾರೆ. ಆದರೆ ಮುಡಾ ಅಧ್ಯಕ್ಷ ಸ್ಥಾನ ಮಾತ್ರ ಬಾಕಿ ಉಳಿಸಿಕೊಂಡಿದ್ದಾರೆ. ಯಾರೋ ಒಬ್ಬರು 10 ಕೋಟಿ



ರೂ. ಕೊಡಲು ಒಪ್ಪಿದ್ದರು. ಅವರಿಗೂ ಕೊಡಲಿಲ್ಲ. ಹಿಂದಿನ ಅಧ್ಯಕ್ಷ ರಿಗೆ ಮತ್ತೆ 6 ತಿಂಗಳು ಮುಂದುವರಿಯಲು ಡಿಮಾಂಡ್ ಇಟ್ಟಿದ್ದಾರೆ. ಈ ಹಿಂದಿನ ಅಧ್ಯಕ್ಷರು ಒಬ್ಬನೇ ಒಬ್ಬ ವ್ಯಕ್ತಿಗೆ ಒಂದು ಸೈಟು ಅಥವಾ ಮನೆ ಕೊಟ್ಟಿಲ್ಲ. ಅವರ ಸೈಟುಗಳನ್ನು ಭದ್ರಪಡಿಸಿಕೊಂಡಿದ್ದಾರೆ. ಮೈಸೂರಿನ ರಸ್ತೆಗಳು ಗುಂಡಿ ಬಿದ್ದಿವೆ. ವಾಹನ ಸವಾರರು ಓಡಾಡುವುದೇ ಕಷ್ಟವಾಗಿದೆ. ಸಚಿವರು ವಾರಕ್ಕೊಮ್ಮೆ ಬಂದು ಹೋಗುತ್ತಾರೆ ಎಂದು ಎಂ. ಲಕ್ಷ್ಮಣ್ ಕಿಡಿಕಾರಿದ್ದಾರೆ. ನಿನ್ನೆ ಹುಬ್ಬಳ್ಳಿಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ ಕುರಿತಾಗಿ ಏಕವಚನದಲ್ಲಿ ವಾಗ್ದಾಳಿ ನಡೆಸಿದ್ದ ಎಸ್.ಆರ್ ಹೀರೇಮಠ ವಿರುದ್ಧ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ತೀವ್ರ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಮುಖಂಡರಾದ ಶಿವಣ್ಣ, ಬಿ. ರಾಮು ಇದ್ದರು.



ಕರ್ನಾಟಕ ಸರ್ಕಾರ

## ಜಯಪುರ ಗ್ರಾಮ ಪಂಚಾಯಿತಿ ಕಾರ್ಯಾಲಯ

ಜಯಪುರ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ

### ಕೆರೆಗಳ ಮೀನು ಪಾಶುವಾರು ಹಕ್ಕಿನ ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಮೈಸೂರು ತಾಲ್ಲೂಕು ಜಯಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಜಯಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಈ ಕೆಳಕಂಡ ಕೆರೆಗಳ ಮೀನು ಪಾಶುವಾರು ಹಕ್ಕನ್ನು, ಹರಾಜು ದಿನದಿಂದ 2024–2025 ಜೂನ್ ಅಂತ್ಯಕ್ಕೆ (ಮೂರು ವರ್ಷಗಳಿಗೆ ಮಾತ್ರ) ನಿಗಧಿ ಮಾಡಿ ಹರಾಜು ಮಾಡುವಂತೆ ಜಯಪುರ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ದಿ: 16–07–2022 ರ ರೀತ್ಯಾ ತೀರ್ಮಾನ ಕೈಗೊಂಡಿರುತ್ತದೆ. ಆಸಕ್ತಿಯುಳ್ಳವರು ಕೆರೆಗಳ ಮೀನು ಪಾಶುವಾರು ಹಕ್ಕನ್ನು, ಪಡೆದು ಮಾತ್ಯ ಪಾಲನೆ ಮೂಲಕ ಲಾಭವನ್ನು ಪಡೆಯಬಹುದಾಗಿರುತ್ತದೆ.

ವಿಲೇವಾರಿ ಮಾಡಬೇಕಾದ ಕೆರೆಗಳ ವಿವರ

| ಕ್ರ.ಸಂ. | ಗ್ರಾಮ / ಎಲ್ಲೆ | ಕೆರೆ ಮತ್ತು ಕಟ್ಟೆಯ ಹೆಸರು | ಠೇವಣಿ ಹಣ (ರೂ.ಗಳಲ್ಲಿ) | ಸ.ನಂ. | ವಿಸ್ತೀರ್ಣ |
|---|---|---|---|---|---|
| 1 | ದಾರಿಪುರ | ಕಬ್ಬೆಕಟ್ಟೆ / ಕೆರೆ | 20000 | 51 | 4.18 |
| 2 | ದಾರಿಪುರ | ಈರೇಗೌಡ ಕಟ್ಟೆ / ಕೆರೆ | 10000 | 109 | 1.37 |
| 3 | ಬರಡನಪುರ | ಸರ್ಕಾರಿ ಕೆರೆ (ಬಣ್ಣದ ಕೆರೆ) | 20000 | 58 | 5.24 |
| 4 | ಬರಡನಪುರ | ಮುಗಳಕೆರೆ | 20000 | 33 | 5.24 |
| 5 | ಮಾವಿನಹಳ್ಳಿ | ಕುರಿಮಂಡಿ ಕೆರೆ | 20000 | 63 | 8.36 |
| 6 | ಮಾವಿನಹಳ್ಳಿ | ಚಿಕ್ಕನಹಳ್ಳಿ ಕೆರೆ | 25000 | 54 | 13.22 |
| 7 | ಮಾವಿನಹಳ್ಳಿ | ಕಾಡುಕಟ್ಟೆ / ಕೆರೆ | 25000 | 132 | 14.00 |
| 8 | ಕೆಲ್ಲಹಳ್ಳಿ | ಊರಮುಂದಿನ ಕೆರೆ | 25000 | 54 | 16.15 |
| 9 | ಕೆಲ್ಲಹಳ್ಳಿ | ಮಲ್ಲಪ್ಪನ ಕಟ್ಟೆ | 15000 | 140 | 7.07 |
| 10 | ಜಯಪುರ | ಕೆಗ್ಗೆರೆ | 30000 | 18 | 23.20 |
| 11 | ಜಯಪುರ | ಹೊಸಕೆರೆ | 30000 | 136 | 31.34 |

ಹರಾಜು ದಿನಾಂಕ: 26–08–2022ನೇ ಶುಕ್ರವಾರ ಸಮಯ ಬೆಳಿಗ್ಗೆ 11 ಗಂಟೆಯಿಂದ
ಸ್ಥಳ: ಜಯಪುರ ಗ್ರಾಮ ಪಂಚಾಯಿತಿ ಕಟ್ಟಡ (ರಾ.ಸೇ.ಕೇಂದ್ರ)

- * ನಿಬಂಧನೆಗಳಿಗೆ ಒಳಪಟ್ಟಿರುತ್ತದೆ
- * ಹೆಚ್ಚಿನ ಮಾಹಿತಿಗಾಗಿ ಜಯಪುರ ಗ್ರಾಮ ಪಂಚಾಯಿತಿ ಕಾರ್ಯಾಲಯವನ್ನು ಕಾರ್ಯಾಲಯದ ಅವಧಿಯಲ್ಲಿ ಸಂಪರ್ಕಿಸಿ.

| | | | | |
|---|---|---|---|---|
| ಸಹಿ/– | ಸಹಿ/– | ಸಹಿ/– | ಸಹಿ/– | ಸಹಿ/– |
| ಶ್ರೀಮತಿ ಮಹಾದೇವಿ ಹೆಚ್.ಎನ್. | ಶ್ರೀ ಭೈರೇಶ್ | ಸಿದ್ದಲಿಂಗು | ಶ್ರೀ ಬಸವಣ್ಣ | ಶ್ರೀ ಎಂ. ಪ್ರಿಯಾಗಣಪತಿ |
| ಅಧ್ಯಕ್ಷರು | ಉಪಾಧ್ಯಕ್ಷರು | ಸಹಾಯಕ ನಿರ್ದೇಶಕರು | ಪಿ.ಡಿ.ಓ | ಮೀನುಗಾರಿಕಾ ಸಹಾಯಕ |
| ಜಯಪುರ ಗ್ರಾ.ಪಂ. | ಜಯಪುರ ಗ್ರಾ.ಪಂ. | ಸಮಾಜ ಕಲ್ಯಾಣ ಇಲಾಖೆ | ಜಯಪುರ ಗ್ರಾ.ಪಂ. | ನಿರ್ದೇಶಕರು, ಮೈಸೂರು ತಾಲ್ಲೂಕು |

ಸರ್ವ ಸದಸ್ಯರುಗಳು ಹಾಗೂ ಸಿಬ್ಬಂದಿ ವರ್ಗ ಗ್ರಾಮ ಪಂಚಾಯಿತಿ ಜಯಪುರ
ಸಭೆಗೆ ಮಾಸ್ಕ್ ಧರಿಸಿ ಬರುವುದು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿದೆ.